ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 3 ಸಂಚಿಕೆ 16

ಏಪ್ರಿಲ್ 19, 2009

ರೂ. 5/-



ಕರಾವಳಿ: ತೆಂಗಿನ ತವರಲ್ಲಿ ವಿಷ ವೃಕ್ಷ ಬೆಳೆದವರು

ದಕ್ಷಿಣ ಕನ್ನಡ : ನಿರುದ್ಯೋಗ... ಆದಾಯ ಕುಸಿತ... ನಿಜ ಚಿತ್ರ....

ಹೊಣೆಗೇಡಿ ಕಾಂಗ್ರೆಸ್ ವಿರೋಧಪಕ್ಷವಾಗಿಯೂ ವಿಫಲ

ಬಳ್ಳಾರಿ ಲೋಕಸಭಾ ಕ್ಷೇತ್ರ : ಸರ್ವಾಧಿಕಾರ V/s ಜನರ ಹಕ್ಕು






ಬಿಜೆಪಿಯಲ್ಲಿ ಅಲೆಮಾರಿಗಳ ಅಲೆ ಪಕ್ಷಾಂತರಿಗಳಿಗೆ ಭಾರಿ ಬೆಲೆ



ಕಾರ್ಮಿಕ ನೇತಾರ ಬಿ.ಮಾಧವರ ಸ್ಪರ್ಧೆ

ಹಿಂದುತ್ವವಾದಿಗಳು ತಮ್ಮ ಪ್ರಯೋಗಶಾಲೆಯನ್ನಾಗಿ ಆಯ್ಕೆ ಮಾಡಿಕೊಂಡಿರುವ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಕಾರ್ಮಿಕರ ನೇತಾರ, ಕಮ್ಯೂನಿಸ್ಟ್ ಮುಖಂಡ ಬಿ.ಮಾಧವ ಸಿಪಿಐ(ಎಂ) ಅಭ್ಯರ್ಥಿಯಾಗಿದ್ದಾರೆ. ಜನಜೀವನದ ನೈಜ ಪ್ರಶ್ನೆಗಳನ್ನು ಮುಂದೆ ಮಾಡಲು ಶ್ರಮಿಸುತ್ತಿರುವ ಬಿ.ಮಾಧವರ ಕಿರು ಪರಿಚಯ ಇಲ್ಲಿದೆ.



ಸಿಪಿಐ(ಎಂ) ಅಭ್ಯರ್ಥಿಯ ಪರಿಚಯ

ಹೆಸರು : ಬಿ.ಮಾಧವ

ವಿದ್ಯಾರ್ಹತೆ : ಎಂ.ಎ., ಎಲ್‌ಎಲ್‌ಬಿ.,

ರಾಜಕೀಯ ಪಕ್ಷದಲ್ಲಿ :

1970ರಲ್ಲಿ ಸಿಪಿಐ(ಎಂ) ಪಕ್ಷದ ಸದಸ್ಯನಾಗಿ ಸೇರ್ಪಡೆ, ಪ್ರಸ್ತುತ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ, ಕಳೆದ 11 ವರ್ಷಗಳಿಂದ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರು.

ಕಾರ್ಮಿಕರಂಗದಲ್ಲಿ

ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷರು(2002ರಿಂದ) (2) ಬೀಡಿ ಕಾರ್ಮಿಕರ ಅಖಿಲ ಭಾರತ ಒಕ್ಕೂಟದ ಕಾರ್ಯಾಧ್ಯಕ್ಷರು, ರಾಜ್ಯ ಒಕ್ಕೂಟದ ಅಧ್ಯಕ್ಷರು, (3) ಕಟ್ಟಡ ಕಾರ್ಮಿಕರ ಅಖಿಲ ಭಾರತ ಒಕ್ಕೂಟದ ಉಪಾಧ್ಯಕ್ಷರು, ರಾಜ್ಯ ಒಕ್ಕೂಟದ ಅಧ್ಯಕ್ಷರು, ಕಳೆದ ಅವಧಿಯಲ್ಲಿ ಕೇಂದ್ರ ಕಾರ್ಮಿಕ ಇಲಾಖೆಯ ಬೀಡಿ ಕಾರ್ಮಿಕರ ಕಲ್ಯಾಣ ಮಂಡಳಿಯ ಕೇಂದ್ರ ಸಲಹಾ ಸಮಿತಿಯ ಸದಸ್ಯರಾಗಿ ದುಡಿದ ಇವರು ಬೀಡಿ ಕಾರ್ಮಿಕರಿಗೆ ಕಲ್ಯಾಣ ಮಂಡಳಿಯಿಂದ ವಿವಿಧ ಸವಲತ್ತುಗಳನ್ನು ತ್ವರಿತವಾಗಿ ದೊರಕಿಸಿ ಕೊಡುವುದರಲ್ಲಿ ಶ್ಲಾಘನೀಯ ಪಾತ್ರ ವಹಿಸಿದ್ದರು.

ದ.ಕ.ಜಿಲ್ಲೆಯಲ್ಲಿ ಸಾಮೂಹಿಕ ಸಂಘಟನೆಗಳ ಐಕ್ಯ ಚಳುವಳಿಗಳ ಸಂಘಟಕರು. 1983 ರಿಂದ ದ.ಕ.ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಸಂಚಾಲಕರು, ಕಾರ್ಮಿಕ, ರೈತ, ವಿದ್ಯಾರ್ಥಿ, ಯುವಜನರನ್ನೊಳ ಗೊಂಡ ದ.ಕ. ಜಿಲ್ಲಾ ಸಾಮೂಹಿಕ ಸಂಘಟನೆಗಳ ವೇದಿಕೆಯ ಸಂಚಾಲಕರು.

1961 ರಿಂದ 1996 ವರೆಗೆ ಎಲ್ಲೈಸಿ ನೌಕರರಾಗಿದ್ದ ಇವರು ವಿಮಾ ನೌಕರರ ಸಂಘ, ಉಡುಪಿ ವಿಭಾಗದ ಅಧ್ಯಕ್ಷರಾಗಿ, ದಕ್ಷಿಣ ವಲಯ ವಿಮಾ ನೌಕರರ ಫೆಡರೇಷನ್ನಿನ ಉಪಾಧ್ಯಕ್ಷರಾಗಿ, ಅ.ಭಾ. ವಿಮಾ ನೌಕರರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ದುಡಿದಿದ್ದರು. 1997 ಜನವರಿಯಲ್ಲಿ ಸಿಪಿಐ(ಎಂ) ಪಕ್ಷದ ಪೂರ್ಣಕಾಲ ಕಾರ್ಯಕರ್ತನಾಗುವ ಸಲುವಾಗಿ ಎಲ್ಲೈಸಿಯ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದರು.

ಸಾಹಿತ್ಯ ಮತ್ತು ಸಾಂಸತಿಕ ರಂಗದಲ್ಲಿ

ಲೇಖಕರೂ, ಭಾಷಾಂತರಕಾರರೂ ಆಗಿರುವ ಇವರು ಇಂಗ್ಲೀಷ್ ಮತ್ತು ಮಲಯಾಳಂ ಭಾಷೆಗಳಿಂದ ಅನೇಕ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರು ಅನುವಾದಿಸಿದ ದಿವಂಗತ ಎ.ಕೆ.ಗೋಪಾಲನ್ ಅವರ ಜೀವನ ಚರಿತ್ರೆ 'ನನ್ನ ಜೀವನದ ಕಥೆ' ಅಪಾರ ಜನ ಮೆಚ್ಚುಗೆ ಪಡೆದು ಎರಡನೇ ಮುದ್ರಣವನ್ನು ಕಂಡಿದೆ. ಉತ್ತಮ ವಾಗ್ಮಿಯಾಗಿರುವ ಇವರು ಕನ್ನಡ, ಇಂಗ್ಲಿಷ್, ಹಿಂದಿ, ತುಳು ಮತ್ತು ಮಲಯಾಳಂ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡ ಬಲ್ಲರು. ಎಡ ಚಳುವಳಿಯ ರಾಷ್ಟ್ರೀಯ ನಾಯಕರು ರಾಜ್ಯ[...] ನೀಡಿದ ಸಂದರ್ಭಗಳಲ್ಲಿ ಅವರ ಇಂಗ್ಲಿಷ್ ಮತ್ತು ಮಲಯಾಳಂ ಭಾಷಣಗಳನ್ನು ಅಚ[...] ಕನ್ನಡ ಅಥವಾ ತುಳು ಭಾಷೆಗೆ ಭಾ[...] ಮಾಡುವುದರಲ್ಲಿ ಇವರು ಮೆಚ್ಚುಗೆಗೆ ಪಾತ್ರರಾ[...] ಉಡುಪಿಯಲ್ಲಿ ಜರುಗಿದ 74ನೇ ಕನ್ನಡ ಸಮ್ಮೇಳನದಲ್ಲಿ ಅತಿಥಿಯಾಗಿ ಇವರು ಮ[...] 'ಕರಾವಳಿಯ ಇತ್ತೀಚಿನ ಸಾಮಾಜಿಕ ಸ್ಥಿತ್ಯಂ[...] ಎಂಬ ಪ್ರಬಂಧವು ತುಂಬಾ ಮೆಚ್ಚುಗೆ ಪಡ[...]

'ಸಮುದಾಯ' ಸಾಂಸತಿಕ ಸಂಘ[...] ಸ್ಥಾಪಕರಲ್ಲಿ ಒಬ್ಬರಾದ ಇವರು ಸಾ[...] ರಂಗದಲ್ಲೂ ಸಾಕಷ್ಟು ದುಡಿದಿದ್ದಾರೆ.

ವಿದೇಶ ಪ್ರವಾಸಗಳು:

1988 ರಲ್ಲಿ ಅಂದಿನ ಸೋವಿಯತ್ ಒ[...] ಕಾರ್ಮಿಕ ಸಂಘಟನೆಯ ಆಮಂತ್ರಣದ ಮೇ[...] ವಾರಗಳ ಶೈಕ್ಷಣಿಕ ಪ್ರವಾಸ ಕೈಗೊಂಡಿದ್ದ[...] ಸಂದರ್ಭದಲ್ಲಿ ಮಾಸ್ಕೋ, ತಾಷ್[...] ಸಮರ್‌ಖಂಡ್ ಮೊದಲಾದ ನಗರಗಳಲ್ಲಿ[...] ಪ್ರವಾಸಗಳಲ್ಲಿ ಮತ್ತು ಶೈಕ್ಷಣಿಕ ಶಿಬಿ[...] ಭಾಗವಹಿಸಿದ್ದರು.

2006ರಲ್ಲಿ ಜಪಾನಿನ ಟೋಕಿಯೋದಲ್ಲಿ[...] ಏಷ್ಯಾ ಪೆಸಿಫಿಕ್ ಪ್ರದೇಶದ ಕಟ್ಟಡ ಕಾ[...] ನಾಲ್ಕನೇ ವಿಚಾರಗೋಷ್ಠಿಯಲ್ಲಿ ಭಾಗ[...] ಜಾಗತೀಕರಣದಿಂದ ಕಟ್ಟಡ ನಿರ್ಮಾಣ ಕೈಗಾ[...] ಮೇಲೆ ಆಗುತ್ತಿರುವ ಪರಿಣಾಮಗಳ ಕುರಿತು [...] ಮಂಡಿಸಿದ್ದರು. ಪಕ್ಷದ ಕಾರ್ಯಕರ್ತರಿಗೆ ಸೈ[...] ತರಬೇತಿ ನೀಡುವ ಶಿಕ್ಷಕರಾಗಿಯೂ ದುಡಿಯುತ್ತಿದ್ದಾರೆ.

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1. Place of Publication	:	# 12, 18th Cross, S.R.Nagar, Bangalore - 560 027 (Karnataka)
2. Periodicity of Publication	:	Weekly
3. Printer's Name	:	G.N.Nagaraj
(Whether Citizen of India? If Foreigner, State the Country of Origin)	:	Indian
4. Address	:	# 12, 18th Cross, S.R.Nagar, Bangalore - 560 027, (Karnataka)
5. Editor's Name	:	S.Y. Gurushanth
(Whether Citizen of India? If Foreigner, State the Country of Origin)	:	Indian
Address	:	# 12, 18th Cross, S.R.Nagar, Bangalore - 560 027, (Karnataka)
6. Name and address of Individuals who own the Newspaper and partners or Shareholders holding more than one percent of the Notal capital :		Communist Party of India(Marxist) Karnataka State Committee, # 12, 18th Cross, S.R.Nagar, Bangalore - 560 027, (Karnataka)

I G.N. Nagaraj, hereby declare that the particulars given above are true to the best of my knowledge and belief.


Date : 31 March 2009
Bangalore


Sd/-
G.N.Nagaraj
Publisher

ಹಿಂದೂ ರಾಷ್ಟ್ರ ಮತ್ತು ಭಯೋತ್ಪಾದನೆ ಎರಡೂ ವಿಚಾರಗಳೂ ಈಗ ಭಾರಿ ಚರ್ಚೆಗೊಳಗಾಗಿ[...] ವಿಷಯಗಳು. ಕ್ರಿಯಾ ಪ್ರಕಾಶನ ಈ ಎರಡೂ ವಿಚಾರಗಳ ಕುರಿತು ಉತ್ತಮ ವಿಶ್ಲೇಷಣೆ ನೀ[...] ಪುಸ್ತಕಗಳನ್ನು ಹೊರತಂದಿದೆ.

1. ಏನಿದು ಈ ಹಿಂದೂ ರಾಷ್ಟ್ರ - ಸೀತಾರಾಂ ಯೆಚೂರಿ ಬೆಲೆ: ರೂ. 2[...]

2. ಭಯೋತ್ಪಾದನೆ...... - ಕೆ.ಪ್ರಕಾಶ್ ಬೆಲೆ: ರೂ. 2[...]





ಸ್ವಾದಕೀಯ

...ನ ಹೋರಾಟಗಳನ್ನು ದಮನ ...ಮಾಡುವವರನ್ನು ತಿರಸ್ಕರಿಸಿ


...ದೊಂದು ಮಹಾನ್ ಪ್ರಜಾಪ್ರಭುತ್ವ. ಬ್ರಿಟಿಷ್ ವಸಾಹತುಶಾಹಿಗಳ ...ದ್ಧದ ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಉದಯವಾದ ...ಪ್ರಭುತ್ವವಿದು. ನಮ್ಮ ಪ್ರಜಾಪ್ರಭುತ್ವದಲ್ಲಿ ನ್ಯೂನ್ಯತೆಗಳು ಇಲ್ಲವೆಂದಲ್ಲ. ...ಇನ್ನೂ ಅರ್ಥಪೂರ್ಣವಾಗಬೇಕಾಗಿದೆ. ಬಲಿಷ್ಠವಾಗಬೇಕಾಗಿದೆ. ಅದರ ...ವಣಿಗೆ ಜನರ ಪಾಲ್ಗೊಳ್ಳುವಿಕೆಯನ್ನು ಅವಲಂಭಿಸಿದೆ. ಒಂದು ...ಪ್ರಭುತ್ವದಲ್ಲಿ ಜನತೆ ತಮ್ಮ ಸಂವಿಧಾನಬದ್ಧ ಕರ್ತವ್ಯಗಳನ್ನು ...ಹಿಸುತ್ತಾ ಸಂವಿಧಾನಬದ್ಧ ಹಕ್ಕುಗಳ ಬಗ್ಗೆ ಸದಾ ಜಾಗೃತರಾಗಿದ್ದು ಅವುಗಳ ...ಷ್ಠಾನಕ್ಕಾಗಿ ಸಂಘಟಿತವಾದ ಹೋರಾಟಗಳನ್ನು ನಡೆಸುತ್ತಿರಬೇಕು.

...ದರೆ ಭೂಮಾಲಕ, ಬಂಡವಾಳಶಾಹಿ ರಾಜಕೀಯ ಪಕ್ಷಗಳು ಜನರು ... ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟಗಳನ್ನು ...ಸುವುದಿಲ್ಲ. ಪೊಲೀಸು, ಕೋರ್ಟು, ಜೈಲುಗಳನ್ನು ಬಳಸಿ ಜನ ...ವಳಿಗಳನ್ನು ದಮನ ಮಾಡಲು ಪ್ರಯತ್ನಿಸುತ್ತವೆ. ಪ್ರಜಾಸತ್ತಾತ್ಮಕ ...ಳಿಗೆ ಅವಕಾಶ ಕಲ್ಪಿಸುವ ಕಾನೂನುಗಳನ್ನು ರಚಿಸುವುದಿಲ್ಲ. ...ಪ್ರಭುತ್ವದ ಉಳಿವಿಗಾಗಿ ಇಂತಹ ಧೋರಣೆಗಳನ್ನು ಹೊಂದಿರುವ ...ಕೀಯ ಪಕ್ಷಗಳನ್ನು ಜನತೆ ತಿರಸ್ಕರಿಸಬೇಕಾಗಿದೆ.

...ತ್ತೀಚೆಗೆ ಕೆಲವು ರಾಜ್ಯಗಳ ಉಚ್ಚ ನ್ಯಾಯಾಲಯಗಳು ಹಾಗೂ ಸರ್ವೋಚ್ಚ ...ಯಾಲಯವು ಮುಷ್ಕರಗಳನ್ನು ನಿಷೇಧಿಸುವ, ಮೆರವಣಿಗೆ, ...ಪ್ರದರ್ಶನಗಳನ್ನು ತಡೆಯುವ ತೀರ್ಪುಗಳನ್ನು ನೀಡಿವೆ. ಇಂತಹ ...ಗಳನ್ನು ಅನೂರ್ಜಿತಗೊಳಿಸಲು ಅಗತ್ಯ ಶಾಸನವನ್ನು ರೂಪಿಸುವಂತೆ ...ದ್ರ ಸರ್ಕಾರದ ಮೇಲೆ ಒತ್ತಾಯ ವ್ಯಕ್ತವಾಗಿದ್ದರೂ ಕೇಂದ್ರದ ಕಾಂಗ್ರೆಸ್ ...ತ್ವದ ಯುಪಿಎ ಸರ್ಕಾರ ಆ ದಿಕ್ಕಿನಲ್ಲಿ ಹೆಜ್ಜೆಯಿಡಲು ವಿಫಲವಾಗಿದೆ. ...ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರ್ಕಾರವೂ ಸಹ ಜನ ...ವಳಿಗಳನ್ನು ಪೊಲೀಸರ ಮೂಲಕ ದಮನ ಮಾಡುವ ಪ್ರವೃತ್ತಿಯನ್ನು ...ದಿದ್ದು ಬೀಜ, ರಸಗೊಬ್ಬರ ಪೂರೈಕೆಯನ್ನು ಒತ್ತಾಯಿಸಿ ರಾಜ್ಯದ ಹಲವೆಡೆ ... ರೈತರ ಚಳುವಳಿಯನ್ನು ಲಾಠಿ ಪ್ರಹಾರದ ಮೂಲಕ ಹತ್ತಿಕ್ಕುವ ಪ್ರಯತ್ನ ...ಡಲಾಯಿತು. ಹಾವೇರಿಯಲ್ಲಿ ಪೊಲೀಸರಿಂದ ಗೋಲಿಬಾರ್ ಮಾಡಿಸಿ ...ರೈತರನ್ನು ಕೊಲ್ಲಲಾಯಿತು. ಮಂಗಳೂರು ನಗರ ಪಾಲಿಕೆಯು ನೀರಿನ ...ದರ ಏರಿಕೆ ಕ್ರಮವನ್ನು ವಿರೋಧಿಸಿ ಧರಣಿ ನಡೆಸುತ್ತಿದ್ದ ಸಿಪಿಐ(ಎಂ) ...ಕಾರ್ಯಕರ್ತರ ಮೇಲೆ ಪೊಲೀಸರು ಅಮಾನುಷವಾಗಿ ಲಾಠಿಪ್ರಹಾರ ಮಾಡಿ, ...ಮಹಿಳೆಯರನ್ನು ಬಿಡದೆ ಬೆನ್ನಟ್ಟಿ ಹೊಡೆದು ಗಾಯಗೊಳಿಸಿದ್ದಾರೆ. 2008 ರ ...ಸ್ಟ್ 20 ರಂದು ನಡೆದ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದ್ದ ವಿವಿಧ ...ಸಂಘಟನೆಗಳ ಕಾರ್ಯಕರ್ತರನ್ನು ಅನೇಕ ಕಡೆ ಬಂಧಿಸಿ ಅವರ ವಿರುದ್ಧ ...ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿದ್ದಾರೆ. ತಮ್ಮ ಕೃಷಿಭೂಮಿಯನ್ನು ...ಸ್ಥಾನ ನಿಲ್ದಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳುವುದನ್ನು ವಿರೋಧಿಸಿ ...ಹರಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಲಾಠಿ ಪ್ರಹಾರ ಮಾಡಿ ...ರಿಸಲಾಗಿದೆ.

...ಜನಚಳುವಳಿಗಳನ್ನು ದಮನ ಮಾಡುವ ಪ್ರವೃತ್ತಿ ಇರುವ ರಾಜಕೀಯ ...ಗಳನ್ನು ತಿರಸ್ಕರಿಸುವುದೇ ಈಗ ಉಳಿದಿರುವ ದಾರಿ. ಸರ್ಕಾರಿ ನೌಕರರೂ ...ದಂತೆ ಎಲ್ಲ ಕಾರ್ಮಿಕರಿಗೆ ಹಾಗೂ ಇತರ ದುಡಿಯುವ ಜನವಿಭಾಗಗಳಿಗೆ ...ಘಟನೆಯಾಗುವ, ಸಾಮೂಹಿಕ ಚೌಕಾಸಿ ನಡೆಸುವ ಹಾಗೂ ಮುಷ್ಕರ ...ಡುವ ಹಕ್ಕಿದೆ. ಸರ್ಕಾರಿ ನೌಕರರಿಗೆ ಆಡಳಿತಾತ್ಮಕ ಜವಾಬ್ದಾರಿಗಳು ...ವುದು ನಿಜ. ಅವುಗಳನ್ನು ಅವರು ಪಾಲಿಸಬೇಕಾಗುತ್ತದೆ. ಆದರೆ ಇತರ ...ರಿಗೆ ಇರುವ ಎಲ್ಲಾ ಹಕ್ಕುಗಳೂ ಅವರಿಗಿರುತ್ತವೆ. ಸರ್ಕಾರಿ ನೌಕರರ ...ಗಳನ್ನು ನಿರಾಕರಿಸುವ ಹಾಗೂ ದಮನ ಮಾಡುವ ಪ್ರವೃತ್ತಿಯನ್ನು ಬಲವಾಗಿ ...ಸಬೇಕಾಗಿದೆ.

ಮರಿ ಗೋಡ್ಸೆಗಳು...



ರಾಜ್ಯದಲ್ಲಿನ ಬಿಜೆಪಿ ನಾಯಕರಿಗೆ 'ವರುಣಗಾಂಧಿ ಹಿಸ್ಟೀರಿಯಾ' ರೋಗ ಹಿಡಿದಂತೆ ಕಾಣುತ್ತಿದೆ. ಚುನಾವಣೆ ಪ್ರಚಾರ ಸಭೆಯಲ್ಲಿ ಕೋಮು ವಿಭಜನೆ - ವಿದ್ವೇಷದ ಮಾತುಗಳನ್ನಾಡಿ ಕತ್ತಲಾವುದರೊಳಗೆ ಮಾಧ್ಯಮಗಳ ಹುಲಿಯನ್ನಾಗಿ ಹಿಂದುತ್ವದ ರಕ್ಷಕನಾಗಿ ಸೃಷ್ಟಿಯಾದಂತೆ ಕರ್ನಾಟಕದಲ್ಲಿಯೂ ಸಂಘ ಪರಿವಾರದ ಕೆಲ ಬಿಜೆಪಿ ವೇಷಧಾರಿಗಳು ಅಂತಹುದೆ ಕಸರತ್ತಿಗೆ ಇಳಿದಿದ್ದಾರೆ.

'ಹಿಂದುತ್ವ ಪ್ರತಿಪಾದಿಸುವವರ ಕೈ ಕಡಿಯಿರಿ' ಎಂದು ಕಾಂಗ್ರೆಸ್ ನಾಯಕ ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆಂಬ ಮಾತನ್ನೇ ಹಿಡಿದು (ಅವರು ತಮ್ಮ ಹೇಳಿಕೆ ತಿರುಚಲಾಗುತ್ತಿದೆ ಎಂದಿದ್ದಾರೆ) ಅವರಂತವರ ತಲೆ ಕಡಿಯುವವರೆಗೂ ಹಿಂದುತ್ವವಾದಿ ತಾಲಿಬಾನ್‌ಗಳ ಫರ್ಮಾನುಗಳು ಹೊರಡುತ್ತಿವೆ. ಇದನ್ನು ಮುಖ್ಯಮಂತ್ರಿಯಾಗಿ ಬೇರೆ ಯಾವ ನಾಯಕರು ಖಂಡ ತುಂಡವಾಗಿ ಖಂಡಿಸುತ್ತಿಲ್ಲ.

ನರ್ಸ್ ಜಯಲಕ್ಷ್ಮೀ ಹಗರಣದ ಖ್ಯಾತಿಯ ಬಿಜೆಪಿ ಶಾಸಕ ರೇಣುಕಾಚಾರ್ಯ 'ಹಿಂದುತ್ವ ವಿರೋಧಿಸುವವರ ತಲೆ ಕಡಿಯಲು!' ದಾವಣಗೆರೆಯಲ್ಲಿ ಬಹಿರಂಗವಾಗಿ ಕರೆ ನೀಡಿದರು. ಇದನ್ನೇ ಅನುಸರಿಸಿ ತಾನೇನು ಕಡಿಮೆ ಇಲ್ಲ ಎಂದ ಶಾಸಕ ಸಿ.ಟಿ.ರವಿ 'ತಿಥಿ ಮಾಡಲು' ಕರೆ ನೀಡಿದ. (ಆ ಸಮಯದಲ್ಲಿ ಈತ ಅತ್ಯಂತ ಭ್ರಷ್ಟನಾಗಿದ್ದು ಅಪಾರ ಆಸ್ತಿ ಮಾಡಿಕೊಂಡಿದ್ದಾನೆಂದು ಆತನ ಗೆಳೆಯರು ಬಂಡಾಯ ಹೂಡಿದ್ದರು). ಕಾರವಾರ ಕ್ಷೇತ್ರದ ಅಭ್ಯರ್ಥಿ ಸಂಸದ ಅನಂತಕುಮಾರ್ ಹೆಗಡೆ 'ತನಗೆ ಮುಸ್ಲಿಮರ ಓಟು ಬೇಕಿಲ್ಲ ಹಿಂದುಗಳ ಓಟೇ ಸಾಕು' ಎಂದು, ಘೋಷಿಸಿದನಲ್ಲದೇ ಪಾಕಿಸ್ತಾನ, ಅಫ್ಘಾನಿಸ್ತಾನ, ತಾಲಿಬಾನ್‌ಗಳನ್ನು ಎಳೆದು ತಂದಿದ್ದ.

ಈಗೇನೊ ಚುನಾವಣೆ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ ಎಂದು ವಾಗ್ದಂಡನೆ, ಇನ್ನೂ ಕೆಲವರ ಮೇಲೆ ಕ್ರಮಗಳ ಮಾತುಗಳು ಇವೆ. ಆದರೆ ಬಿಜೆಪಿ ಯ ಈ ನಾಯಕರ ಇಷ್ಟೊಂದು ಬಹಿರಂಗ ದ್ವೇಷದ ಕಿಚ್ಚು ಹಚ್ಚುವ ಅನಾಗರೀಕ ಮಾತುಗಳ ಹಿಂದೆ ರಾಜಕೀಯ ದುರ್ಲಾಭದ ಲೆಕ್ಕಚಾರವಿದೆ. ಬಿಜೆಪಿ.ರಾಷ್ಟ್ರ ಮಟ್ಟದಲ್ಲಿ, ರಾಜ್ಯದಲ್ಲಿ ಏನೇನೊ ತೋರಿಸಿ ಅಬ್ಬರದ ಪ್ರಚಾರ ನಡೆಸಿದರೂ ನಿರೀಕ್ಷಿತವಾದ ಪ್ರತಿಕ್ರಿಯೆ ವ್ಯಕ್ತವಾಗುತ್ತಿಲ್ಲ. ಜ್ವಲಂತ ಮೂಲಭೂತ ಪ್ರಶ್ನೆಗಳನ್ನು ಎತ್ತುವುದು ಅದಕ್ಕೆ ಬೇಕಾಗಿಲ್ಲ. ಹೀಗಾಗಿ ಅದು ಮತ ಗಳಿಕೆಗೆ ಹಿಂದುತ್ವದ ಮೊರೆ ಹೋಗಿದೆ. ರಾಮ ಮಂದಿರದ ನಿರ್ಮಾಣದ ಮಾತುಗಳು ಹಿಂದು ಮತ ಬ್ಯಾಂಕ್ ಸೃಷ್ಟಿಗೆ ಸಾಕಾಗುತ್ತಿಲ್ಲ ಎನಿಸುತ್ತಿದೆ. ಹೀಗಾಗಿಯೇ ಅದು ಕೋಮು ಗಲಭೆಗಳನ್ನು, ಮುಸ್ಲಿಂ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಸತತವಾದ ಧಾಳಿಗಳನ್ನು ನಡೆಸುತ್ತಾ ಬಂದಿರುವ ಕರಾವಳಿ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ ಎಂತಹ ಕ್ಷೇತ್ರಗಳಲ್ಲಿ ಚಡ್ಡಿಪಡೆಗಳು ಕೋಮು ದ್ವೇಷಕ್ಕೆ ಕಿವಿ ಉದುತ್ತಿದೆ. ಅದಕ್ಕೆಂದೆ ನರೇಂದ್ರಮೋದಿಯನ್ನು ರಾಜ್ಯದಲ್ಲಿ ಸುತ್ತಾಡಿಸುತ್ತಿದೆ.

ಇತ್ತ ಬೆಂಗಳೂರಿನಲ್ಲಿ ಮಾಜಿ ಸಚಿವ ಅನಂತಕುಮಾರ್ ಬೇಕೆಂದೆ 'ದನದ ಮಾಂಸ ತಿನ್ನುವುದನ್ನು ಕೆಣಕಿ ನಿಷೇಧೀಸಬೇಕೆಂದು' ಕರೆ ನೀಡಿದ್ದಾರೆ. ಈ ಹಿಂದೆ ಹಿರಿಯ ಸಚಿವ ಈಶ್ವರಪ್ಪ ದನದ ಮಾಂಸ ತಿನ್ನುವವರ ನಾಲಿಗೆ ಕತ್ತರಿಸಲಾಗುವುದು ಎಂದಿದ್ದರು. ಸಚಿವ ರಾಮಚಂದ್ರಗೌಡರೂ ಇದೇ ಧಾಟಿಯಲ್ಲಿ 'ಸಂಸತಿಯನ್ನು ಸಮರ್ಥಿಸಿದ್ದರು' ಭಾರತದ ಸಂವಿಧಾನದ ಮೇಲೆ ಪ್ರಮಾಣ ಮಾಡಿದ ಇವರೆಲ್ಲಾ, ನಿರ್ಲಜ್ಯವಾಗಿ ಸಂವಿಧಾನವನ್ನೇ ಉಲ್ಲಂಘಿಸಿದ್ದಾರೆ, ಧಾಳಿ ಮಾಡುತ್ತಿದ್ದಾರೆ. ಇವರೆಲ್ಲರ ಮೂಲ ಇರುವುದು ಫ್ಯಾಸಿಸ್ಟ್ ಆರ್.ಆರ್.ಎಸ್‌ನಲ್ಲಿ. ಹೀಗಾಗಿಯೇ ಪ್ರತಿಯೊಬ್ಬರೂ ಮರಿ ಗೋಡ್ಸೆಗಳಾಗಲು ಸ್ಪರ್ಧೆಗಿಳಿದ್ದಾರೆ! ತಮ್ಮ ಕ್ರೂರ ರಾಜಕಾರಣವಾದ 'ಹಿಂದುತ್ವವ'ನ್ನು ಹಿಂದೂ ಧರ್ಮದ ಜೊತೆ ಸಮೀಕರಿಸಿ ಲಾಭ ಹೊಡೆಯಲು ಯತ್ನಿಸುತ್ತಿದ್ದಾರೆ.

ಇವೆಲ್ಲಾ ಹತಾಶೆಯ ಪ್ರತೀಕವೆಂದು ಜನ ಗಮನಿಸಬೇಕು. ಅಭಿವೃದ್ಧಿಯ ಅವರ ಬೂಟಾಟಿಕೆಯ ಮಾತು ಏನೇ ಇರಲಿ. ಕರ್ನಾಟಕವನ್ನು ಹತ್ಯಾಕಾಂಡದ ಗುಜರಾತನ್ನಾಗಿ ಮಾಡುವ ಬೆದರಿಕೆಯ ಅಜೆಂಡಾ ಇಲ್ಲಿ ಜೀವಂತ ಇಡಲಾಗಿದೆ. ಇದೇ ಸಾಲಿನಲ್ಲಿ ಇತ್ತೀಚಿಗೆ ನ್ಯಾ.ರಾಮಾಜೋಯಿಸ್‌ರವರು ಚಾತುರ್ವರ್ಣವನ್ನು ಸಮರ್ಥಿಸಿರುವುದು, ದಮನಕಾರಿ ಮನುಸ್ಮೃತಿಯನ್ನು ಎಲ್ಲರಿಗೂ ಕಡ್ಡಾಯವಾಗಿ ಕಲಿಸಬೇಕು, ಪಾಲಿಸಬೇಕು ಎಂದು.

ಈ ಚುನಾವಣೆ ಬಿಜೆಪಿಯಂತಹ ಹಿಂದುತ್ವದ ತಾಲಿಬಾನ್‌ಗಳಿಗೆ, ಹಾಗೇಯೆ ಇಂತವರನ್ನು ಬೆಳೆಸಲು ವಿಫುಲ ಅವಕಾಶ ಕಲ್ಪಿಸಲು ಕಾರಣವಾಗಿರುವ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲು ಸುಸಂಧರ್ಭ. 'ಸರ್ವಜನಾಂಗ ಶಾಂತಿಯ ತೋಟ'ವಾಗಿಯೇ ಕರ್ನಾಟಕವನ್ನು ಉಳಿಸಿಕೊಳ್ಳಲು ಮೂರನೇ ಪರ್ಯಾಯಕ್ಕೆ ಬಲ ತುಂಬಲು ಜನತೆ ಕ್ರಿಯಾಶೀಲರಾಗಿ ಹೋರಾಡುವುದು ಅಷ್ಟೇ ಅಗತ್ಯ.

ಹಳಿ ಇಲ್ಲದೆ ಓಡುವ ಎಲೆಕ್ಷನ್ ಎಕ್ಸ್‌ಪ್ರೆಸ್‌ಗಳು

ಲೋಕಸಭಾ ಚುನಾವಣೆ ಭಾರತ ದೇಶದ ಭವಿಷ್ಯತ್ತನ್ನು ಗಾಢವಾಗಿ ಪ್ರಭಾವಿಸಬಲ್ಲ ಅತ್ಯಂತ ಮಹತ್ವದ ಘಟನೆ. ಅದರಲ್ಲೂ ಅಮೇರಿಕಾ ತನ್ನ ಜಾಗತಿಕ ಆರ್ಥಿಕ, ರಾಜಕೀಯ ಹಾಗೂ ಮಿಲಿಟರಿ ಕ್ಷೇತ್ರಗಳಲ್ಲಿ ಪ್ರಾಬಲ್ಯ ಸಾಧಿಸಲು ಹೂಡಿರುವ ವ್ಯೂಹಾತ್ಮಕ ತಂತ್ರದ ಭಾಗವಾಗಿ ಭಾರತವನ್ನು ಬಾಲಂಗೋಚಿಯಾಗಿಸುವ ಹಲವಾರು ಆರ್ಥಿಕ, ರಕ್ಷಣಾ ಒಪ್ಪಂದ-ವಿಶೇಕ್ಷವಾಗಿ ಪರಮಾಣು ಒಪ್ಪಂದ ಜಾರಿಯಂತಹ ಗಂಡಾಂತರ ಸಂಗತಿಗಳು ನೂತನ ಸರ್ಕಾರದ ಮುಂದಿವೆ. ಅವು ಭಾರತದ ಆಳುವ ವರ್ಗಗಳ ಬೆಳೆವಣಿಗೆಗೆ ಆಯ್ಕೆ ಮಾಡಿಕೊಂಡ ನೀತಿಗಳು. ಒಂದೆಡೆ ಸಾಮ್ರಾಜ್ಯಶಾಹಿಯ ಆರಾಧಕನಾಗಿ, ಅಣತಿ ಪಾಲಿಸುವ ವಿನಮ್ರ ಸೇವಕನಾಗಿ ಸಾಗುವ ರಾಜಕೀಯ ಶಕ್ತಿಗಳು. ಇನ್ನೊಂದಡೆ ಇದಲ್ಲದೇ ದೇಶದ ಪ್ರಜಾಸತ್ತಾತ್ಮಕ, ಸೆಕ್ಯೂಲರ್ ಆಧಾರಿತ ಸಂವಿಧಾನದ ಆಡಳಿತ ಬದಲು ನಗ್ನ ಫಾಸಿಸ್ಟ್ ಮಾದರಿಯ ಆಡಳಿತ ಹೇರುವ ಹುನ್ನಾರ ಪ್ರತಿಗಾಮಿ ಬಲಪಂಥಿಯ ಶಕ್ತಿಗಳದ್ದು. ಇದಕ್ಕೆ ಪರ್ಯಾಯವಾಗಿ ದೇಶದ ಪ್ರಜಾಪ್ರಭುತ್ವ, ಧರ್ಮ ನಿರಪೇಕ್ಷತೆ, ಅಡಿಪಾಯ ದೃಢಗೊಳ್ಳಬೇಕು, ದೇಶದ ಸ್ವಾವಲಂಬನೆ, ಸಾರ್ವಭೌಮತ್ವ ಕಾಯುವುದಲ್ಲದೇ, ಅದನ್ನು ಬಲಪಡಿಸಿ ವಿಸ್ತರಿಸಿ ದೇಶದ ಜನತೆಗೆ ನಿಜ ಪರಿಹಾರ ನೀಡುವ ಪ್ರಯತ್ನದ ಮೂರನೇ ಜಾತ್ಯಾತೀತ ಪರ್ಯಾಯ ಎದುರಿಗಿದೆ.

ಹೀಗಾಗಿ ದೇಶದ ಜನತೆಯನ್ನು ಅಪಾರವಾಗಿ ಭಾಧಿಸುವ, ಈ ಸಂಕಷ್ಟಗಳ ಮೂಲ ಎಲ್ಲಿದೆ ? ಆಳುವವರ ನೀತಿಗಳಲ್ಲಿದೆ ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟು, ಅದರ ಸೂಕ್ತ ವಿಷಯಧಾರಿತ ಚರ್ಚೆಗಳು, ಎದ್ದು ಬರಬೇಕು. ಆದರೆ ಹಾಗಾಗುತ್ತಿಲ್ಲ. ಅಂತಹ ಚರ್ಚೆ ಎತ್ತುವ ಎಡ ಪಕ್ಷಗಳ ಅಭಿಪ್ರಾಯಗಳನ್ನು ಸಾರ್ವತ್ರಿಕವಾಗಿ ಪ್ರಸರಿಸಲು ಬಿಡುತ್ತಿಲ್ಲ. ಆಳುವ, ಅಧಿಕೃತ ವಿರೋಧಿ ಪಕ್ಷಗಳೆಂಬ ಬಲಪಂಥೀಯ ಪಕ್ಷಗಳು ಇಂತಹ ಚರ್ಚೆಗಳ ಗೊಡವೆಗೆ ಹೋಗದೇ ಅತ್ಯಂತ ಜಾಣ್ಮೆಯ ಲೆಕ್ಕಚಾರದಿಂದ ಮರೆ ಮಾಚುತ್ತಿವೆ. ಅಂತಹ ಪ್ರಸಂಗಗಳನ್ನು ಎದುರಾಗದಂತೆ ನಿರಾಕರಿಸುತ್ತವೆ.

ಆದರೆ ಪ್ರಜಾಪ್ರಭುತ್ವದ ನಾಲ್ಕನೇಯ ಆಧಾರಸ್ತಂಭವೆಂದು

ಪುಟ 15 ಕ್ಕೆ


ಶಿವಮೊಗ್ಗ :ಜನರ ಪ್ರಶ್ನೆಗಳ ಪರ ಯಾರಿದ್ದಾರ

ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಅಭ್ಯರ್ಥಿ ರಾಘವೇಂದ್ರ ಆದರೂ ಓಡಾಡುತ್ತಿರುವುದೂ, ಹೆಲಿಕಾಪ್ಟರಿನಲ್ಲಿ ಹಾರಾಡುತ್ತಿರುವುದೂ ಯಡಿಯೂರಪ್ಪನವರು. ಇವರ ಎದುರಾಳಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಕಮಲ ಹಿಡಿದು ನಂತರ ಸಮಾಜವಾದಿ ಪಕ್ಷದ ಸೈಕಲ್ ಸವಾರಿ ಮಾಡಿ ಪುನಃ ಈಗ ಕೈ ಹಿಡಿದಿರುವ ಶ್ರೀ ಬಂಗಾರಪ್ಪ.

ಶಿವಮೊಗ್ಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಮುಖ್ಯಮಂತ್ರಿ ಯಡಿಯೂರಪ್ಪನವರ ಪುತ್ರ ರಾಘವೇಂದ್ರ ಎಂದು ಮುಖ್ಯಮಂತ್ರಿಗಳ ಸಲಹೆಗಾರ ದಿವಾಕರ್ ಈಗ್ಗೆ ಕೆಲವು ತಿಂಗಳುಗಳ ಹಿಂದೆ ಹೇಳಿಕೆ ನೀಡುವುದರೊಂದಿಗೆ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಪ್ರಹಸನ ಪ್ರಾರಂಭವಾಯಿತು. ದಿವಾಕರ್‌ರವರ ಈ ಹೇಳಿಕೆಯನ್ನು ಹಳೆಯ ಬಿಜೇಪಿ ಮುಖಂಡರು ಕೂಡಲೇ ಪತ್ರಿಕಾ ಗೋಷ್ಠಿಯಲ್ಲಿಯೇ ತೀವ್ರವಾಗಿ ಖಂಡಿಸಿದರು. (ಹಳೆಯ ಬಿಜೆಪಿ ಬೇರೆ, ಯಡಿಯೂರಪ್ಪನವರ ಬಿಜೆಪಿ ಬೇರೆ ಎಂಬುದು ಸರ್ವ ವಿಧಿತ). 'ದೇವರಾಣೆಗೂ ನನ್ನ ಮಗ ಚುನಾವಣೆಗೆ ನಿಲ್ಲುವುದಿಲ್ಲ' ಎಂದು ಮುಖ್ಯಮಂತ್ರಿ ಹೇಳಿದ್ದೂ, ನಂತರ ಹಳೇ ಬಿಜೆಪಿಯವರು ದೇವರ ಹಾಗೆ ಬಾಯಿ ಮುಚ್ಚಿಕೊಂಡಿದ್ದೂ, ನಂತರದ ಪ್ರಸಂಗಗಳೆಲ್ಲ ಎಲ್ಲರಿಗೂ ಗೊತ್ತಿದೆ. ಅಂದಿನಿಂದ ಇಂದಿನವರೆಗೂ ಇಲ್ಲಿ ಬಿಜೆಪಿ ಕಾರ್ಯಕರ್ತರ ಬಹಿರಂಗ ಸಭೆ ನಡೆದಿಲ್ಲ. ಜಾತಿ, ಉಪ ಜಾತಿ, ಪಂಗಡ, ಭಾಷೆ, ಜನಾಂಗ ಇವುಗಳ ಹೆಸರಿನಲ್ಲಿ ಸಮಾವೇಶಗಳನ್ನು ಏರ್ಪಡಿಸಿ ಇಡೀ ಸಮಾಜವನ್ನು ಯಾವ್ಯಾವ ರೀತಿ ಒಡೆಯಬಹುದೋ ಅಷ್ಟು ಚೂರು ಚೂರು ಮಾಡಿ, ಆ ಗುಂಪುಗಳಿಗೆಲ್ಲ ಯಥೇಚ್ಛ ಭರವಸೆಗಳನ್ನು ನೀಡಿ ಚೆನ್ನಾಗಿ 'ನೋಡಿಕೊಳ್ಳುತ್ತಿದ್ದಾರೆ'. ಎಲ್ಲ ಜಾತಿ ಉಪ ಜಾತಿಗಳ ಸಮಾವೇಶವೂ ಮುಗಿದ ನಂತರ ಇತ್ತೀಚೆಗೆ ಸ್ಲಂವಾಸಿಗಳ ಸಮಾವೇಶ ನಡೆಯಿತು. (ಸ್ಲಂವಾಸಿಗಳಿಗೆ ಯಾವುದೇ ಜಾತಿಯಿಲ್ಲವೆಂದೇ?) ಇಲ್ಲಿಯ ಜನರೊಂದಿಗೆ ಬೆರೆತಿದ್ದ ತಮಿಳರನ್ನೂ ಬೇರ್ಪಡಿಸಿ ತಮಿಳರ ಸಮಾವೇಶ ಮಾಡಲಾಯಿತು. ಕರ್ನಾಟಕ ರಕ್ಷಣಾ ವೇದಿಕೆ ಗೊಣ ಗೊಣ ಅಂದಿದ್ದು ಬಿಟ್ಟರೆ, ಬೆಳಗಾವಿಯ ಧ್ವಜ ವಿವಾದದಷ್ಟು ಈ ತಮಿಳು ಸಮಾವೇಶ ಧೂಳು ಎಬ್ಬಿಸಲಿಲ್ಲ.

'ವಾಕರಿಕೆ ತರುವ ಆಪರೇಷನ್'

ಶಿವಮೊಗ್ಗ ನಗರದ ಜನತೆ ಬಿಜೆಪಿ ಆಡಳಿತದ ಪರಿಣಾಮಗಳನ್ನು ಅನುಭವಿಸುತ್ತಿದ್ದಾರೆ. ಬಿ.ಎಚ್. ರಸ್ತೆ ಮತ್ತು ಮಾರ್ಕೆಟ್ಟನ್ನು ಧ್ವಂಸ ಗೊಳಿಸಿದ ರೀತಿಯೇ ಇದ್ದಕ್ಕೆ ನಿದರ್ಶನ. ನೀತಿ, ನಿಯಮ, ಮಾನವೀಯತೆಗಳನ್ನು ಗಾಳಿಗೆ ತೂರಿ, ಹಬ್ಬದ ದಿನ ರಾತ್ರೋ ರಾತ್ರಿ ಶತೃಗಳ ಮೇಲೆ ಎರಗುವಂತೆ ಧಾಳಿ ಮಾಡಿ ಧ್ವಂಸ ಗೊಳಿಸಲಾಯಿತು. ಸಂತ್ರಸ್ತರಿಗೆ ಉಡುಪಿ ಮಾದರಿ ಪರಿಹಾರ ಅಂತ ಹೇಳಿ ಮೂಗಿಗೆ ಮೊಳಕೈಗೆ ಹಚ್ಚಿದ ತುಪ್ಪವನ್ನು ಸಂತ್ರಸ್ತರು ಇನ್ನೂ ನೆಕ್ಕಿಕೊಳ್ಳುತ್ತಿದ್ದಾರೆ! ನಗರ ಸಭೆಯಲ್ಲೂ ಬಿಜೆಪಿಯ ಆಡಳಿತವೇ ಇದೆ. "ಆ ಈಶ್ವರಪ್ಪ ಹೇಳಿದರು ಅಂತ ಎಲ್ಲ ಹೋಗಿ ಬಿಜೆಪಿಗೆ ಓಟ್ ಹಾಕುದ್ವಿ. ಆದ್ರೆ, ಆ ಸದಸ್ಯ ಇದುವರೆಗೂ ಈ ಕಡೆ ತಲೆ ಹಾಕಿಲ್ಲ, ನಾವೇ ಅವನ ಮನೆ ಬಾಗಿಲಿಗೆ ಹೋದ್ರೂ, ದುರಹಂಕಾರದ ಮಾತುಗಳನ್ನಾಡಿ ಕಳುಹಿಸಿದ" ಅಂತ ಮಧ್ಯಮ ವರ್ಗದ ಒಬ್ಬ ಬಿಜೆಪಿ ಬೆಂಬಲಿಗರೇ ಅವಲತ್ತುಕೊಳ್ಳುತ್ತಿದ್ದುದು ಬಿಜೆಪಿ ಆಡಳಿತದ ವೈಖರಿಗೆ ಹಿಡಿದ ಕನ್ನಡಿಯಂತಿತ್ತು. ಇಲ್ಲಿ ದಾಖಲೆ ಪ್ರಮಾಣದಲ್ಲಿ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು ಬಯಲಿಗೆ ಬರುತ್ತಿವೆ. ಆದರೆ ನೀತಿ ಸಂಹಿತೆ ಜಾರಿಗೆ ಬರುವ ಮೊದಲೇ ಬಿಜೇಪಿ ಒಂದು ಸುತ್ತು 'ಚುನಾವಣೆ ತಯಾರಿ' ನಡೆಸಿಯಾಗಿತ್ತು. ಸಂಕ್ರಾಂತಿ ಎಳ್ಳು ಬೆಲ್ಲದ ಜತೆಗೇ ಸೀರೆ ಇತ್ಯಾದಿಗಳನ್ನು ಹಂಚಿಯಾಗಿದೆ. ಸಣ್ಣಪುಟ್ಟ ಪತ್ರಿಕೆಗಳಾದಿಯಾಗಿ ಮಾಧ್ಯಮಗಳನ್ನೂ ಚೆನ್ನಾಗಿ 'ನೋಡಿಕೊಂಡಿ'ದ್ದಾಗಿದೆ. ಆದ್ದರಿಂದಲೇ ಮುಖ್ಯಮಂತ್ರಿಯವರು ನಾನೂ ಪ್ರಚಾರ ಮಾಡುವುದಿಲ್ಲ, ನೀವೂ ಪ್ರಚಾರ ಮಾಡಬೇಡಿ, ನೋಡೋಣ ಅಂತ ಎದುರಾಳಿ ಬಂಗಾರಪ್ಪನವರಿಗೆ ಸವಾಲು ಹಾಕಿದ್ದು. ಆಪರೇಷನ್ ಕಮಲ (ಕಸಾಯಿಖಾನೆ?)ವಂತೂ ಹಳೇ ಬಿಜೆಪಿಯವರಿಗೇ ವಾಕರಿಗೆ ತರಿಸುವಷ್ಟು ಅತಿಯಾಗಿದೆ.

ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಅಭ್ಯರ್ಥಿ ರಾಘವೇಂದ್ರ ಆದರೂ ಓಡಾಡುತ್ತಿರುವುದೂ, ಹೆಲಿಕಾಪ್ಟರಿನಲ್ಲಿ ಹಾರಾಡುತ್ತಿರುವುದೂ ಯಡಿಯೂರಪ್ಪನವರು. ಇವರ ಎದುರಾಳಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಕಮಲ ಹಿಡಿದು ನಂತರ ಸಮಾಜವಾದಿ ಪಕ್ಷದ ಸೈಕಲ್ ಸವಾರಿ ಮಾಡಿ ಪುನಃ ಈಗ ಕೈ ಹಿಡಿದಿರುವ ಶ್ರೀ ಬಂಗಾರಪ್ಪ. ಕಾಂಗ್ರೆಸ್‌ಗೆ ಬರುವ ಮುಂಚೆಯೇ ನಾನು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂದು ಘೋಷಿಸಿಕೊಂಡು , ಕಡೆಗೂ ಟಿಕೆಟ್ [illegible] ಯಶಸ್ವಿಯಾಗಿದ್ದಾರೆ. ಬಂಗಾರಪ[illegible] ಸಂಸದರಾಗಿ ಸಾಧನೆ ಶೂನ್ಯ. [illegible] ಶಿವಮೊಗ್ಗ ಇಂಟರ್ ಸಿಟಿ ರೈಲು, [illegible] ತಾಳಗುಪ್ಪ ಬ್ರಾಡ್ ಗೇಜ್ ಪರಿವರ್ತನ[illegible] ಸಣ್ಣ ಪುಟ್ಟ ಕಾರ್ಯಗಳಿಗೂ ಇವರಿಂದ [illegible] ಪ್ರಯತ್ನ ಇಲ್ಲ. ಜಾತಿ ರಾಜಕೀಯವನ್ನು [illegible] ಸರದಾರ ಎಂದು ಭಟ್ಟಂಗಿಗಳು [illegible] ಬಿರುದನ್ನೂ ನಂಬಿಕೊಂಡು, ತಾನು ಗ[illegible] ಎಂಬ ಭ್ರಮೆಯಲ್ಲಿ, ಉಢಾಫೆ ಮಾತ[illegible] ಪ್ರಚಾರ ಮಾಡುತ್ತಿದ್ದಾರೆ. ಜತೆಗೆ ಅನಗ[illegible] ಗಳನ್ನು ಸೃಷ್ಟಿಸಿ, ವಿರೋಧಿಗಳಿಗೆ ಪ್ರಚಾ[illegible] ತಾವೇ ಒದಗಿಸುತ್ತಿದ್ದಾರೆ. ಕಾಂಗ್ರೆಸ್[illegible] ಯಾರೂ ಇನ್ನೂ ಇತ್ತ ತಲೆ ಹಾಕಿಲ್ಲ.

ಜನರ ಸಂಕಷ್ಟಗಳು, ಸಮಸ್ಯೆಗಳ ಬ[illegible] ಕಾಂಗ್ರೆಸ್ ಪಕ್ಷಗಳ ಅವಿವೇಕೀ ಆ[illegible] ಬಗ್ಗೆ, ಚರ್ಚಿಸಲು ಚುನಾವಣೆ ಒಂದು ವ[illegible] ಬೇಕಾಗಿತ್ತು. ಆದರೆ, ದೇಶದೆಲ್ಲೆಡೆಯಂತ[illegible] ಚುನಾವಣೆ ಪ್ರಣಾಳಿಕೆಯೆಂದರೆ ಅಗ್ಗದ[illegible] ಉಚಿತ ಕೊಡುಗೆಗಳ ಬಣ್ಣದ ಮಾತು[illegible] ಬಾರಿಯ ಅಸಹ್ಯವೆಂದರೆ, ಹೊಡಿ, ಬಡಿ[illegible] ಮಾತುಗಳೇ ವಿಜೃಂಭಿಸುತ್ತಿವೆ. [illegible] ದುರಂತವೆಂದರೆ, ಬಿಜೇಪಿ, ಕಾಂಗ್ರೆಸ್[illegible] ಪರ್ಯಾಯ ಇಲ್ಲದಿರುವುದು. ಜೆಡಿ[illegible] ಸ್ಪರ್ಧಿಸುತ್ತಿಲ್ಲ. ಮತದಾರರನ್ನು ಭ್ರಷ್ಟರನ್ನಾ[illegible] ಬಿಜೇಪಿ ಶಿವಮೊಗ್ಗ ಲೋಕಸಭಾ ಕ್ಷೇತ್ರದ[illegible] ಸದ್ಯಕ್ಕೆ ಸ್ವಲ್ಪ ಮುಂದೆ ಇರುವಂತೆ [illegible] ದೇವೇಗೌಡರು ನೀಡಿರುವ ಅ[illegible] ಬಳಸಿಕೊಂಡು, ಇನ್ನು ಉಳಿದಿರುವ ಸ[illegible] ಬಂಗಾರಪ್ಪನವರು ಕಾಂಗ್ರೆಸ್ ನಾಯ[illegible] ಗಂಭೀರ ಪ್ರಯತ್ನ ಮಾಡಿದಲ್ಲಿ [illegible] ಸ್ಪರ್ಧೆಯಿಂದ ಫೋಟೋ ಫಿನಿಷ್ [illegible] ನಿರೀಕ್ಷಿಸಬಹುದು.

ಕಟ್ ಥ್ರೋಟ್ ಕಾಂಪಿಟೇಷನ್

ಈ ಬಾರಿಯ ಚುನಾವಣೆಯಲ್ಲಿ ಕಟ್ ಥ್ರೋಟ್ ಕಾಂಪಿಟಿಷನ್ ಜೋರಾಗಿದೆ. ಕಾಗೋಡು ತಿಮ್ಮಪ್ಪ ಕತ್ತಿಗೆ ಏನೋ ಕವಚ ಹಾಕಿಕೊಂಡಿದ್ರಲ್ಲ ಯಾಕೆ ಅಂತ ಯಾರೋ ಕೇಳಿದ್ರಂತೆ. ರೇಣುಕಾಚಾರ್ಯ ಕತ್ತು ಕತ್ತರಿಸ್ತೀನಿ ಅಂತ ಹೇಳಿದ್ದಾರಂತೆ, ಅದಕ್ಕೇ ರಕ್ಷಣೆಗೆ ಅಂತ ಇನ್ನಾರೋ ಹೇಳಿದ್ರಂತೆ. ವಿಧಾನಸಭೆ ಚುನಾವಣೆಯಲ್ಲಿ ಸೋತು ಮಲಗಿದ್ದ ಧರ್ಮಸಿಂಗರನ್ನು ಕಾಂಗ್ರೆಸ್ ಲೋಕಸಭೆ ಚುನಾವಣೆಗೆ ಕೂರಿಸಿದೆ. ಯಾಕ್ರೀ ಅಂತ ಯಾರೋ ಕೇಳಿದ್ದಕ್ಕೆ, ಅವರಿಗೆ ನಿಲ್ಲೋಕಾಗಲ್ಲವಲ್ಲ ಅದಕ್ಕೇ ಅಂದ್ರಂತೆ. ಅವರು ಕವಳ ಕತ್ತರಿಸುತ್ತ ಕೂತಿದ್ದಾಗ "ಏನ್ರೀ ಬಿಜೇಪಿಯವರು ಕತ್ತು ಕತ್ತರಿಸುತ್ತಾರಂತಲ್ಲ" ಎಂದು ಕೇಳಿದ್ದಕ್ಕೆ, 'ಹೇ ಕತ್ತರಿಸಿಕೊಳ್ಳಲಿ ಬಿಡ್ರೀ, ನನಗೆ ಏನು ಮಾಡಕ್ಕಾಗಲ್ಲ, ಹ ಹ್ಹಾ..,? ಅಂದ್ರಂತೆ. ನನ್ನ ಕತ್ತು ಕತ್ತರಿಸಲಿ ಬೇಕಾದರೆ ಅಂತ

ಕ್ವಾತ್ಲೆ
● ಶ್ರೀ

ಸ್ಥಾನಮಾನಯ್ಯನವರು ಕ್ಷಮಿಸಿ, ಸಿದ್ಧರಾಮಯ್ಯನವರು ಸವಾಲು ಹಾಕಿದರಂತೆ. ವಿರೋಧ ಪಕ್ಷದ ನಾಯಕ ಅನ್ನೋ ಸ್ಥಾನದ ಹತ್ತಿರ ಬಂದಂತೆ ಎಂಥ ಶಕ್ತಿ ಬಂದಿದೆ ಅಬ್ಬಾ! ಏ ಅವರು ನಿಮಗೇನು ಮಾಡಂಗಿಲ್ಲ ಬಿಡ್ರೀ ಯಾಕಂದ್ರೇ ನೀವೂ ಆಪರೇಷನ್ ಲಿಸ್ಟ್ ನಾಗೆ ಇದ್ದೋರು.ಅಂದ್ರಂತೆ.

'ಕೈ ಕತ್ತರಿಸಿದರೆ ಅವರು ಓಟು ಹೆಂಗೆ ಹಾಕ್ತಾರೆ' ಅಂತ ವೆಂಕಯ್ಯನಾಯ್ಡು ಜೋಕ್ ಮಾಡಿದ್ರಂತೆ. ಶಹಬ್ಬಾಸ್ ಇಂಥ ಭಯಂಕರ ವಿಷಯದಲ್ಲೂ ತಮಾಷೆ ಮಾಡೋ ಹಾಸ್ಯ ಪ್ರಜ್ಞೆ ಇದೆಯಲ್ಲ ಈ ವೆಂಕಯ್ಯ ನಾಯ್ಡುಗೆ. ಆದ್ರೆ ನಾಯ್ಡುಗಾರು ಜನ ಅಂದ್ರೆ ನಿಮ್ಮ ಲೆಕ್ಕದಲ್ಲಿ ಓಟು ಹಾಕೋರು ಮಾತ್ರ ಅಂತ ತೋರಿಸಿದ ಹಾಗಾಯ್ತಲ್ರೀ!

ಸಾರ್ ನಮ್ಮ ಕಡೆ ಪ್ರಚಾರ ಸರಿಯಾಗಿ ಆಗಿಲ್ಲ ಇನ್ನೂ ಅಂತ ಕಾರ್ಯಕರ್ತರು ಬಂದು ಅಭ್ಯರ್ಥಿಗೆ ಹೇಳಿದರಂತೆ. ಯಾಕೆ ಅಂತ ಅಭ್ಯರ್ಥಿ ಕೇಳಿದಾಗ, ನಮ್ಮ ವಿರೋಧಿಗಳ ಮೇಲೆ ಎಲೆಕ್ಷನ್ ಕಮಿ[illegible]ನಿಂದ ನೀತಿ ಸಂಹಿತೆ ಉಲ್ಲಂಘನೆ [illegible] ಈಗಾಗಲೇ ಎಷ್ಟೋಂದು ಕೇಸ್ ಬುಕ್ [illegible] ಅದರ ಮುಂದೆ ನಮ್ಮದು ಭಾಳ ಕಡಿಮೆಯಾ[illegible] ಅಂದ್ರೆ ಪ್ರಚಾರ ಸಾಲದಾಯಿತು ಅಂತ ಅಂದ್ರಂತೆ.

ನೋಡ್ರಪಾ ನಮ್ಮ ಪುಟ್ಟ ಜೀಪು ಆ ಎ[illegible] ಕಮಿಷನ್ ನವರಿಗೆ ಸಿಕ್ಕಿತು ತಾನೆ ಅಂ[illegible] ಅಭ್ಯರ್ಥಿ. ಹೌದು ಸಾರ್ ಸಿಕ್ಕಾಕ್ಕೊಂಡ್ [illegible] ಸಾರ್ ಪೋಲೀಸ್ ನೋರು ಪ[illegible] ಗೋಷ್ಠಯಲ್ಲಿ ಅದನ್ನ ಹೇಳತಾ ಇದಾರೆ. [illegible] ಕಾರ್ಯಕರ್ತ ಗಾಬರಿಗೊಂಡು. ವೆರಿ[illegible] ಅವರು ಪತ್ರಿಕಾ ಗೋಷ್ಠಿ ಮಾಡುವಾಗ [illegible] ಲಾರಿ ಗಳು ಸಲೀಸಾಗಿ ಪಾಸಾಗಿರುತ್ತೆ [illegible] ಅಂದ್ರಂತೆ ಅಭ್ಯರ್ಥಿ.

ಚುನಾವಣೆಗಾಗಿ ರಾಜ್ಯದಲ್ಲಿ ಬಿಜೆಪಿ
ರಥ್ಯ ವಹಿಸಿರುವ ಮುಖ್ಯಮಂತ್ರಿ
ಪ್ಪ ದಿನಪತ್ರಿಕೆಯೊಂದಕ್ಕೆ ನೀಡಿದ
'ರಾಜ್ಯಾದ್ಯಂತ ಬಿಜೆಪಿ ಪರವಾದ
ದೆ' ಎಂದಿದ್ದಾರೆ. 'ಮುಖ್ಯಮಂತ್ರಿಗಳ
ವಿಶ್ವಾಸ ತುಂಬಿ ತುಳುಕುತ್ತಿತ್ತು' ಎಂದು
ವರದಿಗಾರ ತನ್ನ ವರದಿಗೆ ವಗ್ಗರಣೆ

ಾರಿಗೆ ಬೇಡ? ಬೀಸುತ್ತಿರುವುದು
ದರೆ ಬೇಸಿಗೆಯ ಈ ದಿನಗಳಲ್ಲಿ ಅದನ್ನು
ಗತಿಸುತ್ತಾರೆ. ಆದರೆ ರಾಜ್ಯದಲ್ಲಿ ಬಿಜೆಪಿ
ಗಾಳಿ ಅದೆಂತಹ ಗಾಳಿ! ದೆವ್ವದ ಗಾಳಿ!
ಪ್ರಭುತ್ವವನ್ನು ಬೇರು ಸಹಿತ ಕಿತ್ತು
ರುಗಾಳಿ!

ಳ 'ರೇಟ್ ಬೋರ್ಡ್'

ಲ್ಲಿ ಮೊಟ್ಟಮೊದಲ ಬಾರಿಗೆ ಸ್ವಂತ
ಲೆ ಅಧಿಕಾರಕ್ಕೆ ಬಂದ ಬಿಜೆಪಿ ರಾಜ್ಯದ
ಚರಿತ್ರೆಯಲ್ಲಿ ಎಂದೂ ಅಳಿಸಲಾಗದ
ದಕ್ಕೆ ಜನ್ಮನೀಡಿದೆ. ವಿರೋಧಪಕ್ಷಗಳ
ಜನಪ್ರತಿನಿಧಿಗಳಿಗೆ ಹಣ ಮತ್ತು
ಆಮಿಷವೊಡ್ಡಿ ಅವರ ಚುನಾಯಿತ
ರಾಜೀನಾಮೆ ಕೊಡಿಸಿ, ಆಳುವ ಪಕ್ಷಕ್ಕೆ
ವ ಈ ಅನಿಷ್ಟ ವ್ಯವಹಾರ ಇದುವರೆಗೆ
ರಾಜಕೀಯ ಪಕ್ಷಕ್ಕೂ ಹೊಳೆದಿರಲಿಲ್ಲ.
ದುರ್ಬುದ್ದಿಗೆ ಮಾತ್ರ ಅದು
ವುದು ಆಶ್ಚರ್ಯಪಡುವ ಸಂಗತಿ
ಆತಂಕದ ಸಂಗತಿಯಂತೂ ಅದಾಗಿದೆ.
ಸಭೆ ಚುನಾವಣೆಯ ಕಾವು ಏರುತ್ತಿದ್ದಂತೆ
ಗಳನ್ನು ಖರೀದಿ ಮಾಡುವ ಬಿಜೆಪಿಯ
ಭರ್ಜರಿಯಾಗಿ ನಡೆಯುತ್ತಿದೆ. ಮುಕ್ತ
ಯಲ್ಲಿ 'ರೇಟ್ ಬೋರ್ಡ್' ತೂಗ
ೆ.

ಚಾಯತ್ ಸದಸ್ಯರಿಗೆ 10 ರಿಂದ

ಪಂಚಾಯತ್ ಸದಸ್ಯರಿಗೆ 5 ರಿಂದ

ಯತ್ ಸದಸ್ಯರಿಗೆ 2 ರಿಂದ 3

ಗೆ ಮುಖ್ಯಮಂತ್ರಿ ಯಡಿಯೂರಪ್ಪವರ
ನಡೆದ ಬೈಠಕ್‌ನಲ್ಲಿ 'ಆಪರೇಷನ್
ಗ್ರಾಮ ಪಂಚಾಯತ್ ಮಟ್ಟದವರೆಗೂ
ಅಧಿಕೃತ ತೀರ್ಮಾನ ಕೈಗೊಂಡ ನಂತರ
ಸದಸ್ಯರ ಬೇಟೆ ಅತಿ ಬಿರುಸಿನಿಂದ
ದೆ. ಪ್ರಬಲ ಜಾತಿ, ಕೋಮಿಗೆ ಸೇರಿದ
ಳಿಗೆ ಆದ್ಯತೆ. ಬೆಲೆ ನಿಗದಿಯಲ್ಲಿ
ಯಲ್ಲಿ ಗಳಿಸಿದ ಮತಗಳು, ಗೆಲುವಿನ
ಪರಿಗಣನೆಗೆ ಒಳಪಡುತ್ತದೆ ಎಂದು
ದೆ. ಹಣ ಪಡೆದು ಪಕ್ಷಕ್ಕೆ ಸೇರಿರುವ
ಪ್ರತಿನಿಧಿಗಳು ಯಾವುದೇ ಹುದ್ದೆಯನ್ನು
ಾರದೆಂದೂ, ಪಕ್ಷ ಸಂಘಟನೆಯಲ್ಲಿ,
ಣಾ ಕೆಲಸದಲ್ಲಿ ಸಕ್ರಿಯವಾಗಿ
ೇಕೆಂದೂ ಷರತ್ತುಗಳನ್ನು ವಿಧಿಸಲಾಗಿದೆ.
ಶಾಸಕರ ಸ್ಪರ್ಧೆಯಿಂದ ತೆರವಾಗುವ
ನಡೆಯುವ ಉಪಚುನಾವಣೆಯ
ಲ್ಲಿಯೂ 'ಆಪರೇಷನ್ ಕಮಲ' ನಡೆಸಲು
ಾಗಿದೆ ಎಂದು ತಿಳಿದುಬಂದಿದೆ.

ಬೇರೆ ಪಕ್ಷಗಳ ಪ್ರತಿನಿಧಿಗಳನ್ನು ಖರೀದಿಸಿ ಪಕ್ಷಕ್ಕೆ ಸೇರಿಸಿಕೊಂಡಿರುವ ಬಿಜೆಪಿಯ 'ಆಪರೇಷನ್' ಬಲಹೀನತೆಯ ಲಕ್ಷಣ. ಪಕ್ಷದೊಳಗೂ ಅತೃಪ್ತಿ ಬೆಳೆಯುತ್ತಿದ್ದು, ತಿರುಗುಬಾಣವಾಗುವ ಸಂಭವವಿದೆ. ಈ ನಡುವೆ ಸಾಧನೆ ಡಂಗುರಕ್ಕೆ ಏನರ್ಥವಿದೆ?

ಬಿಜೆಪಿಯಲ್ಲಿ 'ಅಲೆಮಾರಿಗಳ' ಅಲೆ ಪಕ್ಷಾಂತರಿಗಳಿಗೆ ಭಾರಿ ಬೆಲೆ


ಮತದಾನವನ್ನೂ, ಮತದಾರರನ್ನೂ ನಗೆಪಾಟಲು ಮಾಡುತ್ತಿರುವ 'ಆಪರೇಷನ್ ಕಮಲ' ಕಾರ್ಯಾಚರಣೆಯನ್ನು ಜನ ತಮ್ಮ ಉಸಿರುಗಟ್ಟಿ ಹಿಡಿದು ವೀಕ್ಷಿಸುತ್ತಿದ್ದಾರೆ. 'ಈ ನಾಟಕ ಎಷ್ಟು ದಿನ ನಡೆಯುತ್ತದೆ ಅಷ್ಟು ದಿನ ನಡೆಯಲಿ' ಎನ್ನುತ್ತಿದ್ದಾರೆ ಮನಸ್ಸಿನೊಳಗೆ. ವಿರೋಧ ಪಕ್ಷಗಳ ಸಮಯಸಾಧಕ ನಾಯಕರು ತಮ್ಮನ್ನು ಚುನಾಯಿಸಿದ ಮತದಾರರಿಗೆ ದ್ರೋಹ ಬಗೆದು ಪಕ್ಷಾಂತರ ಮಾಡಿದ ತಕ್ಷಣ ಅವರಿಗೆ ಮತಹಾಕಿ ಗೆಲ್ಲಿಸಿದ ಮತದಾರರೂ ಸಹ ಪಕ್ಷಾಂತರ ಮಾಡುತ್ತಾರೆ ಎಂಬ ಬಿಜೆಪಿಯ ಈ ಲೆಕ್ಕಾಚಾರ ತಲೆಕೆಳಗಾಗದೆ ಇರಲಾರದು. 28 ಲೋಕಸಭಾ ಕ್ಷೇತ್ರಗಳಲ್ಲಿ ಈ ಸಲ ಬಿಜೆಪಿ 'ಅಲೆಮಾರಿ'ಗಳಿಗೆ ಮಣೆ ಹಾಕಿರುವುದು ಅದರ ಬಲಹೀನತೆಯ ಲಕ್ಷಣವಾಗಿದೆ. ಪಕ್ಷದ ಒಳಗೂ ಅತೃಪ್ತಿ ಬೆಳೆಯಲು ಕಾರಣವಾಗುವ ಈ ವಿದ್ಯಮಾನ ಬಿಜೆಪಿಗೆ ತಿರುಗುಬಾಣ ಆಗುವ ಸಾಧ್ಯತೆಯೇ ಹೆಚ್ಚು ಎಂದು ರಾಜಕೀಯ ಅನುಭವಿಗಳು ವಿಶ್ಲೇಷಿಸುತ್ತಿದ್ದಾರೆ.

ಹತ್ತು ತಿಂಗಳ ಸಾಧನೆ 'ಶೂನ್ಯ'

ಕಳೆದ ಹತ್ತು ತಿಂಗಳು ನಾವು ಸಾಧಿಸಿದ ಅಭೂತಪೂರ್ವ ಅಭಿವೃದ್ಧಿಯೇ ನಮಗೆ ಶ್ರೀರಕ್ಷೆ'



ಎಂಬ ಮಾತನ್ನು ಯಡಿಯೂರಪ್ಪನವರು ಹೋದ ಹೋದಲೆಲ್ಲಾ ಹೇಳುತ್ತಿದ್ದಾರೆ. 'ಆಪರೇಷನ್‌ಕಮಲ' ಎಂಬ ರಾಜಕೀಯ ಅನಿಷ್ಟವನ್ನು ಹುಟ್ಟುಹಾಕಿದ್ದು ಬಿಟ್ಟರೆ ಈ ಹತ್ತು ತಿಂಗಳಲ್ಲಿ ಯಡಿಯೂರಪ್ಪ ಸರ್ಕಾರದ ಸಾಧನೆ ಎಲ್ಲಿದೆ ಎಂದು ಜನ ಪ್ರಶ್ನೆ ಮಾಡುವ ಸ್ಥಿತಿ ನಿರ್ಮಾಣವಾಗಿದೆ.



ನಿತ್ಯಾನಂದಸ್ವಾಮಿ

ಜವಾನನಿಂದ ಹಿಡಿದು ಮುಖ್ಯ ಕಾರ್ಯದರ್ಶಿಯವರೆಗೆ ಎಲ್ಲಾ ಸರ್ಕಾರಿ ನೌಕರರ ವರ್ಗಾವಣೆಯ್ನು ತನ್ನ ಕೈಯಲ್ಲಿ ಇಟ್ಟುಕೊಂಡು ವರ್ಗಾವಣೆ ದಂಧೆಯಲ್ಲಿ ಕೋಟಿಗಟ್ಟಲೆ ಲಂಚ ಗಳಿಸಿದ್ದು ಈ ಸರ್ಕಾರದ ಸಾಧನೆಯೇ?

ಬಳ್ಳಾರಿಯಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಗಣಿಧಣಿಗಳ ಕೈಯಲ್ಲಿ ಒತ್ತೆಯಾಳಂತೆ ಸರ್ಕಾರ ನಡೆಸುತ್ತಿರುವ ಯಡಿಯೂರಪ್ಪನವರ ಸಾಧನೆಯೇ?

ಬೆಂಗಳೂರು ಸುತ್ತಮುತ್ತ ಭೂಗಳ್ಳರು ಕಬಳಿಸಿದ್ದ ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಮತ್ತೆ ಅದೇ ಭೂ ಮಾಫಿಯಾಗಳಿಗೆ ಹರಾಜು ಹಾಕಲಾಗುತ್ತಿರುವ ಸರ್ಕಾರದ ಕ್ರಮದಿಂದ ಕರ್ನಾಟಕದ ಅಭಿವೃದ್ಧಿ ಆಗುತ್ತಿದೆಯೇ?

ಕಳೆದ ಹತ್ತು ತಿಂಗಳುಗಳಲ್ಲಿ ಬಿಜೆಪಿ ಸರ್ಕಾರದ ಮಂತ್ರಿಗಳ ಅಭಿವೃದ್ಧಿಯಾಗಿದೆ, ಗಣಿಗಳ್ಳರ ಅಭಿವೃದ್ಧಿಯಾಗಿದೆ, ಭೂಗಳ್ಳರ ಅಭಿವೃದ್ಧಿಯಾಗಿದೆ. ರಾಜ್ಯದ ಶ್ರೀಸಾಮಾನ್ಯನ ಅಭಿವೃದ್ಧಿ ಮಾತ್ರ ಆಗಲಿಲ್ಲ.

ಕರ್ನಾಟಕ ಭೂ ಸುಧಾರಣಾ ಕಾಯ್ದೆಯನ್ನು ಮತ್ತೆ ತಿದ್ದುಪಡಿ ಮಾಡಿ ಕೈಗಾರಿಕೋದ್ಯಮಿಗಳು ನೇರವಾಗಿ ಕೃಷಿ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳಲು ಈ ಸರ್ಕಾರ ಮುಂದಾಗಿದೆ. ಇದೆಲ್ಲವನ್ನು ಅದು ತನ್ನ ಸಾಧನೆಯೆಂದು ಹೇಳಿಕೊಳ್ಳುತ್ತಿದೆ. ರಸ್ತೆಗಳ್ಳ ಅಭಿವೃದ್ಧಿ ಹೆಸರಿನಲ್ಲಿ ರಾಜ್ಯದಲ್ಲಿ 40,000 ಕಿ.ಮೀ. ರಸ್ತೆಗಳನ್ನು ಸುಂಕ ವಸೂಲಿ ಮಾಡುವ ರಸ್ತೆಗಳಾಗಿ ಪರಿವರ್ತಿಸಲು ಸರ್ಕಾರ ಮುಂದಾಗಿದೆ.

ವಚನ ಭ್ರಷ್ಟ ಸರ್ಕಾರ

ರಾಜ್ಯದಲ್ಲಿ ತಮ್ಮ ಸರ್ಕಾರ ಇರುವುದನ್ನು ಬಳಸಿಕೊಂಡು ಅತಿ ಹೆಚ್ಚು ಲೋಕಸಭಾ ಸ್ಥಾನಗಳನ್ನು ಗೆಲ್ಲಬೇಕೆಂಬುದು ಬಿಜೆಪಿಯ ಲೆಕ್ಕಾಚಾರ. ಅದರ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಲಾಗಿರುವ ಆಶ್ವಾಸನೆಗಳು ಸಹ ಉದ್ದೇಶದಿಂದ ಕೂಡಿವೆ. ಆದರೆ ಕರ್ನಾಟಕದಲ್ಲಿ ಇಂದು ಬಿಜೆಪಿಯ ಚುನಾವಣಾ ಭರವಸೆಗಳನ್ನು ಯಾರೂ ಗಂಭೀರವಾಗಿ ಪರಿಗಣಿಸುವ ಪರಿಸ್ಥಿತಿ ಇಲ್ಲ. ಯಾಕೆಂದರೆ ಕಳೆದ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಇವರು ನೀಡಿದ ಭರವಸೆಗಳು, ಪಕ್ಷ ಅಧಿಕಾರಕ್ಕೆ ಬಂದ ನಂತರವೂ ಅವುಗಳನ್ನು ಜಾರಿಗೆ ತರಲಿಲ್ಲ.

ಬಿಪಿಎಲ್ ರೇಷನ್‌ಕಾರ್ಡ್‌ಗಳನ್ನು ಪಡೆಯಲು ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು 30,000 ರೂ.ಗಳಿಗೆ ಹೆಚ್ಚಿಸುವ ಭರವಸೆಯನ್ನು ಅದು ಮರೆತುಬಿಟ್ಟಿದೆ. ಕೆ.ಜಿ.ಗೆ 2 ರೂ ದರದಲ್ಲಿ ಅಕ್ಕಿ ಪೂರೈಸುವುದಾಗಿ ಕೊಟ್ಟ ಭರವಸೆ ಈಗ ಲೋಕಸಭಾ ಚುನವಣಾ ಭರವಸೆಯಾಗಿ ಬಂದಿದೆ. ಬೆಲೆ ಏರಿಕೆಯಿಂದ ತತ್ತರಿಸಿದ ಬಡವರಿಗೆ ಕನಿಷ್ಠ ರೇಷನ್ ಕಾರ್ಡ್‌ಗಳನ್ನು ಸಹ ವಿತರಿಸಲಾಗದ ಈ ಸರ್ಕಾರ ತನ್ನ ಸಾಧನೆಯ ಬಗ್ಗೆ ಮಾತನಾಡುತ್ತದೆ. ಈಗ ಜನರಿಗೆ ತಾತ್ಕಾಲಿಕ ರೇಷನ್ ಕಾರ್ಡುಗಳನ್ನು ವಿತರಿಸಿ ಅವರ ಓಟುಗಳನ್ನು ಕಿತ್ತಿಕೊಳ್ಳಲು ಹೊರಟಿದೆ.

ರೈತರಿಗೆ ಉಚಿತ ವಿದ್ಯುತ್ ಪೂರೈಸುವ ಅದರ ಭರವಸೆಯನ್ನು ಹಿಂದಿನ ಸರ್ಕಾರಗಳು ಮನ್ನಾ ಮಾಡಿರುವ ವಿದ್ಯುತ್ ಶುಲ್ಕ ಬಾಕಿಗಳ ವಸೂಲಿಗೆ ಮತ್ತು ನೀರಾವರಿ ಪಂಪ್‌ಸೆಟ್‌ಗಳ ಸಾರ್ವತ್ರಿಕ ಮೀಟರೀಕರಣಕ್ಕೆ ಬಳಸಲಾಗುತ್ತಿದೆ. ರಾಜ್ಯ ಇಂದು ವಿದ್ಯುತ್ ಕೊರತೆಯಿಂದ ಕೊರಗುತ್ತಿದೆ. ಅಗತ್ಯ ವಿದ್ಯುತ್ ಉತ್ಪಾದನೆ ಮಾಡಲು ಒಳ್ಳೆಯ ಗುಣಮಟ್ಟದ ವಿದ್ಯುತ್ತನ್ನು ಪೂರೈಸಲು ಯಡಿಯೂರಪ್ಪ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಅಸಮರ್ಪಕ ವಿದ್ಯುತ್ ಪೂರೈಕೆಯಿಂದಾಗಿ ಬೆಳೆ ಹಾನಿಗೆ ತುತ್ತಾಗಿರುವ ನೀರಾವರಿ ಪಂಪ್‌ಸೆಟ್ ರೈತರು ಯಡಿಯೂರಪ್ಪ, ಈಶ್ವರಪ್ಪ ಕಂಪನಿಗೆ ಶಾಪ ಹಾಕುತ್ತಿದ್ದಾರೆ.

ಕೃಷಿ ಮಾರುಕಟ್ಟೆಗೆ ವಿದೇಶಿ ಬಂಡವಾಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ರೈತ ವಿರೋಧಿ, ವರ್ತಕ ವಿರೋಧಿ ಎ.ಪಿ.ಎಂ.ಸಿ. ತಿದ್ದುಪಡಿ ಕಾಯ್ದೆಯನ್ನು ಪುನರ್ ಪರಿಶೀಲಿಸುವುದಾಗಿ ಕೊಟ್ಟ ಭರವಸೆಯ ಬಗ್ಗೆ ಬಿಜೆಪಿ ಈಗ ಮೌನವಾಗಿದೆ. ಹೀಗೆ ಅದರ ಜಾರಿಯಾಗದ ಭರವಸೆಗಳ ಪಟ್ಟಿ ದೊಡ್ಡದಿದೆ. ಈಗ ಮತ್ತೆ ಭರವಸೆಗಳ ಸುರಿಮಳೆ ಭರವಸೆ ಕೊಟ್ಟು ವಚನಭ್ರಷ್ಟವಾಗುವ ಬಿಜೆಪಿ ಬಗ್ಗೆ ರಾಜ್ಯದ ಜನತೆ ಭರವಸೆ ಕಳೆದುಕೊಳ್ಳುತ್ತಿದೆ.

ಹತ್ತು ತಿಂಗಳಲ್ಲಿ ನೂರಕ್ಕೂ ಹೆಚ್ಚು ಗಲಭೆಗಳು

ಕೋಮು ಗಲಭೆಗಳೇ ಬಿಜೆಪಿಯ 10 ತಿಂಗಳ ಪ್ರಮುಖ ಸಾಧನೆ! ಈ ಅವಧಿಯಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಮುಖ್ಯವಾಗಿ ಕರಾವಳಿ ಜಿಲ್ಲೆಗಳಲ್ಲಿ ನೂರಕ್ಕೂ ಹೆಚ್ಚು ಗಲಭೆಗಳಾಗಿವೆ. ಅಲ್ಪಸಂಖ್ಯಾತ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯಗಳ ಪ್ರಾರ್ಥನಾಲಯಗಳ ಮೇಲೆ ನಿರಂತರ ದಾಳಿ ನಡೆಸಲಾಗುತ್ತಿದೆ ಎರಡು ಕೋಮುಗಳಿಗೆ ಸೇರಿದ ಯುವಕ-ಯುವತಿಯರು ಪರಸ್ಪರ ಮಾತಾಡುವುದನ್ನು

ಪುಟ 6 ಕ್ಕೆ




ಕುಂದಾಪುರ

ಚೆಡ್ಡಿ ಪೊಲೀಸ್‌ನ ಎನ್‌ಕೌಂಟರ್ ಬೆದರಿಕೆಗೆ ಮತಿನ್ ಬಲಿ ?

ಕರಾವಳಿ ಜಿಲ್ಲೆಯ ಕೇಸರಿ ಪೊಲೀಸ್ ಆಡಳಿತವು ಕರಾಣಿ ಮತಿನ್ ಎಂಬ ಹೆಸರಿನ ಬಡ ಮುಸ್ಲಿಂ ಯುವಕ ಆರೆಸ್ಸೆಸ್‌ನ ರಾಜಕೀಯ ಸಿದ್ಧಾಂತಕ್ಕೆ ಬಲಿಯಾಗಿದ್ದಾನೆ. ಇಲ್ಲಿನ ಮುಸ್ಲಿಂ ಜನಾಂಗವು ತಲತಲಾಂತರದಿಂದ ಆಹಾರವಾಗಿ ಸ್ವೀಕರಿಸುವ ದನದ ಮಾಂಸದ ಸಾಗಾಟದ ನೆಪದಲ್ಲಿ ಮುಸ್ಲಿಂ ಯುವಕರ ಮೇಲೆ ದಿನನಿತ್ಯವೆಂಬಂತೆ ದೌರ್ಜನ್ಯಗಳು ನಡೆಯುತ್ತಲೇ ಬಂದಿದೆ.

ಮೊನ್ನೆ 02.04.2009 ರಂದು ಕುಂದಾಪುರದ ಕಂಡ್ಲೂರಿನ ಯುವಕ ಕರಾಣಿ ಮತಿನ್‌ನು ಇಂತದ್ದೇ ಪ್ರಕರಣದಲ್ಲಿ ಸಾವನ್ನಪ್ಪಿರುವುದು ಮಾತ್ರ ಆಕಸ್ಮಿಕವಲ್ಲ. ಕುಂದಾಪುರದ ಅಲ್ಪಸಂಖ್ಯಾತ ವಿರೋಧಿ, ಭಜರಂಗದಳದ ಕಾರ್ಯಕರ್ತನಾಗಿ ಕಾರ್ಯ ನಿರ್ವಹಿಸುತ್ತಿರುವ ಪಿಎಸ್‌ಐ ಸತೀಶ್‌ಕುಮಾರನೇ ಈ ಸಾವಿಗೆ ಕಾರಣಕರ್ತ ಎಂದು ಜನರು ಮಾತಾಡಿಕೊಳ್ಳುತ್ತಿದ್ದಾರೆ.



ಮತಿನ್

ಈ ಸಬ್‌ಇನ್ಸ್‌ಪೆಕ್ಟರ್ ಸತೀಶ್ ಯಾರು?

ಸಬ್ ಇನ್ಸ್‌ಪೆಕ್ಟರ್ ಸತೀಶ್‌ಕುಮಾರ್ ಆರೆಸ್ಸೆಸ್‌ನ ಶಾಖೆಯಲ್ಲಿ ಸೈದ್ಧಾಂತಿಕ ರಾಜಕೀಯ ತರಬೇತಿ ಪಡೆದು ಪೊಲೀಸ್ ಕೆಲಸಕ್ಕೆ ಅರ್ಜಿ ಹಾಕಿ ಕೆಲಸ ಗಿಟ್ಟಿಸಿದವ. ಈತ ಎಂತಹ ಚಡ್ಡಿ ಎಂದರೆ ಕುಂದಾಪುರದಲ್ಲಿ ಬಿಜೆಪಿ ಪಕ್ಷ ಗೆದ್ದರೆ, ಆರಕ್ಷಕ ಠಾಣೆಯ ಎಲ್ಲಾ ಸಿಬ್ಬಂದಿಗಳಿಗೂ ಸಿಹಿ ಹಂಚಿ ವಿಜಯೋತ್ಸವ ಆಚರಿಸುತ್ತಾನೆ. ತನ್ನ ಹಿಂದುತ್ವವಾದಿ ಅಜೆಂಡಾಗಳ ಜಾರಿಗಾಗಿ ತನ್ನ ಮಾಹಿತಿದಾರರನ್ನಾಗಿ ಭಜರಂಗದಳ ಸಂಚಾಲಕನನ್ನು ನೇಮಿಸಿಕೊಂಡಿದ್ದಾನೆ. ಈ ಮಾಹಿತಿದಾರನ ಕೆಲಸ ಯಾವ ಹೊಟೇಲ್‌ಗಳಲ್ಲಿ ಅಥವಾ ಐಸ್‌ಕ್ರೀಂ ಪಾರ್ಲರ್‌ಗಳಲ್ಲಿ ಯಾವ ಧರ್ಮದ ಹೆಣ್ಣುಗಂಡುಗಳು ಜೊತೆಗೆ ಕುಳಿತುಕೊಂಡಿದ್ದಾರೆ ಎಂದು ಪತ್ತೆಹಚ್ಚಿ ತನ್ನ ಸಂಘಟನೆಯ ಗೌರವಾಧ್ಯಕ್ಷನಂತಿರುವ ಪಿಎಸ್‌ಐ ಸತೀಶನಿಗೆ ಮಾಹಿತಿ ನೀಡಿ ಕರೆದೊಯ್ದು ಬೆದರಿಕೆ ಒಡ್ಡುವುದು ಈತನ ರಾಜಕೀಯ ಅಜೆಂಡಾ.

ಮೃತನ ತಂದೆ ಕರಾಣಿ ಅಮೀರ್ ಹೇಳಿದ್ದು

ಕರಾಣಿ ಮತಿನ್ ತಂದೆ ಕರಾಣಿ ಅಮೀರ್ ತನ್ನ ಸುಮಾರು 24 ವರ್ಷ ಪ್ರಾಯದ ಮಗನ ಸಾವಿನಿಂದ ದಿಕ್ಕೆಟ್ಟು ಹೋಗಿದ್ದಾರೆ. ಡಿವೈಎಫ್‌ಐ ಸಂಘಟನೆ ಘಟನೆ ನಡೆದ ದಿನ ಅಮೀರ್‌ನನ್ನು ವಿಚಾರಿಸಿದಾಗ ನನ್ನ ಮಗನನ್ನು ಎಸ್‌ಐ ಸತೀಶ್ ನೀರಿನಲ್ಲಿ ಮುಳುಗಿಸಿ ಕೊಂದಿದ್ದಾರೆ. ಈ ಹಿಂದೆ ಎರಡೆರಡು ಬಾರಿ ಮತಿನ್‌ಗೆ ಕ್ಷುಲ್ಲಕ ಕಾರಣ ನೀಡಿ "ನಿನ್ನ ಎನ್‌ಕೌಂಟರ್ ಮಾಡುತ್ತೇನೆ" ಎಂದು ಗದರಿಸಿದ್ದಾರೆ ಎಂದು ಹೇಳುತ್ತಾರೆ. 'ಕರಾಣಿ ಮತಿನ್ ರಿಕ್ಷಾ ಚಾಲಕನಾಗಿದ್ದ. ಆತ 02.04.09 ರಂದು ರಾತ್ರಿ ಆಟೋ ಚಲಾಯಿಸಿಕೊಂಡು ಮನೆಗೆ ಬರುವಾಗ ಪಿಎಸ್‌ಐ ಸತೀಶನ ವಾಹನ ಅದೇ ಮಾರ್ಗವಾಗಿ ಬಂದಿದೆ. ಸತೀಶ್ ಆಟೋಗೆ ಅಡ್ಡವಾಗಿ ನಿಂತು ತನ್ನ ಎಂದಿನ ಚಾಳಿಯಂತೆ ರಿವಾಲ್ವರ್‌ನ್ನು ಹೊರತೆಗೆದು ಓಡಲು ಹೇಳಿದ್ದಾನೆ. ಮತಿನ್ ಗಾಬರಿಯಿಂದ ಜೀವ ಉಳಿಸಿಕೊಳ್ಳಲು ನದಿಯ ಕಡೆಗೆ ಓಡಿದ್ದಾನೆ. ಅಲ್ಲಿಗೂ ಬೆನ್ನಟ್ಟಿಬಂದ ಸತೀಶ್ ಆತನನ್ನು ಹಿಡಿದು ನೀರಿನಲ್ಲಿ ಮುಳುಗಿಸಿ ಕೊಂದಿದ್ದಾರೆ' ಎಂದು ಅಮೀರ್ ಅಳುತ್ತಾ ಹೇಳುತ್ತಾರೆ.

ಸಾವಿನ ಕರೆ ತಿಳಿಸಿದ ಸ್ವತಃ ಸತೀಶ್

ಅಂದು ರಾತ್ರಿ ಸುಮಾರು 1. 45 ಗಂಟೆಗೆ ಕರಾಣಿ ಮತಿನ್ ತಂದೆ ಕರಾಣಿ ಅಮೀರ್‌ಗೆ ಸ್ವತಃ ಪಿಎಸ್‌ಐ ಸತೀಶ್ ಕರೆ ಮಾಡಿ "ನಿಮ್ಮ ಮಗ ನನ್ನ ನೋಡಿ ನದಿಗೆ ಬಿದ್ದಿದ್ದಾನೆ. ಬೇಗ ಬನ್ನಿ" ಎಂದು ಹೇಳಿದ್ದಾನೆ. ವಿಷಯ ತಿಳಿದ ಅಮೀರ್ ತಮ್ಮ ಪಕ್ಕದ ಮನೆಯ ಯುವಕರೊಂದಿಗೆ ಆಗಮಿಸಿ ನದಿಯಲ್ಲಿ ಹುಡುಕುತ್ತಿದ್ದಾಗ ಸತೀಶನೇ ನಿರ್ದಿಷ್ಟ ಜಾಗದ ನೀರಿನ ಕಡೆ ತೋರಿಸಿ ಅಲ್ಲಿಯೇ ನಿಮ್ಮ ಮಗ ಬಿದ್ದಿದ್ದಾನೆ ಎಂದಾಗ ಮತಿನ್ ಮೃತದೇಹ ಅಲ್ಲಿಯೇ ಯುವಕರಿಗೆ ಸಿಕ್ಕಿದ್ದು ಮತ್ತಷ್ಟು ಸಂಶಯಕ್ಕೆಡೆ ಮಾಡಿಕೊಡುತ್ತದೆ.

ಪೊಲೀಸರ ಎಫ್‌ಐಆರ್

ಕರಾಣಿ ಮತಿನ್ ತನ್ನ ವಾಹನದಲ್ಲಿ ಅಕ್ರಮ ದನ ಸಾಗಾಟ ಮಾಡಿ ನದಿಯ ತಟದಲ್ಲಿ ವಾಹನ ಸ್ವಚ್ಛಗೊಳಿಸುತ್ತಿದ್ದ. ಅದೇ ಸಂದರ್ಭದಲ್ಲಿ ನಾವು ರಾತ್ರಿ ಗಸ್ತು ತಿರುಗುತ್ತಿದ್ದಾಗ ನಮ್ಮ ಪೊಲೀಸ್ ವಾಹನ ಕಂಡು 3 ಜನರು ತಪ್ಪಿಸಿಕೊಳ್ಳಲು ನದಿಗೆ ಹಾರಿದ್ದಾರೆ. ಇಬ್ಬರು ಆಚೆ ದಡ ಸೇರಿದ್ದಾರೆ. ಆದರೆ ಮತಿನ್ ನಡುನೀರಿನಲ್ಲಿ ಮುಳುಗಿ ಸತ್ತಿದ್ದಾನೆ. ವಾಹನದಲ್ಲಿ ಸಗಣಿಯ ಕುರುಹುಗಳಿದ್ದವು ಎಂದು ದೂರು ದಾಖಲಿಸಿದ್ದಾರೆ.

ಪಾಪಿ ಹೋದಲ್ಲಿ ಮೊಣಕಾಲುದ್ದ ನೀರು

ಈ ಪ್ರಕರಣವನ್ನು ಸೂಕ್ಷ್ಮವಾಗಿ ಗಮನಿಸುವಾಗ ಪೊಲೀಸರೇ ಹೇಳುವ ಪ್ರಕಾರ ಕರಾಣಿ ಮತಿನ್ ಸಾಯುತ್ತಿದ್ದರೂ ಆತನನ್ನು ರಕ್ಷಣೆ ಮಾಡಲು ಪೊಲೀಸರು ಪ್ರಯತ್ನಿಸದೇ ಇರುವುದು ಅವರೇ ಒಪ್ಪಿಕೊಂಡಂತಾಗಿದೆ. ಪ್ರಾಕೃತಿಕವಾಗಿ ಆ ನದಿ ಈ ಸಮಯದಲ್ಲಿ ತುಂಬಿ ಹರಿಯುವುದಿಲ್ಲ, ರಣಬಿಸಿಲಿಗೆ ನೀರು ಆವಿಯಾಗಿ ಒಬ್ಬ ವ್ಯಕ್ತಿ ಸಾಯುವಷ್ಟು ನೀರಿಗೆ ಅಲ್ಲಿ ಕೊರತೆಯಿದೆ. ಆದರೆ ಸಾಯಿಸುವಷ್ಟು ನೀರಿಗೆ ಯಾವುದೇ ಕೊರತೆ ಇರಲಿಲ್ಲ ಎಂಬುದು ಸ್ಪಷ್ಟವಾಗಿ ಅರಿಯಬಹುದಾಗಿದೆ.



ಪಿ.ಎಸ್.ಐ. ಸತೀಶ್‌ಕುಮಾರ್

ಬಿಜೆಪಿ ಅಸಲಿ ಮುಖ

ಬಿಜೆಪಿ ಅಧಿಕಾರದಲ್ಲಿ ಯಾವ ರೀತಿ ಅಮಾಯಕ ಜನ ಬಲಿಯಾಗಬೇಕಾಗುತ್ತದೆ ಎಂಬುದಕ್ಕೆ ಇತ್ತೀಚೆಗೆ ಕರಾವಳಿಯಲ್ಲಿ ಇಂತಹ ಸರಣಿ ಪ್ರಕರಣಗಳು ಪೂರ್ವಯೋಜಿತವಾಗಿ ನಡೆಸುತ್ತಿರುವುದು ಒಂದು ಸಣ್ಣ ಸ್ಯಾಂಪಲ್ ಅಷ್ಟೆ. ಬಿಜೆಪಿ ಎಂಬ ಫ್ಯಾಸಿಸ್ಟ್ ಧರ್ಮದಲ್ಲಿ ರಾಜಕೀಯ ಬೆರೆಸುವುದು ಮಾತ್ರವಲ್ಲ, ಸರಕಾರಿ ಕಛೇರಿಗಳು, ಪೊಲೀಸ್ ಠಾಣೆಗಳು ಆರೆಸ್ಸೆಸ್‌ನ ಕಛೇರಿಗಳಾಗಿ ತಮ್ಮ ರಾ[...] ಕಾರ್ಯಾಚರಣೆ ನಡೆಸುತ್ತಿರುವುದಂತು [...] ಸಂಗತಿಯಾಗಿದೆ.

ಜನರನ್ನು ರಕ್ಷಿಸಬೇಕಾದ ಆರಕ್ಷಕರು [...] ಬೆದರಿಸಿ ಸಾಯಿಸುತ್ತಾರೆಂದರೆ ಜನರ[...] ಮಾಡುವವರ್ಯಾರು? ಎಂಬ [...] ಪ್ರಜ್ಞಾವಂತರನ್ನು ಕಾಡುವಂತಾಗಿದೆ.

ಪೊಲೀಸರ ವಿರುದ್ಧ ಪ್ರತಿಭಟನೆ

ಕಂಡ್ಲೂರಿನ ಯುವಕ ಕರಾಣಿ ಮತಿನ್ ಸಾವಿನ ನಿಷ್ಪಕ್ಷಪಾತ [...] ಆಗ್ರಹಿಸಿ ಕುಂದಾಪುರ [...] ಸತೀಶ್‌ಕುಮಾರ್‌ರವರ [...] ವಿರೋಧಿ ನೀತಿ ಖಂಡಿಸಿ [...] ಕರ್ನಾಟಕ ಸರ[...] ಅಲ್ಪಸಂಖ್ಯಾತ ವಿ[...] ನಿಲುವುಗಳನ್ನು [...] ಡಿವೈಎಫ್‌ಐ, ಸೌಹಾರ್ದ [...] ನೇತೃತ್ವದಲ್ಲಿ ನಡೆಸಲಾ[...] ಪ್ರತಿಭಟನೆಯಲ್ಲಿ [...] ಸತೀಶ್ ಮತ್ತು ಕರ್ತವ್ಯದಲ್ಲಿದ್ದ ಪೊಲೀ[...] ಅಮಾನತ್ತಿನಲ್ಲಿಟ್ಟು ತನಿಖೆ ನಡೆಸಬೇ[...] ಒತ್ತಾಯಿಸಲಾಯಿತು. ಸಭೆಯದಲ್ಲಿ [...] ಜನವಿಭಾಗ ಹಾಗೂ ಕ್ರೈಸ್ತ ಜನ ವಿಭಾಗ[...] ಕಾರ್ಮಿಕರು ಭಾಗವಹಿಸಿದ್ದರು.

ಸುರೇಶ ಕಲ್ಲಾಗರ್, ಕುಂ[...]



ಬಿಜೆಪಿಯಲ್ಲಿ 'ಅಲೆಮಾರಿಗಳ' ಅಲೆ[...]

ಪುಟ 5 ರಿಂದ

ಸಹ ಸಹಿಸದಿರುವ ವ್ಯಕ್ತಿಗಳಿಗೆ ಮತ್ತು ಸಂಘಟನೆಗಳಿಗೆ ಸರ್ಕಾರ ಪ್ರೋತ್ಸಾಹ ಕೊಡುತ್ತಿದೆ. ಭಜರಂಗದಳ, ಶ್ರೀರಾಮಸೇನೆಯಂತಹ ಸಂಘಟನೆಗಳ ಪುಂಡರು(ಅ)ನೈತಿಕ ಪೋಲೀಸರಾಗಿ ತಿರುಗುತ್ತಿದ್ದಾರೆ. ಪೋಲೀಸರು ಬಜರಂಗಿಗಳಾಗಿ ಲಾಠಿ ತಿರುಗಿಸುತ್ತಾರೆ. ಇವರೆಲ್ಲರ ಮೇಲೆ ರಾಜ್ಯದ ಗೃಹಮಂತ್ರಿ ಅಧ್ಯಕ್ಷತೆ ವಹಿಸಿರುತ್ತಾರೆ.

ಭಯ ಭೀತಿ ಹುಟ್ಟಿಸಿ ಚುನಾವಣಾ ಪೂರ್ವದಲ್ಲಿ ಮತೀಯ ಧ್ರುವೀಕರಣ ಉಂಟು ಮಾಡುವುದು ಅವರ ಉದ್ದೇಶವಾಗಿದೆ. ಹೊಡಿ, ಬಡಿ, ಕಡಿ ಎಂದು ಅವರು ಬಡಬಡಿಸುತ್ತಿದ್ದಾರೆ. ಅಲ್ಪಸಂಖ್ಯಾತರಲ್ಲಿಯೂ ಸೇಡಿನ ಕಿಡಿ ಬೆಳೆಯುತ್ತಿರುವುದು ಆತಂಕದ ಸಂಗತಿಯಾಗಿದೆ. ಮತದಾರರು ಧೃತಿಗೆಡದೆ, ಇಂತಹ ಶಕ್ತಿಗಳ ವಿರುದ್ಧ ಧೈರ್ಯದಿಂದ ಮತ ಚಲಾಯಿಸಲು ಸಾಧ್ಯವಾಗಬೇಕಾಗಿದೆ.

ಕಾಂಗ್ರೆಸ್ ಪಕ್ಷವೂ ಜನರ [...] ಕಳೆದುಕೊಂಡಿದೆ. ವಿಶ್ವದಲ್ಲೇ ಅನಾಹುತಕ್ಕೀಡಾ[...] ಉದಾರೀಕರಣ ನೀತಿಗಳಿಗೆ ಅದು [...] ಜೋತುಬಿದ್ದಿದೆ. ದೇಶದಲ್ಲಿ ಬೆಳೆಯುತ್ತಿರುವ [...] ಶಕ್ತಿಗಳನ್ನು ಎದುರಿಸಿ ಹಿಮ್ಮೆಟ್ಟಿಸುವ ಮನಸ್ಸು [...] ಸಾಮ್ರಾಜ್ಯಶಾಹಿ ಅಮೇ[...] ಬಾಲಂಗೋಚಿಯಾಗಲು ಹವಣಿಸು[...] ಕಾಂಗ್ರೆಸ್ಸಿಗೆ ದೇಶದ ಹಿತ ಕಾಪಾಡಲು ಸಾ[...] ಬಿಜೆಪಿಯನ್ನು ಸೋಲಿಸಿ ಕಾಂಗ್ರೆಸ್‌ನ್ನು ತಿ[...] ಪರ್ಯಾಯ ಶಕ್ತಿಗಳ ಕೂಟವನ್ನು ಅಧಿಕಾ[...] ಈ ಚುನಾವಣೆಯಲ್ಲಿ ಸಾಧ್ಯವಾದರೆ [...] ರಾಜಕೀಯಕ್ಕೆ ಒಂದು ಜನಪರ [...] ಸಾಧ್ಯವಾಗಲಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಬಿಜೆಪಿ ಚುನಾವಣಾ ಪ್ರಣಾಳಿಕೆ



ಕೋಮುವಾದಿ ಅಜೆಂಡಾ : ಮತ್ತದೇ ಚರ್ವಿತಚರ್ವಣ

ಭಾರತ ಎಂದೆಂದೂ ಹಿಂದೂರಾಷ್ಟ್ರವಾಗಿತ್ತು ಹಾಗೂ ಹಿಂದೂರಾಷ್ಟ್ರವಾಗಿಯೇ ಉಳಿಯುತ್ತದೆ ಎಂಬ ಆರೆಸ್ಸೆಸ್ ಕಣ್ಣೋಟದೊಂದಿಗೇ ಬಿಜೆಪಿಯ ಈ ಪ್ರಣಾಳಿಕೆ ಆರಂಭವಾಗುತ್ತದೆ ಮತ್ತು ಅದರೊಂದಿಗೇ ಅಂತ್ಯವಾಗುತ್ತದೆ. ಈ ಆರಂಭ ಮತ್ತು ಅಂತ್ಯದ ನಡುವೆ ಇರುವ ಪುಟಗಳಲ್ಲಿ ಹಲವಾರು ದೀರ್ಘಕಾಲದ ಬೇಡಿಕೆಗಳನ್ನು ತುರುಕಲಾಗಿದೆ. ಇವೆಲ್ಲಾ ಆರು ವರ್ಷಗಳ ಕಾಲ ಅಧಿಕಾರದಲ್ಲಿ ಇದ್ದಾಗ ಅದು ಜಾರಿ ಮಾಡಬಹುದಾಗಿದ್ದ, ಆದರೆ ಮಾಡಿರದ ಸಂಗತಿಗಳು.


ಹನ್ನೊಂದು ವರ್ಷಗಳ ಅಂತರಾಳದ ನಂತರ ಬಿಜೆಪಿ ತನ್ನ ಸ್ವಂತ ಪ್ರಣಾಳಿಕೆಯನ್ನು ಹೊ[illegible]ದೆ-15ನೇ ಲೋಕಸಭಾ ಚುನಾವಣೆಗಳಿಗೆ. ಈ ನಡುವೆ ಅದು ತನ್ನ ನಿಜ ಹುನ್ನಾರಗಳಿಗೆ ಮುಖವಾಡ ತೊಡಿಸಲು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ ಅಂದರೆ ಎನ್‌ಡಿಎ ದ ಕಾರ್ಯಕ್ರಮವನ್ನು ಮುಂದಿಡುತ್ತಾ ಬಂದಿತ್ತು. ಆದರೀಗ ಎನ್‌ಡಿಎ ಮತ್ತು ಬಿಜೆಪಿಯನ್ನು ಪೀಡಿಸುತ್ತಿರುವ ಮೂಲಭೂತ ವೈರುಧ್ಯವನ್ನು ನಿವಾರಿಸಿಕೊಳ್ಳುವ ಪ್ರಯತ್ನವಾಗಿ ಅದು ಈ ದಾರಿ ಹಿಡಿದಿದೆ. ಒಂದೆಡೆ ಆರೆಸ್ಸೆಸ್‌ನ ರಾಜಕೀಯ ಅಂಗವಾಗಿ ಅದು ತನ್ನ ಕಟ್ಟಾ ಕೋಮುವಾದಿ ಅಜೆಂಡಾದ ಆಧಾರದಲ್ಲಿ ಸಾರ್ವಜನಿಕ ಬೆಂಬಲ ಕೋರಬೇಕಾಗುತ್ತದೆ; ಇನ್ನೊಂದೆಡೆ ಅದು ಹಾಗೆ ಮಾಡಹೋದಷ್ಟು ತನ್ನ ಎನ್‌ಡಿಎ ಮಿತ್ರರುಗಳಿಂದ ದೂರ ಸರಿಯಬೇಕಾಗುತ್ತದೆ, ಅಮೂಲಕ ಎನ್‌ಡಿಎ ದುರ್ಬಲಗೊಳ್ಳುತ್ತದೆ. ಅಂದರೆ ಕೇಂದ್ರದಲ್ಲಿ ಸರಕಾರ ರಚಿಸುವ ಸಾಧ್ಯತೆಯೂ ದೂರ ಸರಿ[illegible]ತ್ತಾ ಹೋಗುತ್ತದೆ.

ಹಿಂದೂ ವೋಟ್ ಬ್ಯಾಂಕ್

[illegible]ರೆ ಈ ಬಾರಿ ಬಿಜೆಪಿ ಒಂದು ದುಷ್ಟ ದಾರಿ ಹಿಡಿದಂತೆ ಕಾಣುತ್ತದೆ. ಆರೆಸ್ಸೆಸ್ ತಾನು ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ರಾಮ ದೇವಸ್ಥಾನ ಕಟ್ಟುವ ರಾಜಕೀಯ ಪಕ್ಷಕ್ಕೆ ಮಾತ್ರ ಬೆಂಬಲ ನೀಡುವುದಾಗಿ ಸಾರ್ವಜನಿಕವಾಗಿ ಸಾರಿತು. ಅಲ್ಲದೆ ಬಿಜೆಪಿ ಕೂಡಾ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸಿ ತನ್ನ 'ಹಿಂದೂ ವೋಟ್ ಬ್ಯಾಂಕ'ನ್ನು ಕ್ರೋಢೀಕರಿಸದಿದ್ದರೆ ಕೇಂದ್ರದಲ್ಲಿ ರಾಜಕೀಯ ಅಧಿಕಾರದ ಲಗಾಮು ಹಿಡಿಯುವ ಸಾಧ್ಯತೆ ಇಲ್ಲ ಎಂದು ಅಂದಾಜು ಮಾಡಿರಬೇಕು. ತಾನು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಅದು ಕೈಗೊಂಡಿರುವ ಕೋಮುವಾದಿ ಧ್ರುವೀಕರಣದ ಮೈನಡುಗಿಸುವ ಚಿತ್ರ ಕರ್ನಾಟಕದಲ್ಲಿ ಶ್ರೀರಾಮ ಸೇನೆಯ '(ಅ)ನೈತಿಕ ಪಹರೆ' ಕೆಲಸ ಮತ್ತು ಗೂಂಡಾಗಿರಿಯ ಸ್ವರೂಪದಲ್ಲಿ ಪ್ರಕಟಗೊಂಡಿದೆ. ಈ ರೀತಿ ಕೋಮುವಾದಿ ಧ್ರುವೀಕರಣವನ್ನು ಕ್ರೋಢೀಕರಿಸುವುದೇ ವೋಟು ಗಿಟ್ಟಿಸುವ ತನ್ನ ಪ್ರಧಾನ ಸಾಧನ ಎಂದು ಅದು [illegible]ಸಿದಂತಿದೆ. ಶೀರಾ ಇತ್ತೀಚೆಗೆ ಉತ್ತರಪ್ರದೇಶದ ಪಿಲಿಭಿತ್‌ನಲ್ಲಿ ಅದರ ಅಭ್ಯರ್ಥಿಯ ವಿಷಕಾರುವ ಭಾಷಣಗಳಿಗೆ ಅದು ನೀಡಿರುವ ಸ್ಪಷ್ಟ ಸಮರ್ಥನೆ, ಬೆಂಬಲ ಇದನ್ನು ಬಯಲಿಗೆಳೆದಿದೆ.

ಮೊದಲು 'ಹಿಂದೂ ರಾಷ್ಟ್ರ', ಬೇರೆಲ್ಲ ನಾಮಮಾತ್ರ

ರಾಮ ನವಮಿಯ ದಿನ ಬಿಡುಗಡೆಗೊಳಿಸಿದ 2009ರ ಬಿಜೆಪಿ ಪ್ರಣಾಳಿಕೆ ಈ ಸೈದ್ಧಾಂತಿಕ ಒತ್ತನ್ನು ಬಿಂಬಿಸುತ್ತದೆ. ಅದು ಆರಂಭವಾಗುವುದು 'ಭಾರತದ ಇತಿಹಾಸವನ್ನು ನೆನಪಿಸಿಕೊಳ್ಳಿ' ಎಂಬ ಅಧ್ಯಾಯದೊಂದಿಗೆ; ಮುಕ್ತಾಯಗೊಳ್ಳುವುದು 'ನಮ್ಮ ಸಾಂಸತಿಕ ಪರಂಪರೆಯ ರಕ್ಷಣೆ' ಎಂಬ ಅಧ್ಯಾಯದೊಂದಿಗೆ. ಮಾಧ್ಯಮಗಳಿಗೆ ಕೊಟ್ಟ ಅದರ 'ಕಾರ್ಯಕಾರಿ ಸಾರಾಂಶ ಮತ್ತು ಮುಖ್ಯಾಂಶಗಳು' ನಾಗರಿಕತೆಯ ರಕ್ಷಣೆ ಎಂಬೊಂದು ವಿಭಾಗವನ್ನು ಹೊಂದಿದೆ. ಅದು ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ಒಂದು 'ಭವ್ಯ ರಾಮ ದೇವಸ್ಥಾನ'ವನ್ನು ಕಟ್ಟುವ ಕಟ್ಟಾ ಕೋಮುವಾದಿ ಅಜೆಂಡಾವನ್ನು ಮತ್ತೆ ರಂಗಸ್ಥಳದ ಮಧ್ಯಕ್ಕೆ ತಂದಿದೆ. 'ಪವಿತ್ರ ರಾಮಸೇತು'ವನ್ನು ಮುಟ್ಟಬೇಡಿ ಎಂದು ಅದು ಬೆದರಿಸುತ್ತದೆ. 'ಗೋರಕ್ಷಣೆ' ಬಿಜೆಪಿಯ 'ನಂಬಿಕೆ'ಯ ವಿಷಯ, ಅದನ್ನು ನಿರಂತರವಾಗಿ ಅನುಸರಿಸಲಾಗುವುದಂತೆ. ಜಮ್ಮು-ಕಾಶ್ಮೀರಕ್ಕೆ ಒಂದು ವಿಶೇಷ ಸ್ಥಾನಮಾನ ಕೊಟ್ಟಿರುವ ಸಂವಿಧಾನದ 370 ನೇ ಕಲಮನ್ನು ತೆಗೆದು ಹಾಕಲಾಗುವುದು ಹಾಗೂ ಸಮಾನ ನಾಗರಿಕ ಸಂಹಿತೆಯನ್ನು ಹೇರಲಾಗುವುದು ಎಂದು ಇದರಿಂದ ಸ್ಪಷ್ಟವಾಗುತ್ತದೆ.



ಕೃಪೆ: ದಿ ಹಿಂದೂ

ಭಾರತ ಎಂದೆಂದೂ ಹಿಂದೂರಾಷ್ಟ್ರವಾಗಿತ್ತು ಹಾಗೂ ಹಿಂದೂರಾಷ್ಟ್ರವಾಗಿಯೇ ಉಳಿಯುತ್ತದೆ ಎಂಬ ಆರೆಸ್ಸೆಸ್ ಕಣ್ಣೋಟದೊಂದಿಗೇ ಬಿಜೆಪಿಯ ಈ ಪ್ರಣಾಳಿಕೆ ಆರಂಭವಾಗುತ್ತದೆ ಮತ್ತು ಅದರೊಂದಿಗೇ ಅಂತ್ಯವಾಗುತ್ತದೆ. ಇದು ಆಧುನಿಕ ಭಾರತದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಸ್ವರೂಪದ ಬುನಾದಿಯನ್ನೇ ಬಹಿರಂಗವಾಗಿ ತಿರಸ್ಕರಿಸುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಈ ಆರಂಭ ಮತ್ತು ಅಂತ್ಯದ ನಡುವೆ ಇರುವ ಪುಟಗಳಲ್ಲಿ ಹಲವಾರು ದೀರ್ಘಕಾಲದ ಬೇಡಿಕೆಗಳನ್ನು ತುರುಕಲಾಗಿದೆ. ಇವೆಲ್ಲಾ ಹೆಸರಿಗಷ್ಟೇ, ಇತರ ಹಲವು ರಾಜಕೀಯ ಪಕ್ಷಗಳ ಪ್ರಣಾಳಿಕೆಗಳಲ್ಲೂ ಇರುವ ಸಂಗತಿಗಳಷ್ಟೆ.

ಅಧಿಕಾರದಲ್ಲಿದ್ದಾಗ ಮಾಡಿದ್ದೇನು?

ಇವುಗಳಲ್ಲಿ ಹೆಚ್ಚಿನವುಗಳನ್ನು ಬಿಜೆಪಿ ನೇತೃತ್ವದ ಎನ್‌ಡಿಎ ಆರು ವರ್ಷಗಳ ಕಾಲ ಅಧಿಕಾರದಲ್ಲಿ ಇದ್ದಾಗ ಜಾರಿ ಮಾಡಬಹುದಿತ್ತು, ಆದರೆ ಮಾಡಿರಲಿಲ್ಲ.

ಅವರೀಗ ಕೃಷಿ ಸಾಲಗಳ ಮನ್ನಾದ ಬಗ್ಗೆ ಮಾತಾಡುತ್ತಾರೆ. ಅವರು ಅಧಿಕಾರದಲ್ಲಿ ಇದ್ದಾಗ ಕೃಷಿ ಬಿಕ್ಕಟ್ಟು ತೀವ್ರಗೊಂಡು, ಬೆಳವಣಿಗೆಯ ಬದಲು ಕುಂಠಿತಗೊಂಡು ಹತಾಶ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾಗ ಈ ಬೇಡಿಕೆಯನ್ನು ಎಡಪಕ್ಷಗಳು ಎತ್ತಿದ್ದವು. ಆದರೆ ಆಗ ಇದನ್ನು ಪರಿಶೀಲಿಸಲೂ ಬಿಜೆಪಿ ನಿರಾಕರಿಸಿತ್ತು. ಇಂದು ಅವರು ರೈತರ ಆದಾಯ ವಿಮೆ ಯೋಜನೆಯನ್ನು ಆರಂಭಿಸುವುದಾಗಿ ಹೇಳುತ್ತಿದ್ದಾರೆ. ಆದರೆ ಆಗ ಸರಕಾರ ನಡೆಸುತ್ತಿದ್ದಾಗ ಬೆಳೆ ವಿಮೆ ತರಬೇಕೆಂಬ ಬೇಡಿಕೆಗಳನ್ನೆಲ್ಲಾ ಸಾರಾಸಗಟು ತಿರಸ್ಕರಿಸಿದ್ದರು.

ಆಳುವ ಮಂದಿ ಹೇಳುವ "ಕಾರ್ಮಿಕ ಸುಧಾರಣೆಗಳ'ನ್ನು ತರಬೇಕು, ಮಾಲಕರು ತಮಗೆ ಮನಬಂದಂತೆ ನೌಕರರನ್ನು ನೇಮಿಸಿಕೊಳ್ಳುವ ಅಥವಾ ತೆಗೆದು ಹಾಕುವ ಹಕ್ಕು ಇರಬೇಕು ಎಂದೂ ಇದುವರೆಗೆ ವಾದಿಸುತ್ತಾ ಬಂದಿರುವ ಪಕ್ಷ, ಈಗ, ಅಸಂಘಟಿತ ಕಾರ್ಮಿಕರಿಗೆ ಸುರಕ್ಷಣಾ ಜಾಲ ಒದಗಿಸಬೇಕು, ಕನಿಷ್ಠ ಕೂಲಿಗಳನ್ನು ಹೆಚ್ಚಿಸಬೇಕು, ಕೂಲಿ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದೆಲ್ಲಾ ಮಾತಾಡುತ್ತಿದೆ!

ಇದೇ ರೀತಿ ಸೇನಾ ನಿವೃತ್ತರಿಗೆ 'ಒಂದು ಹುದ್ದೆ, ಒಂದು ಪೆನ್ಶನ್' ಬಗ್ಗೆ ಭರವಸೆ ನೀಡಲಾಗಿದೆ. ಇದೂ ಬಹಳ ಹಳೆಯ ಬೇಡಿಕೆಗಳಲ್ಲಿ ಒಂದು, ತಾವು ಅಧಿಕಾರದಲ್ಲಿ ಇದ್ದಾಗ ಯಾಕೆ ಜಾರಿಗೆ ತರಲಿಲ್ಲವೋ?

ಮತ್ತೆ ಅದೇ ಮಹಿಳಾ ಮೀಸಲಾತಿಯ ಜಾರಿಯ ಭರವಸೆ. ಆರು ವರ್ಷಗಳ ಕಾಲ ಅಧಿಕಾರದಲ್ಲಿ ಇದ್ದಾಗ ಅದನ್ನು ಯಾಕೆ ಉದ್ದೇಶಪೂರ್ವಕವಾಗಿ ಮುಂದೆ ತಳ್ಳುತ್ತಾ ಬರಲಾಯಿತು ಎಂದು ಹೇಳುತ್ತಿಲ್ಲ.

ಭಯೋತ್ಪಾದನೆಗೆ ಧರ್ಮವಿಲ್ಲ, ಜಾತಿಯಿಲ್ಲ, ಪ್ರದೇಶವಿಲ್ಲ ಎಂದು ಕೆಲವು ಬಿಜೆಪಿ ಮುಖಂಡರೂ ಬಾಯುಪಚಾರಕ್ಕಾದರೂ ಹೇಳುತ್ತಿರುತ್ತಾರೆ. ಆದರೆ ಅವರ ಪ್ರಣಾಳಿಕೆಯಲ್ಲಿ ಈ ಕುರಿತ ಇಡೀ ವಿಭಾಗ ಭಯೋತ್ಪಾದನೆಯನ್ನು ಒಂದು ಕೋಮಿನೊಡನೆ ಸಮೀಕರಿಸುವ ಕೋಮುವಾದೀ ನಿಲುವಿನ ವಾಸನೆಯನ್ನೇ ಸೂಸುತ್ತಿದೆ. ಹಿಂದುತ್ವ ಸಂಘಟನೆಗಳಿಂದ ಭಯೋತ್ಪಾದಕ ದಾಳಿಗಳ ಬಗ್ಗೆ ಹೆಚ್ಚೆಚ್ಚು ಪುರಾವೆಗಳು ಬಯಲಾಗುತ್ತಿದ್ದರೂ ಆ ಬಗ್ಗೆ ಪ್ರಸ್ತಾಪವೇ ಇಲ್ಲ. ಪೋಟಾವನ್ನು ಇನ್ನಷ್ಟು ಕರಾಳ ರೂಪದಲ್ಲಿ ತರಲಾಗುವುದು ಎಂಬ ಭರವಸೆ ಬಿಟ್ಟರೆ ಈ ಪ್ರಣಾಳಿಕೆಯಲ್ಲಿ ಭಯೋತ್ಪಾದನೆಯ ಬಗ್ಗೆ ಹೊಸದೆಂಬುದು, ಬೇರೆಯವರು ಈಗಾಗಲೇ ಹೇಳದೇ ಬಿಟ್ಟಿರುವುದು ಏನೂ ಇಲ್ಲ.

ಆರ್ಥಿಕ ಸುಧಾರಣೆಗಳ ನವ-ಉದಾರವಾದಿ ನೀತಿಗೆ ತನ್ನ ಆಳವಾದ ಬದ್ಧತೆಯನ್ನು ಪ್ರದರ್ಶಿಸಿರುವ ಬಿಜೆಪಿಯ ಈ ಪ್ರಣಾಳಿಕೆ ಈಗ ವ್ಯಾಪಿಸುತ್ತಿರುವ, ಮುಂದೆ ಇನ್ನಷ್ಟು ತೀವ್ರಗೊಳ್ಳಲಿರುವ ಜಾಗತಿಕ ಆರ್ಥಿಕ ಹಿಂಜರಿತದಿಂದ ಭಾರತ ತನ್ನನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬ ಬಗ್ಗೆ ಏನೇನೂ ಹೇಳಿಲ್ಲ. ಜಾಗತಿಕ ಹಿಂಜರಿತದ ವಿನಾಶಕಾರೀ ಪ್ರಭಾವದಿಂದ ಭಾರತದ ಜನತೆಯನ್ನು ಕಾಪಾಡಲು ಎಂತಹ ಹೊಸ ನಿಲುವುಗಳನ್ನು ತಳೆಯ ಬಹುದು ಎಂಬ ಒಂದೇ ಒಂದು ವಿಚಾರವನ್ನೂ ಮುಂದಿಡಲು ಅದಕ್ಕೆ ಆಗಿಲ್ಲ.

ಕಣ್ಣಿಗೆ ಮಣ್ಣೆರಚಲು ಎನ್‌ಡಿಎ ಕಾರ್ಯಕ್ರಮ!

ಹೀಗೆ ಅಬ್ಬರದ ಉದ್ಗಾರಗಳನ್ನು, ಟೊಳ್ಳು ಮಾತುಗಳನ್ನು ಬಿಟ್ಟರೆ ಬಿಜೆಪಿಯ ಈ ಪ್ರಣಾಳಿಕೆಯಲ್ಲಿ ಕಾಣುವುದು ಅದರ ಕಟ್ಟಾ ಕೋಮುವಾದಿ ಅಜೆಂಡಾದ ಚರ್ವಿತ ಚರ್ವಣವಷ್ಟೇ. ಬಿಜೆಪಿ ಎಂಬುದು ಆರೆಸ್ಸೆಸ್‌ನ ರಾಜಕೀಯ ಅಂಗ ಎಂಬ ಬಗ್ಗೆ ಇನ್ನೂ ಯಾರಿಗಾದರೂ ಅನುಮಾನವಿದ್ದರೆ ಈ ಪ್ರಣಾಳಿಕೆ ಅದನ್ನೂ ಪರಿಹರಿಸುತ್ತದೆ.

ಆದರೆ ಕೇಂದ್ರದಲ್ಲಿ ಸರಕಾರದ ಮೂಲಕ ಪ್ರಭುತ್ವಾಧಿಕಾರದ ಲಗಾಮನ್ನು ಮತ್ತೆ ತನ್ನ ಕೈಗೆ ತಗೊಳ್ಳುವ ಪ್ರಯತ್ನದಲ್ಲಿ ಬಿಜೆಪಿ ಈ ಕಟ್ಟಾ ಕೋಮುವಾದಿ ಅಜೆಂಡಾದ ಪ್ರಸ್ತಾಪವಿಲ್ಲದ ಒಂದು ಕಾರ್ಯಕ್ರಮವನ್ನು ಎನ್‌ಡಿಎ ಪರವಾಗಿ ಪ್ರಕಟಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಮತ್ತೊಮ್ಮೆ 'ಇಲ್ಲಿಯೂ ಸಲ್ಲುವ, ಅಲ್ಲಿಯೂ ಸಲ್ಲುವ' ಎಡಬಿಡಂಗಿತನದ ಪ್ರದರ್ಶನವೂ ಬರಬಹುದು. ಇತ್ತ ತನ್ನ ಸ್ವಂತ ಪ್ರಣಾಳಿಕೆಯೊಂದಿಗೆ ತನ್ನ 'ವೋಟ್ ಬ್ಯಾಂಕ್'ನ ಕ್ರೋಢೀಕರಣ, ಅತ್ತ ತನ್ನ ಮಿತ್ರರನ್ನು ಸಂತುಷ್ಟಗೊಳಿಸಲು, ತನ್ನದೇ ಪ್ರಣಾಳಿಕೆಗೆ ತದ್ವಿರುದ್ಧವಾದ ಒಂದು 'ಶುದ್ಧೀಕರಿಸಿದ' ಎನ್‌ಡಿಎ ಅಜೆಂಡಾ! ಇಂತಹ ಕಣ್ಣಿಗೆ ಮಣ್ಣೆರಚುವ ಪ್ರಯತ್ನಗಳ ಬಗ್ಗೆ ಭಾರತದ ಜನತೆ ಈಗ ಸಾಕಷ್ಟು ಪರಿಚಯ ಪಡೆದಿದೆ. ಮತ್ತೊಮ್ಮೆ ಅವರು ಅದಕ್ಕೆ ಬಲಿಯಾಗುವುದಿಲ್ಲ.

ಮುಖವಾಡ ತೊಡಬಹುದು

ಕೇಂದ್ರದಲ್ಲಿ ಸರಕಾರದ ಮೂಲಕ ಪ್ರಭುತ್ವಾಧಿಕಾರದ ಲಗಾಮನ್ನು ಮತ್ತೆ ತನ್ನ ಕೈಗೆ ತಗೊಳ್ಳುವ ಪ್ರಯತ್ನದಲ್ಲಿ ಬಿಜೆಪಿ ಈ ಕಟ್ಟಾ ಕೋಮುವಾದಿ ಅಜೆಂಡಾದ ಪ್ರಸ್ತಾಪವಿಲ್ಲದ ಒಂದು ಕಾರ್ಯಕ್ರಮವನ್ನು ಎನ್‌ಡಿಎ ಪರವಾಗಿ ಪ್ರಕಟಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಇತ್ತ ತನ್ನ ಸ್ವಂತ ಪ್ರಣಾಳಿಕೆಯೊಂದಿಗೆ ತನ್ನ 'ವೋಟ್ ಬ್ಯಾಂಕ್'ನ ಕ್ರೋಢೀಕರಣ, ಅತ್ತ ತನ್ನ ಮಿತ್ರರನ್ನು ಸಂತುಷ್ಟಗೊಳಿಸಲು, ತನ್ನದೇ ಪ್ರಣಾಳಿಕೆಗೆ ತದ್ವಿರುದ್ಧವಾದ ಒಂದು 'ಶುದ್ಧೀಕರಿಸಿದ' ಎನ್‌ಡಿಎ ಅಜೆಂಡಾ! ಇಂತಹ ಕಣ್ಣಿಗೆ ಮಣ್ಣೆರಚುವ ಪ್ರಯತ್ನಗಳ ಬಗ್ಗೆ ಭಾರತದ ಜನತೆ ಈಗ ಸಾಕಷ್ಟು ಪರಿಚಯ ಪಡೆದಿದೆ. ಮತ್ತೊಮ್ಮೆ ಅವರು ಅದಕ್ಕೆ ಬಲಿಯಾಗುವುದಿಲ್ಲ.



ಜನರ ಬದುಕಿನ ಸಂಕಟಗಳು, ಸಮಸ್ಯೆಗಳು, ಚುನಾವಣೆಗಳ ಪ್ರಚಾರದ, ಚರ್ಚೆಯ ಪ್ರಧಾನ ವಿಷಯವಾಗಬೇಕು. ಕೋಮುದ್ವೇಷ, ಮತಾಂಧತೆ ಕೆಣಕುವುದಲ್ಲ. ಲೋಕಸಭಾ ಚುನಾವಣೆಯ ಹಿನ್ನೆಲೆಯ ದಕ್ಷಿಣ ಕನ್ನಡ ಜಿಲ್ಲೆ ಜನರ ಬದುಕಿನ ಸಮಸ್ಯೆಗಳೇನು? ಈ ಕುರಿತು ಒಂದು ಬರಹ ಇಲ್ಲಿದೆ.

ದಕ್ಷಿಣ ಕನ್ನಡ :

ನಿರುದ್ಯೋಗ, ಆದಾಯ ಕುಸಿತ, ಕೃಷಿ ಬಿಕ್ಕಟ್ಟು... ನಿಜ ಚಿತ್ರ

ಕೃಷ್ಣಪ್ಪ ಕೊಂಬಾಡಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿರುವ ಕೊಡುಗೆಯ ಬಗ್ಗೆ ಸಾಕಷ್ಟು ತಪ್ಪು ತಿಳುವಳಿಕೆ ಇದೆ. ಬಹಳಷ್ಟು ಚಳುವಳಿಗಳು ನಡೆದೇ ಇಲ್ಲ ಎಂಬ ಭಾವನೆ ಇದೆ. ಆದರೆ ಇದು ವಾಸ್ತವವಲ್ಲ. ಬ್ರಿಟಿಷರು ದ.ಕ.ಜಿಲ್ಲೆಯಲ್ಲಿ ಅಧಿಕಾರ ವಹಿಸಿದ ಪ್ರಾರಂಭದ ದಿನಗಳಿಂದಲೇ ಸಾಮಾನ್ಯ ಜನ ಹೋರಾಟಕ್ಕೆ ಇಳಿದು ಬ್ರಿಟಿಷ್ ಅಧಿಪತ್ಯಕ್ಕೆ ಸಿಂಹಸ್ವಪ್ನವಾದರು. ಜನರನ್ನು ಒಡೆಯುವ ಬ್ರಿಟಿಷರ ತಂತ್ರದ ವಾರಸುದಾರರಾದ ಸಂಘ ಪರಿವಾರ ಇಂದು ಅದನ್ನೇ ಮುಂದುವರೆಯುತ್ತಿದೆ. ಮತೀಯ ಸೌಹಾರ್ದತೆ ಮಾತ್ರವಲ್ಲ ಭಾಷಾ ಸೌಹಾರ್ದತೆಯ ತವರೂರಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಹೊರ ರಾಜ್ಯದ'ದವರೆಂದು ಅಪಸ್ವರದ ಕೂಗಿಗೆ ಕಳೆದ ವರುಷ ಬಿಜೆಪಿ ನಾಯಕತ್ವ ನೀಡಿತ್ತು.

ಬಹಳ ವಿಸ್ಮಯದ ಸಂಗತಿ ಎಂದರೆ 1891ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 32 ವಿವಿಧ ಭಾಷೆಗಳನ್ನು ಆಡುವ ಜನರಿದ್ದಾರೆಂದು ಗುರುತಿಸಲಾಗಿದೆ. ಇಂತಹ ನಾಡು ಇಂದು ಭಾಷಾ ದುರಾಭಿಮಾನಕ್ಕೂ ಅಪವಾದವಾಗಬೇಕೇ?

ಅಂದು ಅಕ್ಕಿಯ ಉತ್ಪಾದನೆಗೆ ಹೆಸರಾಗಿದ್ದ ದ.ಕ.ಜಿಲ್ಲೆ ಮೊದಲಾದವುಗಳು ಗೋವಾ, ಮುಂಬಾಯಿ, ಮಲಬಾರ್, ಹಾಗೂ ಅರಬ್ ರಾಷ್ಟ್ರಗಳಿಗೆ ರಫ್ತಾಗುವಷ್ಟು ಬೆಳೆಸಲಾಗುತ್ತಿತ್ತು.

ಆದರೆ ಇಂದು ದ.ಕ.ಜಿಲ್ಲೆಯಲ್ಲಿ ಉತ್ಪಾದಿಸಲಾಗುತ್ತಿರುವ ಅಕ್ಕಿ ಇಲ್ಲಿಯ ಜನಸಂಖ್ಯೆಯ ಕೇವಲ ಶೇ.2 ಜನರಿಗೆ ಸಾಕಾಗುವಷ್ಟಿಲ್ಲ. ಮೂರು ನಾಲ್ಕು, ದಶಕಗಳ ಹಿಂದೆಯೇ ದ.ಕ.ಜಿಲ್ಲೆಯಲ್ಲಿ ಆಹಾರದ ಬೆಳೆಯಿಂದ ವಾಣಿಜ್ಯ ಬೆಳೆಗಳಿಗೆ ಲಗ್ಗೆಇಟ್ಟ ಕೃಷಿಕರು ಗದ್ದೆಗಳನ್ನು ಅಡಿಕೆ, ಕೊಕ್ಕೋ ತೋಟವನ್ನಾಗಿ ಮಾರ್ಪಡಿಸಿಕೊಂಡರು. ತೆಂಗು, ಕಂಗು(ಅಡಿಕೆ) ಬೆಲೆ ಕುಸಿತಕ್ಕೆ (ಜಾಗತೀಕರಣದ ಪರಿಣಾಮ) ಒಳಗಾಗಿ ಒಂದು ದಶಕದಿಂದ ಇದೇ ರೀತಿ ಮುಂದುವರಿದಿರುತ್ತದೆ. ಇಂತಹ ಸನ್ನಿವೇಶದಲ್ಲಿ ಅಡಿಕೆ ತೋಟವೂ ಮಾಯವಾಗಿ ಆ ಭೂಮಿ ಲ್ಯಾಂಡ್ ಮಾಫಿಯಾಗಳ ಪಾಲಾಗುತ್ತಿದೆ. ಅಡಿಕೆ ತೋಟದ ನಿರ್ವಹಣೆ ಮತ್ತು ಅದರಿಂದ ಬರುವ ಉತ್ಪಾದನೆಗೆ ತಾಳಮೇಳವಾಗದೇ ಪಾಳು ಬಿಡಲಾಗುತ್ತಿದೆ. ಕೃಷಿಕರು ಸಾಲದ ಸುಳಿಗೆ ಒಳಗಾಗುತ್ತಿದ್ದಾರೆ. ಎಲ್ಲಾ



ರೀತಿಯಲ್ಲೂ ಕೃಷಿಯ ಬಗ್ಗೆ ನಿರಾಶೆ ಬೆಳೆಯುತ್ತಿದೆ. ನಗರ ವ್ಯಾಪ್ತಿಯ ಪರಿಸರದಲ್ಲಿರುವ ತೋಟಗಳಿಗೆ, ಗದ್ದೆಗಳಿಗೆ ಕೃಷಿ ಮತ್ತು ಕೆಲಸ ಕಾರ್ಯಗಳಿಗೆ ಸ್ಥಳೀಯ ಕೃಷಿ ಕೂಲಿ ಕಾರ್ಮಿಕ ಲಭ್ಯತೆ ಕಡಿಮೆಯಾಗಿದೆ. ಇದಕ್ಕೆ ಮುಖ್ಯ ಕಾರಣ ಕೃಷಿ ಕೂಲಿ ಕಾರ್ಮಿಕರಿಗೆ ಕಡಿಮೆ ಸಂಬಳ ನೀಡಲಾಗುತ್ತಿದೆ. ಖಾಯಂ ಕೆಲಸವಿದೆ ಎಂಬ ಅಂಶಕ್ಕಾಗಿ ಜೀವನ ನಿರ್ವಹಣೆಗೆ ಅಸಾಧ್ಯವಾದ ಸಂಬಳಕ್ಕೆ ಜನ ದುಡಿಯುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಗ್ರಾಮೀಣ ಪ್ರದೇಶದಿಂದ ಜನ ನಗರಕ್ಕೆ ವಲಸೆ ಹೋಗುತ್ತಿದ್ದಾರೆ. ಅನಿವಾರ್ಯವಾಗಿ ಗ್ರಾಮೀಣ ಪ್ರದೇಶದಲ್ಲೇ ಇರಬೇಕಾದ ಜನರ ಬದುಕು ತೀವ್ರ ಬಡತನದಿಂದ



ನಲುಗುತ್ತಿದೆ. ವ್ಯವಸ್ಥಿತವಾದ, ವಸತಿ ಇಲ್ಲದ, ಶಿಕ್ಷಣ ಉಡುಗೆ ತೊಡುಗೆ ಆಹಾರಕ್ಕಾಗಿ ಈ ಶತಮಾನದಲ್ಲೂ ಪರದಾಡುತ್ತಿದ್ದಾರೆ. ಕಳೆದ ಶತಮಾನದ ಕ್ರೂರ ಬಡತನದಿಂದ ಕಂಗಾಲಾಗಿದ್ದ ಜನತೆಗೆ ಬೀಡಿ ಉದ್ಯಮದ ಪ್ರವೇಶ ಸ್ವಲ್ಪಮಟ್ಟಿಗೆ ಪರಿಹಾರ ಒದಗಿಸಿತ್ತು ಎಂಬುದು ವಾಸ್ತವಿಕ ಅಂಶ. ಆದರೆ ಕಳೆದೊಂದುವರೆ ದಶಕದಿಂದ ಕೈಗಾರಿಕಾ ನೀತಿ, ಜಾಗತೀಕರಣದ ದುಷ್ಪರಿಣಾಮ ಬೀಡಿ ಉದ್ಯಮಕ್ಕೂ ತಗುಲಿದೆ. ಇಂತಹ ಸನ್ನಿವೇಶದಲ್ಲಿ ಎಡ ಕಾರ್ಮಿಕ ಸಂಘಟನೆಗಳು ಬೀಡಿ ಉದ್ಯಮದ ಉಳಿವಿಗಾಗಿ ಹೋರಾಡುತ್ತಿದ್ದಾರೆ.

ಆದರೆ ಹೊಸ ಪೀಳಿಗೆಯ ಯುವತಿಯರು ಪರ್ಯಾಯ ಉದ್ಯೋಗಾವಕಾಶಕ್ಕಾಗಿ ಅರಸುತ್ತಾ ಬೀಡಿ ಉದ್ದಿಮೆಗೆ ವಿಮುಖರಾಗುತ್ತಿದ್ದಾರೆ. ಅಲ್ಪಸ್ವಲ್ಪ ಪ್ರೌಢ ಪ್ರಾಥಮಿಕ ಶಿಕ್ಷಣ ಪಡೆದ ಹೆಣ್ಣು ಮಕ್ಕಳು ವಿವಿಧ ಸೇವಾರಂಗಗಳಲ್ಲಿ ದುಡಿಯುವ ವಿದ್ಯಮಾನ ಬೆಳೆಯುತ್ತಿದೆ. ಬೀಡಿಯಲ್ಲಿ ಒಂದು ತಿಂಗಳಿಗೆ ದೊರೆಯುವ ಸಂಬಳ ಹೆಚ್ಚೆಂದರೆ ಐನೂರು, ಆರು ನೂರು ರೂಪಾಯಿ, ಇದರ ಬದಲು ಅಂಗಡಿಗಳಲ್ಲಿ ಟೆಲಿಫೋನ್, ಜೆರಾಕ್ಸ್, ಫ್ಯಾಕ್ಟರಿಗಳಲ್ಲಿ ಏನಿಲ್ಲವೆಂದರೂ ತಿಂಗಳಿಗೆ ಒಂದೂವರೆ ಸಾವಿರ ರೂಪಾಯಿ ದೊರೆಯುವ ಕಾರಣ ಅತ್ತ ಸಾಗುತ್ತಿದ್ದಾರೆ.

ಕಟ್ಟಡ ಕಾರ್ಮಿಕರ ಬದುಕು

ಕಟ್ಟಡ ಮತ್ತು ನಿರ್ಮಾಣ ರಂಗದಲ್ಲಿ ಹಾಗೂ ಇನ್ನಿತರ ಅಸಂಘಟಿತ ಕ್ಷೇತ್ರಗಳಲ್ಲಿ ಅತೀ ದೊಡ್ಡಸಂಖ್ಯೆಯಲ್ಲಿ ಜನ ದುಡಿಯುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಕನಿಷ್ಠ ಜೀವನ ನಿರ್ವಹಣೆಗೆ ಯೋಗ್ಯವಾದ ಕೂಲಿ ದೊರೆಯುತ್ತಿದೆ. ಆದರೆ ವರ್ಷ ಪೂರ್ತಿ ದುಡಿಮೆ ಸಿಗುವುದು ಕಷ್ಟ. ಕನ್‌ಸ್ಟ್ರಕ್ಷನ್ ಕಂಪನಿಗಳಲ್ಲಿ ದುಡಿಯುವವರಿಗೆ ವರ್ಷಪೂರ್ತಿ ಕೆಲಸ ದೊರೆತರೂ ಸಂಬಳ ಅತ್ಯಲ್ಪ. ಇವರಿಗೆ ಯಾವುದೇ ರೀತಿಯ ಜೀವನಾಧಾರ ಕಾನೂನುಬದ್ಧ ಇತರ ಸೌಲಭ್ಯಗಳು ಇತ್ತೀಚಿನ ತನಕವೂ ದೊರೆಯುತ್ತಿಲ್ಲ. ಕಳೆದೊಂದು ದಶಕದ ವಿದ್ಯಮಾನವೆಂದರೆ ವಲಸೆ ಕಾರ್ಮಿಕರಾಗಿ ರಾಜ್ಯದ ವಿಜಾಪುರ, ಬಾಗಲಕೋಟೆ, ಧಾರವಾಡ ಜಿಲ್ಲೆಗಳಿಂದ ಸಾವಿರ ಸಾವಿರ ಸಂಖ್ಯೆಯಲ್ಲಿ ಕೂಲಿ ಹುಡುಕಿಕೊಂಡು ದ.ಕ.ಜಿಲ್ಲೆಗೆ ಕೂಲಿಕಾರರು ಬಂದಿದ್ದು, ಕೆ.ಎಸ್.ಟಿ.ಆರ್.ಸಿ. ಬಸ್ ಸ್ಟ್ಯಾಂಡ್‌ಗಳಲ್ಲಿ ಚಿಕ್ಕಪುಟ್ಟ ಪಟ್ಟಣಗಳಲ್ಲಿ ಕೂಲಿಗಾಗಿ ಕಂಟ್ರ್ಯಾಕ್ಟರ್‌ಗಳು ಬಂದು ಕರೆದುಕೊಂಡು ಹೋಗುವುದನ್ನು ಕಾಯುತ್ತಾ ಇರುತ್ತಾರೆ. ಈ ಕಾರ್ಮಿಕರು ಪಾಳುಬಿದ್ದ ಬಸ್‌ಸ್ಟ್ಯಾಂಡ್ ಮತ್ತು ಮನೆಗಳಲ್ಲಿ ಬೀದಿ ಬದಿಗಳಲ್ಲಿ ಸಂಸಾರ ಸಮೇತರಾಗಿ ಬದುಕುತ್ತಿದ್ದಾರೆ. ಇತ್ತೀಚಿಗೆ ಆಂಧ್ರ ಮೂಲದ ಜನತೆಯೂ ಬಿಹಾರ ಮೂಲದ ಜನತೆಯೂ, ಸಾಕಷ್ಟು ಸಂಖ್ಯೆಯಲ್ಲಿ ಕಟ್ಟಡ ಕಾರ್ಮಿಕರಿಗಿರುವ 'ಕೂಲಿ ಮಾರ್ಕೆಟ್'ನ್ನು ಬಂದು ಸೇರುತ್ತಿದ್ದಾರೆ. ಮಂಗಳೂರು ತಾಲ್ಲೂಕಿನ ಮುಲ್ಕಿ ಸಮೀಪದಲ್ಲಿ 'ಬಿಜಾಪುರ ಕಾಲೋನಿ'ಮತ್ತು ಕುಂಜತ್ತ ಬೈಲಿನ ಜ್ಯೋತಿನಗರದಲ್ಲಿ ಬಂದು ಇಂತಹ ಕಾಲೋನಿ ರೂಪಿತಗೊಂಡಿದೆ. ಮೊದ ಮೊದಲು ಬಂದವರು.. ಕುಟುಂಬ ರೂಪದಲ್ಲಿ ಸಂಘಟಿತರಾಗಿ ಮನೆಯನ್ನು ಹೊಂದಿರುತ್ತಾರೆ. ದ.ಕ.ದ ಇತಿಹಾಸದಲ್ಲಿ ಕಳೆದ ಶತಮಾನದ ಪ್ರಾರಂಭದಲ್ಲಿ ತಮಿಳುನಾಡಿನ ಮೂಲದಿಂದ ಇಂತಹ ವಲಸೆ ಕಾರ್ಮಿಕರು ಆಗಮಿಸಿ ದೀರ್ಘ ಅವಧಿಯಲ್ಲಿ ಮಂಗಳೂರು ನೆಹರೂ ಮೈದಾನದ ಸುತ್ತಮುತ್ತ ಅಲೆಮಾರಿ ಬದುಕು ಸಾಗಿಸುತ್ತಾ ಇದ್ದರು. ಅ... ತಲೆಮಾರು ಈಗ ನಶಿಸುತ್ತಾ ಬಂದು ಹ... ಸಾವಿರದಷ್ಟಿದ್ದ ಈ ವಲಸೆ ಕಾರ್ಮಿಕರ ಸಂಖ್ಯೆ ಕೆಲವೇ ಕೆಲವು ನೂರಕ್ಕೆ ಇಳಿದಿದೆ. ಬಹಳ... ಪ್ರಾಯ ಆಗಿ ತೀರಿ ಹೋದರೆ, ಕೆಲವರು... ಊರಿಗೆ ಮರಳುತ್ತಿದ್ದಾರೆ. ಅದೇ ರೀತಿ ಕೆಲ... ಮನೆ, ಪಾರ ಸಂಸಾರ ರೂಪಿಸಿಕೊಂಡು ... ಬೇರ ಪ್ರದೇಶದಲ್ಲಿ ನೆಲೆನಿಂತಿರುತ್ತಾರೆ. ಅ... ತಮಿಳುನಾಡಿನ ಜನತೆ ವಲಸೆ ಕಾರ್ಮಿಕರ ಸ್ಥಾನ... ಇದ್ದರೆ ಇಂದು ಉತ್ತರ ಕರ್ನಾಟಕದ ಜನತೆಯಿ... ತುಂಬಿದೆ. ಈ ವಲಸೆ ಕಾರ್ಮಿಕರೇ ಆದಿತ್ಯವಾ... ವ್ಯಾಪಾರ ವ್ಯವಹಾರದ ಜನರಾಗಿದ್ದಾರೆ.

ಕೈಗಾರಿಕಾ ರಂಗದ ಚಿತ್ರ

ಕೈಗಾರಿಕಾ ರಂಗ ಸ್ವಾತಂತ್ರ್ಯ ಪೂರ್ವದಿಂದ... ನಿರ್ಣಾಯಕವಾದ ರೀತಿಯಲ್ಲಿ ದ.ಕ.ಜಿಲ್ಲೆಯ... ಬೆಳೆದುಬಂದಿಲ್ಲ. ಉದಾರೀಕರಣ, ಜಾಗತೀಕ... ಪ್ರಾರಂಭವಾದ ದಿನದಿಂದಲೂ ಜಿಲ್ಲೆಯ... ವಸಾಹತುಗಳಲ್ಲಿ ಹಾಗೂ ಬೇರೆ ಬೇರೆ ಪರದೇಶಗ... ನೂರಾರು ಸಣ್ಣ ಮತ್ತು ಅತಿ ಸಣ್ಣ ಕೈಗಾ... ಘಟಕಗಳು ನೆಲಕಚ್ಚಿವೆ. ಕನಿಷ್ಠ ... ಪ್ರತ್ಯೇಕವಲ್ಲದಿದ್ದರೂ ಪರೋಕ್ಷವಾಗಿ ಸಾವಿರ... ಜನರಿಗೆ ಉದ್ಯೋಗ ನೀಡಬಹುದಾದ ಮಧ... ಮತ್ತು ಬೃಹತ್ ಗಾತ್ರದ ಕೈಗಾರಿಕೆಗಳಿಗೆ ಜಿಲ್ಲೆಯ... ಪರಿಸರವಾದಿಗಳಿಂದ ತೀವ್ರ ವಿರೋ... ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಯಾ... ಆಶಾವಾದವು ಕಾಣಿಸುತ್ತಿಲ್ಲ. ಕುದುರೆಮುಖ... ಗಣಿಗಾರಿಕೆ ಸ್ಥಗಿತಗೊಂಡಿರುವ ಪರಿಣಾ... ಮಂಗಳೂರಿನ ಬಂದರು ಮತ್ತು ಅವರ ಕೈಗಾ... ಘಟಕದಲ್ಲಿ ಉದ್ಯೋಗಾವಕಾಶದ ಪ್ರಮಾಣ ... ಕಡಿತಗೊಂಡಿದೆ. ನವಮಂಗಳೂರು ಬಂದ... ಎಂ.ಸಿ.ಎಫ್. ಬಿಎಸ್.ಎಫ್. ಹಾ... ಎಂ.ಆರ್.ಪಿ.ಎಲ್.ಗಳಲ್ಲಿ ಗ... ಉದ್ಯೋಗಾವಕಾಶಕ್ಕೆ ಈಗಾಗಲೇ ತೆರೆಬಿದ್ದಿದೆ... ಬರುತ್ತಿರುವ ಎಸ್.ಸಿ.ಜೆಡ್.ಗಳಲ್ಲಿ ಸೀ...



ಅವಕಾಶ ಮಾತ್ರ ಇದೆ. ಹಂಚು ಉದ್ದಿಮೆ ದ.ಕ.... ನಿತ್ರಾಣಗೊಂಡು ಒಂದೂವರೆ ದಶಕ ಕಳೆದಿ... ಗೋಡಂಬಿ ಮತ್ತು ಅಡಿಕೆ ಸಂಸ್ಕರಣೆ ಸಂಕ್ರಮ... ಕಾಲಘಟ್ಟದಲ್ಲಿದೆ. ತಾಂತ್ರಿಕ ಮತ್ತು ವೃತ್ತಿ ತರಬೇ... ಶಿಕ್ಷಣ ಪಡೆದ ಯುವಕರ ದಂಡು ಬೆಂಗಳೂ... ಮುಂಬಾಯಿ ಪೂನಾಗಳಿಗೆ ಉದ್ಯೋಗ ಅ... ಅಲೆದಾಡುವುದು ಮುಂದುವರಿಯುತ್ತಿದೆ. ... ಭವಿಷ್ಯದಲ್ಲೂ ನಡೆಯುತ್ತದೆ. ಇಂತಹ ಸಂದರ್ಭ... ಎಸ್.ಸಿ.ಜೆಡ್.ನ ಎರಡನೇಯ ಹಂತ ಮ...

ಪುಟ 12



ಸಂಪದ್ಭರಿತವಾದ ಈ ತೀರ ಪ್ರಕೃತಿ ಮಾತೆಯ ತೂಗುತೊಟ್ಟಿಲು, ನಿಸರ್ಗ ಇಲ್ಲಿ ತನ್ನೆಲ್ಲ ಚೆಲುವನ್ನು ತೆರೆದಿಟ್ಟಿದೆ. ಆದರೆ ಇದೀಗ ಕಲ್ಪವೃಕ್ಷದ ತಾಯ್ನೆಲದಲ್ಲಿ ಕೋಮುವಾದದ ವಿಷವೃಕ್ಷ ಬೆಳೆದು ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚುತ್ತಿರುವ ದುರಂತವನ್ನು ಕಾಣುತ್ತಿದ್ದೇವೆ.

ತೆಂಗಿನ ತವರಲ್ಲಿ ವಿಷ ವೃಕ್ಷ ಬೆಳೆದವರು

ಆದಮಾರು ಶ್ರೀಪತಿ ಆಚಾರ್ಯ

ಉತ್ತರ ಕನ್ನಡದ ಕಾರವಾರದಿಂದ ಮೊದಲುಗೊಂಡು ಉಡುಪಿ ಜಿಲ್ಲೆ, ದಕ್ಷಿಣ ಕನ್ನಡ ಮತ್ತು ಇದೀಗ ಕೇರಳಕ್ಕೆ ಸೇರಿರುವ ಕಾಸರಗೋಡುವರೆಗಿನ ಪಶ್ಚಿಮ ಕರಾವಳಿ ತೀರ ತೆಂಗಿನ ತವರು ಎಂದೇ ಪ್ರಖ್ಯಾತವಾಗಿದೆ. ಪಡುವಣ ಕಡಲಿನ ಭೋರ್ಗರೆವ ಅಲೆಗಳ ಮೇಲಿಂದ ಬೀಸಿ ಬರುವ ತಂಪು ಗಾಳಿಗೆ ತಲೆದೂಗುವ ಫಲಭರಿತ ತೆಂಗು, ಕಂಗು, ಮಾವು, ಬಾಳೆ, ಹಲಸು ಮುಂತಾದ ಮರಗಳಿಂದಲೂ, ಭತ್ತ, ಕಾಳು ಮೆಣಸು ಮೊದಲಾದ ಪೈರಿನಿಂದಲೂ ಸಂಪದ್ಭರಿತವಾದ ಈ ತೀರ ಪ್ರಕೃತಿ ಮಾತೆಯ ತೂಗುತೊಟ್ಟಿಲು, ನಿಸರ್ಗ ಇಲ್ಲಿ ತನ್ನೆಲ್ಲ ಚೆಲುವನ್ನು ತೆರೆದಿಟ್ಟಿದೆ. ಆದರೆ ಇದೀಗ ಕಲ್ಪವೃಕ್ಷದ ತಾಯ್ನೆಲದಲ್ಲಿ ಕೋಮುವಾದದ ವಿಷವೃಕ್ಷ ಬೆಳೆದು ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚುತ್ತಿರುವ ದುರಂತವನ್ನು ಕಾಣುತ್ತಿದ್ದೇವೆ. ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹಿಂದೂ ಕೋಮುವಾದವು ಕ್ರಮೇಣ ಮೂಲಭೂತವಾದದ ಅಂಶಗಳನ್ನು ಮೈಗೂಡಿಸಿಕೊಂಡು ಫ್ಯಾಸಿಸ್ಟ್ ಪ್ರವೃತ್ತಿಯ ಕಡೆಗೆ ದಾಪುಗಾಲು ಹಾಕುತ್ತಿದೆ. ಈ ವಿಷವೃಕ್ಷವನ್ನು ಹೀಗೆ ಬೆಳೆಯಕೊಟ್ಟರೆ ಅದು ಕರಾವಳಿ ಕರ್ನಾಟಕದ ಜನರ ಬದುಕನ್ನೇ ನೊಣೆದು ನುಂಗಿ ಹಾಕಬಲ್ಲುದು. ಹದಿನೈದನೇ ಲೋಕಸಬಾ ಚುನಾವಣೆಗಳು ಬಿಜೆಪಿ ನೇತೃತ್ವದ ಸಂಘ ಪರಿವಾರವೆಂಬ ವಿಷವೃಕ್ಷವನ್ನು ಇನ್ನು ಬೆಳೆಯದಂತೆ ತಡೆಗಟ್ಟಲು ಮತ್ತು ಅದನ್ನು ತನ್ನ ಹೊಣೆಗೇಡಿತನದ ಮೂಲಕ ಬೆಳೆಯಲು ಬಿಟ್ಟ ಕಾಂಗ್ರೆಸ್ ಪಕ್ಷಕ್ಕೆ ಸೂಕ್ತ ಪಾಠ ಕಲಿಸಲು ನಮಗೆ ದೊರೆತ ಅಮೂಲ್ಯ ಅವಕಾಶ.

ಸೌಹಾರ್ದತೆಯ ಇತಿಹಾಸ

ಕರ್ನಾಟಕದ ಕರಾವಳಿ ಪ್ರದೇಶವು ಸ್ವಾತಂತ್ರ್ಯ ಪೂರ್ವದ ದಿನಗಳಿಂದಲೂ ಕೋಮುಸೌಹಾರ್ದತೆ, ಮತೀಯ ಸಾಮರಸ್ಯ ಮತ್ತು ಪರಸ್ಪರ ಪ್ರೀತಿ ವಿಶ್ವಾಸಗಳಿಗೆ ಹೆಸರಾಗಿದ್ದ ಪ್ರದೇಶ. ಪೋರ್ಚುಗೀಸ್ ಆಕ್ರಮಣಕಾರರ ವಿರುದ್ಧ ರಾಣಿ ಅಬ್ಬಕ್ಕದೇವಿಯ ನಾಯಕತ್ವದಲ್ಲಿ ಜನತೆ ಕಲಿತನದಿಂದ ಕಾದಿದರು. ಈ ಮೂರು ಜಿಲ್ಲೆಗಳ ಜನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಅಪೂರ್ವ ಐಕ್ಯತೆಯಿಂದ ಪಾಲುಗೊಂಡವರು. ಉತ್ತರ ಕನ್ನಡದ ಕಾರವಾರ, ಅಂಕೋಲಾ, ಕುಮಟಾ ಮತ್ತು ಭಟ್ಕಳಗಳು ಸ್ವಾತಂತ್ರ್ಯ ಹೋರಾಟಗಾರರ ಗಟ್ಟಿ ನೆಲೆಗಳಾಗಿದ್ದವು.



ಸ್ವಾತಂತ್ರ್ಯ ಯೋಧ ಕಾರ್ನಾಡು ಸದಾಶಿವರಾವ್, ದಲಿತರ ಉದ್ಧಾರಕ್ಕಾಗಿ ತನ್ನ ಬಾಳನ್ನೇ ಮುಡಿಪಾಗಿಟ್ಟ ಕುದ್ಮುಲ್‌ರಂಗರಾವ್, ಕೋಟ ರಾಮಕೃಷ್ಣ ಕಾರಂತ, (ಡಾ॥ಶಿವರಾಮ ಕಾರಂತರ ಹಿರಿಯಣ್ಣ) ಮತ್ತು ಕಡೆಂಗೋಡ್ಲು ಶಂಕರಭಟ್ಟರಂತಹ ಮಹಾನ್ ವ್ಯಕ್ತಿಗಳಿಂದಾಗಿ ಮಂಗಳೂರಿನ ಹೆಸರು ಭಾರತದ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿದೆ. ಕಾರ್ಪೋರೇಷನ್ ಬ್ಯಾಂಕಿನ ಸ್ಥಾಪಕರಾಗಿದ್ದ ಕೊಡಗೈ ದಾನಿ ಹಾಜಿ ಅಬ್ದುಲ್ಲಾ ಸಾಹೇಬರನ್ನು ಉಡುಪಿಯ ಜನ ಈಗಲೂ ನೆನೆಯುತ್ತಾರೆ. ಭಟ್ಕಳ ಮೂಲದ ನವಾಯಿತರಾಗಿದ್ದ ಹಾಜಿ ಅಬ್ದುಲ್ಲಾ ಉಡುಪಿ ಕೃಷ್ಣನ ಲಕ್ಷದೀಪೋತ್ಸವ ನಡೆಯದೇ ಹೋದಾಗ ಸಾವಿರಾರು ರೂಪಾಯಿಗಳ ಕರ್ಪೂರವನ್ನು ದಾನನೀಡಿ ದೀಪೋತ್ಸವ ನಡೆಯಲು ನೆರವಾದವರು ಹಾಜಿ ಅಬ್ದುಲ್ಲಾ. ಉಡುಪಿ ಶ್ರೀ ಕೃಷ್ಣ ದೇವಸ್ಥಾನವನ್ನೊಳಗೊಂಡು ಈ ಪರಿಸರದ ಎಲ್ಲಾ ದೇವಸ್ಥಾನಗಳ ದೇವರ ಮುಖವಾಡ, ಪ್ರಭಾವಳಿ ಮುಂತಾದ ಚಿನ್ನ, ಬೆಳ್ಳಿಯ ಆಭರಣಗಳನ್ನು ಉಡುಪಿಯ ಮುಸ್ಲಿಂ ಅಕ್ಕಸಾಲಿಗರೇ ಸುಂದರವಾಗಿ ತಯಾರಿಸಿ ಕೊಡುತ್ತಾರೆ. 'ಚಿರಸ್ಮರಣೆ'ಯ ಕಯ್ಯೂರು ಹುತಾತ್ಮರಾದ ಅಪ್ಪು, ಚಿರುಕುಂಡ, ಕುಂಞಂಬು ಮತ್ತು ಅಬೂಬಕ್ಕರ್ ಓಡಾಡಿದ ನೆಲೆಯೇ ನೆರೆಯ ಕಾಸರಗೋಡು ಜಿಲ್ಲೆ.

ಪುಂಡ, ಪೋಕರಿಗಳ ಕೈಗೆ ಆಡಳಿತ



ಇಂತಹ ಪ್ರದೇಶದಲ್ಲಿ ಇವತ್ತು ಬಿಜೆಪಿ ಹಾಗೂ ಆರೆಸ್ಸೆಸ್ ಪ್ರೇರಿತ ಸಂಘಪರಿವಾರ ಅಟ್ಟಹಾಸಗೈಯ್ಯುತ್ತಿದೆ. ಕರ್ನಾಟಕ ಸರ್ಕಾರದ ಗೃಹಮಂತ್ರಿ ಡಾ॥ ವಿ.ಎಸ್.ಆಚಾರ್ಯರು ಈ ಪ್ರದೇಶದ ಆಡಳಿತದ ಸಮಸ್ತ ಜವಾಬ್ದಾರಿಯನ್ನು ಸಂಘ ಪರಿವಾರದ ಪುಂಡಪೋಕರಿಗಳಿಗೆ ವಹಿಸಿಕೊಟ್ಟು ನಿಶ್ಚಿಂತರಾಗಿದ್ದಾರೆ. ಮುಸ್ಲಿಂ, ಕ್ರೈಸ್ತ ಅಲ್ಪಸಂಖ್ಯಾತರು ಭೀತಿಯ ನೆರಳಲ್ಲೇ ಬದುಕುವಂತಾಗಿದೆ. ಹಿಂದೂಗಳಲ್ಲೇ ಇರುವ ಸೆಕ್ಯುಲರ್‌ವಾದಿಗಳು, ವಿಚಾರವಾದಿಗಳು, ಪ್ರಜಾಪ್ರಭುತ್ವವಾದಿಗಳು ಬಾಯಿ ಬಿಡಲು ಅಂಜುವಂತಹ ಸ್ಥಿತಿ ನಿರ್ಮಾಣವಾಗಿದೆ ದೌರ್ಜನ್ಯಕ್ಕೀಡಾದವರಿಗೆ ಪೋಲೀಸ್ ರಕ್ಷಣೆಯಿಲ್ಲ; ಅಸಲಿಗೆ ಅವರ ಮೇಲೆಯೇ ಕೇಸುಗಳನ್ನು ಜಡಿಯಲಾಗುತ್ತಿದೆ. ಪೋಲೀಸರೆಲ್ಲ ಆರೆಸ್ಸೆಸ್ ಸೇರಿದ್ದಾರೆಯೇ ಅಥವಾ ಸಂಘ ಪರಿವಾರದವರೇ ಪೋಲೀಸರಾಗಿದ್ದಾರೆಯೇ ಎನ್ನುವಷ್ಟು ಪೋಲೀಸ್ ಪಡೆ ಕೋಮುವಾದೀಕರಣ ಗೊಂಡಿದೆ.

ಮೊದಲ ಹೊಣೆಗಾರ ಕಾಂಗ್ರೆಸ್: ಕರಾವಳಿಯ ಅತ್ಯಂತ ದೊಡ್ಡ ಸೆಕ್ಯುಲರ್ ಪಕ್ಷವೆಂಬ ಹೆಗ್ಗಳಿಕೆಯ ಕಾಂಗ್ರೆಸ್ ಪಕ್ಷದ ಮುಂದಾಳುಗಳು ಕಣ್ಣು, ಕಿವಿ, ಬಾಯಿ, ಮುಚ್ಚಿಕೊಂಡು ಸುಮ್ಮನಿರುವುದನ್ನು ಕಂಡಾಗ ಮಹಾತ್ಮಗಾಂಧಿಯವರ ಮೂರು ಕೋತಿಗಳ ನೆನಪವಾಗುತ್ತದೆ. ಕುರ್ಚಿಗಾಗಿ ಮತ್ತು ಚುನಾವಣೆಯ ಟಿಕೇಟಿಗಾಗಿ ಮಾತ್ರ ರಂಪವೆಬ್ಬಿಸುವ ಕಾಂಗ್ರೆಸ್ ನಾಯಕಮಣಿಗಳು ತಂಡೋಪತಂಡವಾಗಿ ಬಿಜೆಪಿಗೆ ವಲಸೆ ಹೋಗುತ್ತಿರುವುದನ್ನು ನೋಡಿದರೆ ಕಾಂಗ್ರೆಸ್‌ನ ಬಗ್ಗೆ 'ಅಯ್ಯೋಪಾಪ' ಅನಿಸದಿರಲಾರದು! ಆದರೆ ಕರಾವಳಿ ಕರ್ನಾಟಕದ ಇಂದಿನ ಪರಿಸ್ಥಿತಿಗೆ ಕಾಂಗ್ರೆಸ್ ಪಕ್ಷವೇ ಮೊದಲ ಹೊಣೆಗಾರ.



ತುರ್ತು ಪರಿಸ್ಥಿತಿಯ ದುರ್ಲಾಭ

ಸ್ವಾತಂತ್ರ್ಯಾನಂತರ 1980ರವರೆಗೂ ಕರಾವಳಿ ಕರ್ನಾಟಕ ಕಾಂಗ್ರೆಸ್ಸಿನ ಭದ್ರಕೋಟೆಯಾಗಿತ್ತು, 1974ರಲ್ಲಿ ದೇವರಾಜ್ ಅರಸ್ ಸರ್ಕಾರ ಭೂ ಮಸೂದೆ ಕಾಯಿದೆಯನ್ನು ಜಾರಿಗೆ ತಂದ ಬಳಿಕವಂತೂ ಲಕ್ಷಾಂತರ ಗೇಣಿ ಒಕ್ಕಲುಗಳು ಗೇಣಿಯ ಭಾರದಿಂದ ಬಿಡುಗಡೆ ಹೊಂದಿ ಭೂ ಒಡೆತನ ಪಡೆದು ಕಾಂಗ್ರೆಸ್ಸಿನ ಕಟ್ಟಾ ಬೆಂಬಲಿಗರಾದರು. ಆಗ ಈ ಪ್ರದೇಶದಲ್ಲಿ ಸಂಘ ಪರಿವಾರದ ವಿಳಾಸವೇ ಇರಲಿಲ್ಲ. ಆರ್.ಎಸ್.ಎಸ್. ಎಂಬುದು ಮೇಲು ಜಾತಿಯವರ, ಅದರಲ್ಲೂ ವ್ಯಾಪಾರಿ ವರ್ಗದವರ ಸಂಘ ಮಾತ್ರ ಎನಿಸಿಕೊಂಡಿತ್ತು. ಹೀಗೆ ಏನೇನೂ ಜನಬೆಂಬಲವಿಲ್ಲದ ಸಂಘ ಪರಿವಾರವನ್ನು ಭಾರೀ ಶಕ್ತಿಯಾಗಿ ಬೆಳೆಸಿದ ಕೀರ್ತಿ ಕಾಂಗ್ರೆಸ್ ಪಕ್ಷಕ್ಕೇ ಸಲ್ಲುತ್ತದೆ. 1975 ರ ಜೂನ್‌ನಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ಆಯ್ಕೆ ನ್ಯಾಯಾಲಯದಲ್ಲಿ ಅಸಿಂಧುಗೊಳಿಸಲ್ಪಟ್ಟ ಬಳಿಕ ಹೇರಲಾದ ವಿಷಮ ಪರಿಸ್ಥಿತಿಯಲ್ಲಿ ಆರೆಸ್ಸೆಸ್‌ನ್ನೂ ಒಳಗೊಂಡು ಅನೇಕ ಸಂಘಟನೆಗಳನ್ನು ನಿಷೇಧಿಸಲಾಯಿತು. ಆರೆಸ್ಸೆಸ್ ಮುಖಂಡರನ್ನು ಬಂಧಿಸಿ ಜೇಲಿಗೆ ತಳ್ಳಲಾಯಿತು. ಇತರ ವಿರೋಧಪಕ್ಷಗಳ ನಾಯಕರು ಮತ್ತು ಸಾವಿರಾರು ಮಂದಿ ಕಾರ್ಮಿಕ ನಾಯಕರನ್ನು ಸೆರೆಮನೆ ಗಟ್ಟಲಾಯಿತು. ಜೇಲಿಗೆ ಹೋದ ಕಾರ್ಮಿಕ ನಾಯಕರು ಮತ್ತು ಕಾರ್ಯಕರ್ತರಿಗೆ 'ಬಳ್ಳಾರಿಗೋಲಿ' 'ಏರೋಪ್ಲೇನ್ ಶಿಕ್ಷೆ' ಮತ್ತು 'ಬೂಟುಗಾಲಿನ ಒದೆತ' ನೀಡಿ ಹಿಂಸಿಸಲಾಗಿದ್ದರೂ ಆರೆಸ್ಸೆಸ್ ಮತ್ತು ಜನಸಂಘದವರಿಗೆ ರಾಜೋಪಚಾರ ನೀಡಲಾಯಿತು. ಜೈಲಿನೊಳಗೆ 'ಉಠ್‌ಬೈಟ್', 'ಬಸ್ಕಿ ತೆಗೆಯುವುದು', 'ಸೂರ್ಯ ನಮಸ್ಕಾರ', 'ಕಬಡಿ ಆಟ' ಮುಂತಾದವುಗಳನ್ನು ಮಾಡಿಕೊಂಡಿದ್ದ ಆರೆಸ್ಸೆಸ್ ಜನಸಂಘಗಳು ವಿಷಮ ಪರಿಸ್ಥಿತಿ ರದ್ದಾದ ಬಳಿಕ ಹೊರಬಂದು ಎರಡನೇ ಸ್ವಾತಂತ್ರ್ಯ ಸಂಗ್ರಾಮ 'ಹೀರೋ'ಗಳು ಎಂಬುದಾಗಿ ಸಮೂಹ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಪಡೆದರು, ಹೀಗೆ ಅಂದಿನವರೆಗೆ ಕರಾವಳಿ ಕರ್ನಾಟಕದಲ್ಲಿ ಏನೇನೂ ಜನಬೆಂಬಲವಿಲ್ಲದೇ ಸೊರಗಿಕೊಂಡಿದ್ದ ಆರ್.ಎಸ್.ಎಸ್. ಜನಸಂಘದವರಿಗೆ ಅಪಾರ ಸಹಾನುಭೂತಿಗಳಿಸಿ ಬೆಳೆಯಲು ಅವಕಾಶ ಮಾಡಿಕೊಟ್ಟದ್ದೇ ಇಂದಿರಾಗಾಂಧಿ ಹೇರಿದ್ದ ವಿಷಮ ಪರಿಸ್ಥಿತಿ.

ಹಿಂದೂ ಸಮಾಜೋತ್ಸವ

1984ರ ಅಕ್ಟೋಬರ್ 31 ರಂದು ಇಂದಿರಾಗಾಂಧಿಯವರ ಧಾರುಣ ಹತ್ಯೆಯಾದ ಬಳಿಕ ನಡೆದ ಲೋಕಸಭಾ ಚುನಾವಣೆಯಲ್ಲಿ ಅನುಕಂಪದ ಅಲೆಯ ಮೇಲೆ ಸವಾರಿ ಮಾಡಿದ ರಾಜೀವಗಾಂಧಿ ನಾಯಕತ್ವದ ಕಾಂಗ್ರೆಸ್ 420ಕ್ಕೂ ಹೆಚ್ಚು ಸ್ಥಾನ ಪಡೆದು ಭಾರಿ ಜಯಗಳಿಸಿತು. ವಿಷಮ ಪರಿಸ್ಥಿತಿ 'ಹೀರೋ'ಗಳೆನಿಸಿದ್ದ ಭಾರತೀಯ ಜನತಾಪಕ್ಷ ಕೇವಲ ಎರಡು ಸ್ಥಾನ ಪಡೆದು ಹೀನಾಯ ಸೋಲು ಅನುಭವಿಸಿತು. ಅದರ 'ಟ್ರಂಪ್ ಕಾರ್ಡ್' ಆಗಿದ್ದ ಅಟಲಬಿಹಾರಿ ವಾಜಪೇಯಿಯವರು ಗ್ವಾಲಿಯರ್‌ನಲ್ಲಿ ಸೋತು ನೆಲಕಚ್ಚಿದರು. ಈ ಸೋಲಿನ ಹಿನ್ನೆಲೆಯಲ್ಲಿ ಆರೆಸ್ಸೆಸ್-ಬಿಜೆಪಿ-ವಿಶ್ವ

ಪುಟ 10 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಏಪ್ರಿಲ್ 19, 2009

ತೆಂಗಿನ ತವರಲ್ಲಿ ವಿಷ ವೃಕ್ಷ ಬೆಳೆದವರು

ಪುಟ 9 ರಿಂದ

ಹಿಂದೂಪರಿಷತ್ ಮುಂತಾದ ಸಂಘ ಪರಿವಾರದ ಸಂಘಟನೆಗಳ ನಾಯಕರು, ಸಾಧುಸಂತರು ಮತ್ತು ಮಠಾಧಿಪತಿಗಳ ನ್ನೊಳಗೊಂಡ ಚಿಂತನ ಚಿಲುಮೆ ಬೈಠಕ್ ನಡೆಸಿ ಸೋಲಿನ ಬಗ್ಗೆ ವಿಶ್ಲೇಷಣೆ ನಡೆಸಿದರು. 'ಹಿಂದೂಗಳ ಮತಗಳು ಬಹುತೇಕ ಎಲ್ಲಾ ಪಕ್ಷಗಳ ನಡುವೆ ಸರಿಸುಮಾರಾಗಿ ಹಂಚಿಹೋಗುತ್ತವೆ; ಮುಸ್ಲಿಮರು ಮತ್ತು ಕ್ರೈಸ್ತರ ಮತಗಳು ಮಾತ್ರ ಸಾರಾಸಗಟಾಗಿ ಕಾಂಗ್ರೆಸ್‌ಗೆ ಬೀಳುತ್ತವೆ. ಹಾಗಾಗೀ ಮುಸ್ಲಿಂ ಮತ್ತು ಕ್ರೈಸ್ತರ ಮತಗಳು ನಿರ್ಣಾಯಕವಾಗಿ ದೊರೆತು ಕಾಂಗ್ರೆಸ್ ಗೆಲುವು ಸಂಪಾದಿಸುತ್ತದೆ' ಎಂದು ಈ ಚಿಂತನ ಚಿಲುಮೆಯ ಸಮ್ಮೇಳನ ತೀರ್ಮಾನಿಸಿತು. ಹೀಗೆ ಹಿಂದೂ ಮತಗಳು ವಿಭಜನೆಯಾಗುವುದನ್ನು ತಪ್ಪಿಸಲು ಮತ್ತು ಮುಸ್ಲಿಂ, ಕ್ರೈಸ್ತ ಹಾಗೂ ಅಲ್ಪಸಂಖ್ಯಾತರ ಮತಗಳ ಪ್ರಭಾವವನ್ನು ನಿಷ್ಕ್ರಿಯಗೊಳಿಸಲು 'ಹಿಂದೂ ವೋಟ್ ಬ್ಯಾಂಕ್' ಒಂದನ್ನು ನಿರ್ಮಿಸಬೇಕೆಂಬ ನಿರ್ಧಾರವನ್ನೂ ಈ ಸಮ್ಮೇಳನದಲ್ಲಿ ಕೈಗೊಳ್ಳಲಾಯಿತು. ಇದರ ಫಲಿತಾಂಶವೇ 'ನಾವೆಲ್ಲ ಹಿಂದೂ, ನಾವೆಲ್ಲ ಒಂದು' ಎಂಬ ಘೋಷ ವಾಕ್ಯ! ಈ ನಿರ್ಧಾರದಂತೆಯೇ 1986ರಲ್ಲಿ ಮಂಗಳೂರಿನಲ್ಲಿ ಉಡುಪಿಯ ಮಠಾಧೀಶರ ಸಮ್ಮುಖದಲ್ಲಿ 'ಹಿಂದೂ ಸಮಾಜೋತ್ಸವ' ನಡೆಸಲಾಯಿತು ಮತ್ತು ರಾಜ್ಯದ ಎಲ್ಲೆಡೆಯೂ ಈ 'ಸಮಾಜೋತ್ಸವ' ಎಂಬ ಪ್ರಹಸನ ಪ್ರತಿ ಚುನಾವಣೆಯ ಸಂದರ್ಭದಲ್ಲೂ ನಡೆಯುತ್ತಿದೆ.

'ಹಿಂದೂ ವೋಟ್ ಬ್ಯಾಂಕ್‌ನ್ನು ನಿರ್ಮಿಸುವುದೇ ಹಿಂದೂ ಸಮಾಜೋತ್ಸವದ ಉದ್ದೇಶ' ವೆಂದು ಮೊನ್ನೆ ತಾನೆ ಮಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪೇಜಾವರ ಮಠಾಧೀಶರೇ ಹೇಳಿಕೊಂಡಿದ್ದಾರೆ.

ಇಂತಹ ಪ್ರತಿ ಸಮಾಜೋತ್ಸವದಲ್ಲೂ ಪ್ರವೀಣಬಾಯಿ ತೊಗಾಡಿಯಾ, ಪ್ರಮೋದ್ ಮುತಾಲಿಕ್, ಜಗದೀಶ ಕಾರಂತ ಮುಂತಾದ ಭಾಷಣಕಾರರನ್ನು ಕರೆಯಿಸಿ ಬೆಂಕಿ ಉಗುಳುವ ಭಾಷಣಗಳನ್ನು ಮಾಡಿಸಿ ಅಲ್ಪಸಂಖ್ಯಾತರನ್ನು ಮುಖ್ಯವಾಗಿ ಮುಸ್ಲಿಮರನ್ನು ಬೆದರಿಸಲಾಯಿತು. 'ವಂದೇಮಾತರಂ ಹಾಡಿರಿ, ರಾಷ್ಟ್ರಧ್ವಜ ಹಾರಿಸಿ' ಎಂದೆಲ್ಲ ಅವರಿಗೆ ತಾಕೀತು ಮಾಡಲಾಯಿತು. ಸೆಕ್ಯುಲರ್ ವಾದಿಗಳನ್ನೂ ವಿಚಾರವಾದಿಗಳನ್ನು 'ಡೋಂಗೀ ಜಾತ್ಯಾತೀತವಾದಿಗಳು' ಎಂದು ಜರೆಯಲಾಯಿತು. ಈ ನಡುವೆ ಪ್ರಧಾನಿ ರಾಜೀವಗಾಂಧಿ ಉತ್ತರಪ್ರದೇಶದ ಎನ್.ಡಿ.ತಿವಾರಿ ಮತ್ತು ಅರುಣ್ ನೆಹ್ರೂ ಮುಂತಾದವರ ಮಾತಿಗೆ ಮರುಳಾಗಿ ಅಯೋಧ್ಯೆಯ ಬಾಬರಿ ಮಸೀದಿಯ ಬೀಗ ತೆಗೆಸಿ 'ರಾಮಲಲ್ಲಾ'ನ ಪೂಜೆಗೆ ಅವಕಾಶ ಮಾಡಿಕೊಟ್ಟದ್ದು ಸಂಘ ಪರಿವಾರದ ರೊಟ್ಟಿ ಜಾರಿ ತುಪ್ಪಕ್ಕೆ ಬೀಳುವಂತೆ ಮಾಡಿತು.

ಕಳೆದ ಇಪ್ಪತ್ತಮೂರು ವರ್ಷಗಳಲ್ಲಿ ಸಂಘ ಪರಿವಾರದ ಮಂದಿ ಒಂದಾದ ಮೇಲೆ ಒಂದರಂತೆ ರಾಮಜನ್ಮಭೂಮಿ, ದತ್ತಪೀಠ, ರಾಮಸೇತು ಮುಂತಾದ ಪ್ರಶ್ನೆಗಳಲ್ಲಿ ನಿರಂತರವಾದ ಸುಳ್ಳು, ಅರ್ಧ ಸತ್ಯ, ಅಪಪ್ರಚಾರ ಮುಂತಾದವುಗಳಿಂದ ಕರಾವಳಿ ಕರ್ನಾಟಕದ ಗಣನೀಯ ಸಂಖ್ಯೆಯ ಜನರ ತಲೆಯಲ್ಲಿ ಮತೀಯವಾದದ ಅಮಲನ್ನು ತುಂಬಿಸುವಲ್ಲಿ ಸಫಲರಾಗಿದ್ದಾರೆ. ಈ ಜಿಲ್ಲೆಗಳ ಬಹುತೇಕ 'ಸಂಭಾವಿತ ಮಂದಿ' (ಇವರೆಲ್ಲ ಬಿಜೆಪಿ ಬೆಂಬಲಿಗರೇ ಆಗಬೇಕೆಂದಿಲ್ಲ) 'ಮುಸ್ಲಿಮರು ಮತ್ತು ಕ್ರೈಸ್ತರು ಈ ದೇಶಕ್ಕೆ ಹೊರಗಿನವರು, ಮುಸ್ಲಿಮರು ಕ್ರೂರಿಗಳು, ಕಸಾಯಿಗಳು, ಅವರಿಗೆ ಹಿಂದೂ ಹುಡುಗಿಯರನ್ನು ಲಪಟಾಯಿಸುವುದೊಂದೇ ಕೆಲಸ ಮತ್ತು ಕ್ರೈಸ್ತರು ಸಮಾಜಸೇವೆಯ ಸೋಗಿನಲ್ಲಿ ಮತಾಂತರ ಮಾಡುವವರು ಮಾತ್ರ ಎಂದು ಗಟ್ಟಿಯಾಗಿ ನಂಬಿದ್ದಾರೆ. ಅಮಾಯಕ ಮುಸ್ಲಿಮರ ಹತ್ಯೆ ನಡೆದಾಗಲೂ ಅಥವಾ ಅವರ ಮೇಲೆ ದೌರ್ಜನ್ಯ ನಡೆದಾಗಲೂ ಕರಾವಳಿಯ ಬಹುಪಾಲು 'ಸುಶಿಕ್ಷಿತ' ಜನ 'ಮುಸ್ಲಿಮರು ತಾನೇ? ಅವರು ಕ್ರಿಮಿನಲ್‌ಗಳು, ಅನುಭವಿಸಲಿ ಬಿಡು' ಎನ್ನುವ ಕ್ರೂರ ಮನೋಭಾವವನ್ನು ಬೆಳೆಸುವಲ್ಲಿ ಹಿಂದುತ್ವವಾದಿ ಪಡೆಗಳ ಗೋಬೆಲ್ಸ್ ಪ್ರಚಾರ ತಂತ್ರ ಸಾಕಷ್ಟು ಯಶಸ್ವಿಯಾಗಿದೆ.

1992ರಲ್ಲಿ ಬಾಬರಿ ಮಸೀದಿಯ ವಿನಾಶವನ್ನು ಮುಸ್ಲಿಮರು ಪ್ರತಿಭಟಿಸಿದ ವೇಳೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಲ್ಲಲ್ಲಿ ನಡೆದ ವ್ಯಾಪಕ ಹಿಂಸಾಚಾರ, 1998ರ ಡಿಸೆಂಬರ್‌ನಲ್ಲಿ ಸುರತ್ಕಲ್ ಪರಿಸರದಲ್ಲಿ ನಡೆದ ಗಲಭೆಗಳು, ಉಳ್ಳಾಲದಲ್ಲಿ ಹಿಂಸಾಚಾರ, ಕುಂದಾಪುರದ ಭಾಸ್ಕರ ಕೊಟ್ಟಾರಿ ಹಗರಣ, ಹೊಸಾಡು ದೇವಾಲಯದ ಸೂಜಿ ಚುಚ್ಚಿದ ಪ್ರಕರಣ, ಬಸ್ರೂರಿನ ಸುಣ್ಣದ ಚಿಪ್ಪಿನ ಕಾರ್ಖಾನೆಯ ಮಹಿಳಾ ಕಾರ್ಮಿಕರಿಗೆ ವಿಷ ಮಿಶ್ರಿತ ಬೋಂಡಾ ನೀಡಲಾಯಿತೆಂಬ ಪ್ರಕರಣ ಇವೆಲ್ಲದರಲ್ಲೂ ಸಂಘ ಪರಿವಾರದ ಜನ ಸುಳ್ಳು ಸುದ್ದಿ, ಗಾಳಿವಾರ್ತೆ ಮತ್ತು ಅಪಪ್ರಚಾರದ ತಂತ್ರ ಬಳಸಿ ವಾತಾವರಣವನ್ನು ವಿಷಮಯ ಮಾಡಿದ್ದಾರೆ. ಈ ಎಲ್ಲಾ ಪ್ರಕರಣಗಳಲ್ಲಿ ನಡೆದ ಹಿಂಸಾಚಾರಗಳನ್ನು ಮಾಧ್ಯಮಗಳು 'ಹಿಂದೂ-ಮುಸ್ಲಿಂ' ಗಲಭೆ ಎಂದು ಬಿಂಬಿಸಿದ್ದರೂ ಅವೆಲ್ಲವೂ ಹಿಂದುತ್ವವಾದಿ ಪಡೆಗಳು ವ್ಯವಸ್ಥಿತವಾಗಿ, ಪೂರ್ವ ಸಿದ್ಧತೆ ಮತ್ತು ಸೂಕ್ತ ತರಬೇತಿಯೊಂದಿಗೆ ಮುಸ್ಲಿಂ ಸಮುದಾಯದ ಮೇಲೆ ನಡೆಸಿದ ದಾಳಿ ಎಂಬುದರಲ್ಲಿ ಎರಡು ಮಾತಿಲ್ಲ. ಈ ಪ್ರಕರಣಗಳಲ್ಲಿ ಮುಸ್ಲಿಮರು ಹಿಂಸೆಗೆ ಇಳಿಯಲೇ ಇಲ್ಲವೆಂದಲ್ಲ. ಅವೆಲ್ಲವೂ ಕಾವಿ ಪಡೆಗಳು ನಡೆಸಿದ ಹಿಂಸಾಚಾರಕ್ಕೆ ಬಂದ ಪ್ರತಿಕ್ರಿಯೆಯೇ ಹೊರತು ಮುಸ್ಲಿಮರು ತಾವಾಗಿ ಹಿಂಸೆಗಿಳಿದ ಪ್ರಕರಣಗಳು ತೀರಾ ಅಪರೂಪ.

ಕರ್ನಾಟಕದ 'ಗುಜರಾತ್' ಆಗಿ ಮಾರ್ಪಡಿಸಲಾಗುತ್ತಿರುವ ಕರಾವಳಿ ಜಿಲ್ಲೆಯಗಳ ಈ ಅಸಹ್ಯಕರ ಮತ್ತು ಇನ್ನೂ ತಾಳಿಕೊಳ್ಳಲಾರದ ಸನ್ನಿವೇಶದಿಂದ ಬಿಡುಗಡೆ ಪಡೆಯಲು ಇಲ್ಲಿನ ಜನತೆಗೆ ದೊರಕಿರುವ ಒಂದು ಅಮೂಲ್ಯ ಅವಕಾಶ ಏಪ್ರಿಲ್ 30 ರಂದು ನಡೆಯುವ ಲೋಕಸಭಾ ಚುನಾವಣೆ. ಇದರಲ್ಲಿ ತೃತೀಯ ಪರ್ಯಾಯದ ಎಡಶಕ್ತಿಗಳ ಅಭ್ಯರ್ಥಿಗಳನ್ನು ಬೆಂಬಲಿಸುವುದು ಕರಾವಳಿ ಜನತೆಯ ಮುಂದಿರುವ ಇವತ್ತಿನ ಅನಿವಾರ್ಯತೆಯಾಗಿದೆ. ಕರಾವಳಿಯಲ್ಲಿ ಶಾಂತಿ, ಸೌಹಾರ್ದತೆಗಾಗಿ ಮತ್ತು ಜನತೆಯ ಹಕ್ಕುಗಳಿಗಾಗಿ ಹಿಂದಿನಿಂದಲೂ ಎಡಶಕ್ತಿಗಳು ನಿರಂತರ ಹೋರಾಟ ನಡೆಸುತ್ತಲೇ ಬಂದಿವೆ. ಹಾಗಾಗಿ ಜನರು ಎಡಶಕ್ತಿಗಳನ್ನು ಬೆಂಬಲಿಸಿ ಕೋಮುವಾದಿ, ಫ್ಯಾಸಿಸ್ಟ್, ಬಿಜೆಪಿ ಮತ್ತು ಅದರ ದುರಾಚಾರಕ್ಕೆ ಮೌನ ಸಮ್ಮತಿ ನೀಡಿ ಕರಾವಳಿಯ ಜನತೆಗೆ ದ್ರೋಹ ಬಗೆದ ಕಾಂಗ್ರೆಸ್ ಇವೆರಡಕ್ಕೂ ಈ ಮೂಲಕ ಪಾಠ ಕಲಿಸಬೇಕಿದೆ.

...ಬಳ್ಳಾರಿ ಚುನಾವಣಾ ಸಂಘರ್ಷ

ಪುಟ 11 ರಿಂದ

ಭಾಗವಾಗಿ ಈ ತಳಮಳಗಳು ಉಂಟಾದವು. ಇದರಿಂದಾಗಿ ಇವರ ಬಗೆಗೆ ಇದ್ದ ಭ್ರಮೆ ಕಡಿಮೆಯಾಗಿ ಪ್ರತಿರೋಧ ನಿಧಾನವಾಗಿ ಹೆಪ್ಪುಗಟ್ಟುತ್ತಿದೆ. ವಿಮಾನ ನಿಲ್ದಾಣ ನಿರ್ಮಾಣ ಬೇಡವೆಂದ ಶಿರಿವಾರ-ಚಾಗನೂರು ರೈತರ ಮೇಲೆ ನಡೆಸಲಾದ ಗೋಲಿಬಾರ್‌ಗೆ ಜಿಲ್ಲೆಯಲ್ಲಿ ಸ್ವಯಂಪೂರ್ಣವಾಗಿ ಬಂದ್ ಮಾಡುವ ಮೂಲಕ ಇಡೀ ಜಿಲ್ಲೆ ಅಸಮಾಧಾನವನ್ನು ಹೊರಗೆಡವಿತು.

ಗಡಿ ಒತ್ತುವರಿ, ಅಕ್ರಮ ಗಣಿಗಾರಿಕೆ, ಭ್ರಷ್ಟಾಚಾರ ವ್ಯಾಪಕಗೊಂಡ ವಿಚಾರದಲ್ಲಿ ರಾಜ್ಯದ ಲೋಕಾಯುಕ್ತರು "ಛೀ" ಎಂದರೆ, ರೈತರ ಮೇಲಿನ ದಾಳಿ ಸಂದರ್ಭದಲ್ಲಿ 'ಮಾನವ ಹಕ್ಕುಗಳ ಆಯೋಗ' ಹಾಗೂ ಮರಳು ಸಾಗಾಣೆ ವಿಚಾರದಲ್ಲಿ ರಾಜ್ಯದ ಉಚ್ಚ ನ್ಯಾಯಾಲಯ 'ಛೀ' ಹಾಕಿತು. ಹಂಪಿಯ ಆತ್ತಕಡೆ ಆನೆಗುಂದಿ(ಬ್ರಿಡ್ಜ್) ಸೇತುವೆ ಕುಸಿತ, ಅದರ ಕಳಪೆ ಕಾಮಗಾರಿಯು, ಜನತೆಗೆ ಇವರ ಮೇಲೆ ಇನ್ನಷ್ಟು ಬೇಸರ ಮೂಡಿಸಿದೆ.

ರೈತರ ಭೂಮಿಗಳಿಗೆ ಗಣಿಗಾರಿಕೆಗೆ ಅವಕಾಶ ನೀಡದೇ, ಅವರ ಹೊಲಗಳಲ್ಲಿ ತೆಗೆಯಲಾದ ಅದಿರನ್ನೂ ಅಕ್ರಮವೆಂದು ಸಾರಿ, ದೊಡ್ಡದೊಡ್ಡ ಪರವಾನಿಗಿ ಪಡೆದ ಕುಳಗಳನ್ನು ರಕ್ಷಿಸಿತು. ಸಾವಿರಾರು ಬಿಜೆಪಿ ಬೆಂಬಲಿಗರು ಲಕ್ಷಾಂತರ ತೊಡಗಿಸಿದವರು ದಿವಾಳಿಯಾದರು. ಹೊಸಪೇಟೆ, ಸಂಡೂರು, ಬಳ್ಳಾರಿಗಳಲ್ಲಿ ತಿಂಗಳುಗಟ್ಟಲೇ ಹೋರಾಡಿದರೂ, ಅವರ ನೆರವಿಗೆ ಬಾರದೆ ಅವರು ಶೇಖರಿಸಿದ ಸಂಪನ್ಮೂಲವನ್ನು ವಶಪಡಿಸಿಕೊಂಡು ಜಿಲ್ಲಾಡಳಿತ ಅತ್ಯಂತ ಕಡಿಮೆಗೆ ಹರಾಜು ಹಾಕಿ, ಇವರನ್ನು ವಂಚಿಸಿತು.

ಲೋಕಾಯುಕ್ತರು, ದೊಡ್ಡ ಕುಳಗಳು ಅಕ್ರಮವಾಗಿ, ಸಾವಿರಾರು ಎಕರೆ ಪ್ರದೇಶದಲ್ಲಿ ಲೂಟಿ ಮಾಡುತ್ತಿದ್ದರೂ, ಅದನ್ನು ಬಹಳ ದಿನ ತಡೆಯಲಿಲ್ಲ. ಇದರಲ್ಲಿ ಅಧಿಕಾರ ದುರುಪಯೋಗ ಮಾಡಿ ರಾಜಕೀಯ ವಿರೋಧಿವಲಯದ ಬಂಡವಾಳದಾರರನ್ನು ಮಣಿಸಲು ಮತ್ತು ತಮ್ಮ ಆಧಿಪತ್ಯಕ್ಕೆ ಶರಣಾಗುವಂತೆ ಕ್ರಮವಹಿಸಿದ್ದು, ಬಂಡವಾಳಗಾರರ ವಲಯದಲ್ಲಿ ಅಸಮಾಧಾನ ಮೂಡಿಸಿದೆ. ಕೊನೆಯ ಪಕ್ಷ ಪರವಾನಿಗೆ ಪ್ರದೇಶದಲ್ಲೂ ಗಣಿಗಾರಿಕೆ ಮಾಡದಂತೆ ತಡೆಯಲಾಗಿದೆ.

ಹಲವು ದಶಕಗಳಿಂದ ಬಳ್ಳಾರಿಯ ಕಳಸಪ್ರಾಯವಾಗಿದ್ದ ಗಡಗಿ ಚೆನ್ನಪ್ಪ ಸರ್ಕಲ್‌ನಲ್ಲಿ ಗಡಿಯಾರ ಕಂಬವನ್ನು ಬೆಳಗಾಗುವುದರೊಳಗಾಗಿ ಮಾಯಾ ಮಾಡಲಾಗಿತ್ತು. ಇದಕ್ಕಾಗಿ ಲಿಂಗಾಯತರ ನಡುವೆ ಅಸಮಾಧಾನ ಉಂಟಾಗಿದೆ. ಅದನ್ನು ಮತ್ತೆ ಕಟ್ಟಲು ಒತ್ತಾಯಿಸುತ್ತಿದೆ. ಈ ಪ್ರಕರಣ ಭಾರಿ ಅಸಮಾಧಾನವನ್ನು ತಂದಿದೆ ಎಂಬುದು ನಿಜವೇ ಆಗಿದೆ.

ವ್ಯವಹಾರಗಳಿಗೆ ತೊಂದರೆ ಮಾಡಿಕೊಳ್ಳಬಾರದೆಂದು ಕೆಲವರು ಅಸಮಾಧಾನವಿಟ್ಟುಕೊಂಡೇ ಬಿಜೆಪಿಯಡೆಗೆ ಸಾಗಿದ್ದಾರೆ! ಬಿಜೆಪಿ ಕಾರ್ಯಕರ್ತರೊಂದಿಗೆ ಇವರ ಸರ್ವಾಧಿಕಾರ ವರ್ತನೆ ಹಣದ ಅಹಂಭಾವ ಕಿರಿ, ಕಿರಿ ಬೇಸರ ಮೂಡಿಸಿದೆ.

ಮತ್ತೊಂದೆಡೆ, ವಿರೋಧಿ ವಲಯದಲ್ಲಿ ಹೆಚ್ಚಿನ ಐಕ್ಯತೆ ಕಂಡು ಬರುತ್ತಿದೆ. ಇವರನ್ನು ಸೋಲಿಸದೇ ಉಳಿಗಾಲವಿಲ್ಲವೆಂಬ ಭಾವನೆ ದಟ್ಟವಾಗುತ್ತಿದೆ. ಆದ್ದರಿಂದಲೇ ಬಿಜೆಪಿ ವಿರುದ್ಧ ಏಕ ಅಭ್ಯರ್ಥಿ ಎಂಬ ಅಭಿಪ್ರಾಯ ಬೆಳೆದು ಬಂದಿದೆ. ಕಾಂಗ್ರೆಸ್ ಪರಿಶಿಷ್ಟ ಜಾತಿ ಹಾಗೂ ಕುರುಬ ಜನ ಸಮುದಾಯದ ನಡುವೆ ಬಲಗೊಳ್ಳುತ್ತಿದೆ. ವಾಲ್ಮೀಕಿ ಜನಸಮುದಾಯದ ನಡುವೆ ಬಿಜೆಪಿಗೆ ನಿರೀಕ್ಷಿತ ಬೆಂಬಲ ಸಿಗದೇ ಮತಗಳು ಹಂಚಿಕೆಯಾಗುವ ಸಂಭವವಿದೆ. ವೀರಶೈವ ಲಿಂಗಾಯತ ಮತಗಳು ವಿಧಾನಸಭಾ ಚುನಾವಣೆಯಲ್ಲಿ ಆದಂತೆ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಲು, ಅಂತಹ ಕಾರಣವಿಲ್ಲದೇ ಇರುವುದು ಎಲ್ಲವೂ ಬಿಜೆಪಿ ವಿರುದ್ಧ ನಿಂತಿವೆ.

ಹಣದ ಪಾತ್ರ

ಆಗಲೇ ಚರ್ಚಿಸಿದಂತೆ ಬಿಜೆಪಿ ಅಭ್ಯರ್ಥಿ ಅವರದೇ ಬಂಡವಾಳದ ರಕ್ಷಣೆಗೆ ಅಗತ್ಯ. ಅದಕ್ಕಾಗಿ ಬಂಡವಾಳ ಹೂಡುವ ಅವಶ್ಯಕತೆ ಅವರಿಗಿದೆ.

ವಿರೋಧಿ ಪಾಳಿಯದಲ್ಲಿ ಸಾಕಷ್ಟು ಬಂಡವಾಳದಾರರು ಇದ್ದರೂ ಬಂಡವಾಳ ಹೂಡಲು ಅವರಿಗೆ ವೈಯಕ್ತಿಕ ಲಾಭ ನೀಡುವ ಉದ್ದೇಶ ಕಾಣುತ್ತಿಲ್ಲ. ಏನಿದ್ದರೂ ಅವರ ಸೋಲಿಗಾಗಿ ಹೂಡಬೇಕಾಗಿದೆ. ಇದೊಂದು ವಿರೋಧಿ ಪಾಳಯದ ಬಲಹೀನತೆಯಾಗಿದೆ. ಸಾವಿರಾರು ಸಂಖ್ಯೆಯಲ್ಲಿರುವ ಸ್ತ್ರೀಶಕ್ತಿ-ಸ್ವಸಹಾಯ ಗುಂಪುಗಳು ಈ ವಿಚಾರದಲ್ಲಿ ಬಲಹೀನವಾಗಿವೆ.

ಕಾಂಗ್ರೆಸ್ ಪಾಳಿಯ ಕಳೆದ ಬಾರಿಗಿಂತ ಸ್ವಲ್ಪ ಉತ್ತಮವಾಗಿ ಒಗ್ಗಟ್ಟು ಪ್ರದರ್ಶಿಸು ವಂತೆ ಕಂಡು ಬರುತ್ತಿದೆ. ಬಿಜೆಪಿ ಕಾಂಗ್ರೆಸ್ ಸ್ಪರ್ಧೆ ಎನ್ನುವಂತೆ ಕಂಡರೂ ಇಲ್ಲಿ ಸರ್ವಾಧಿಕಾರಿ ಧೋರಣೆ ಜನತೆಯ ಹಕ್ಕುಗಳ ನಡುವಿನ ಸಂಘರ್ಷದಂಚಿಗೆ ಬಳ್ಳಾರಿಯ ಕಣ.


ಬಳ್ಳಾರಿ ಕ್ಷೇತ್ರದಲ್ಲೀಗ ಹಣಾಹಣಿ. ಅಕ್ರಮಗಳೂ ದಾಖಲೆ ನಿರ್ಮಿಸಿವೆ. ತನ್ನ ಹಿಡಿತ ಬಿಗಿಗೊಳಿಸಲು ರೆಡ್ಡಿ ಗುಂಪು ನಡೆಸಿರುವ ಅಕ್ರಮಗಳಿಗೆ ಮಿತಿಯೇ ಇಲ್ಲ. ಇಂತಹ ಸರ್ವಾಧಿಕಾರದೆದುರು ಜನರ ಪ್ರತಿರೋಧವೂ ಬೆಳೆಯುತ್ತಿದೆ. ಚುನಾವಣಾ ಕಣದಲ್ಲಿನ ವಿದ್ಯಮಾನಗಳ ಅವಲೋಕನವಿಲ್ಲಿ.

ಸರ್ವಾಧಿಕಾರವ್ವೋ... ಜನರ ಹಕ್ಕುಗಳೋ ?

ಬಳ್ಳಾರಿ ಚುನಾವಣಾ ಸಂಘರ್ಷ

— ಯು.ಬಸವರಾಜ್ —


ಬಳ್ಳಾರಿ ಜಿಲ್ಲೆಯ ಗಣಿ ಸಂಪನ್ಮೂಲ, ಅದರ ಲೂಟಿಯಿಂದ ಬೆಳೆದ ಬಂಡವಾಳ, ಹಾಗೂ ಬಂಡವಾಳಗಾರರ ನಡುವಿನ ಆಧಿಪತ್ಯದ ಸೆಣಸಾಟ ರಾಜಕೀಯದಲ್ಲಿ ಬಂಡವಾಳ ತೊಡಗಿಸುವಂತೆ, ಶಾಸಕರುಗಳ ಖರೀದಿ, ರೆಸಾರ್ಟ್‌ಗಳ ರಾಜಕಾರಣ, ಸರ್ಕಾರಗಳ ಬದಲಾಯಿಸುವಿಕೆ, ಕರ್ನಾಟಕ, ಆಂಧ್ರ, ರಾಜ್ಯಗಳ ಅಧಿಕಾರಕ್ಕಾಗಿ ಮೇಲಾಟ ಒಂದೆಡೆಯಾದರೆ, ಗಡಿ ಒತ್ತುವರಿ, ಅಕ್ರಮ ಗಣಿಗಾರಿಕೆ, ವ್ಯಾಪಕಗೊಂಡ ಭ್ರಷ್ಟಾಚಾರ, ಗಣಿ ಲಂಚ ಹಗರಣ, ಪರಿಸರ ಮಾಲಿನ್ಯ, ಗಾಳಿಗೆ ತೂರಲ್ಪಟ್ಟ ಕಾನೂನು-ಸುವ್ಯವಸ್ಥೆ ಮತ್ತೊಂದೆಡೆ ಈಚಿಗೆ ಬೆಳೆದ ಜಾಗತೀಕ ಬಿಕ್ಕಟ್ಟಿನ ಪರಿಣಾಮ ಖನಿಜ ಸಂಪನ್ಮೂಲದ ಬೆಲೆ ಕುಸಿತ, ಬೆಳೆದ ನಿರುದ್ಯೋಗ ತಾತ್ಕಾಲಿಕವಾಗಿ ತಣ್ಣಗಾದ ಗಣಿ ವಹಿವಾಟಿನ ಭರಾಟೆ, ವಿಮಾನ ನಿಲ್ದಾಣ ನಿರ್ಮಾಣ, ರೈತರ ಮೇಲೆ ಗೋಲಿಬಾರ್, ಇವುಗಳು, ಇವುಗಳಿಂದಾಗಿ ಬಳ್ಳಾರಿ ಜಿಲ್ಲೆ ನಿರಂತರ ಆಂಧ್ರಪ್ರದೇಶ ಕರ್ನಾಟಕ ಮಾತ್ರವಲ್ಲ, ದೇಶದ ಗಮನ ಸೆಳೆದಿದೆ.



ಜನಾರ್ಧನ ರೆಡ್ಡಿ

ಈ ಪಾರ್ಲಿಮೆಂಟು ಚುನಾವಣೆಯಲ್ಲೂ ಸಹಜವಾಗಿಯೇ ರಾಜ್ಯದ ಜನತೆಗೆ, ಬಳ್ಳಾರಿಯ ಜನಾರ್ಧನರೆಡ್ಡಿ ಪಕ್ಷ ಹಾಗೂ ರೆಡ್ಡಿ ಪಟಾಲಂನ ಚಲನವಲನಗಳ ಕುರಿತು ಮತ್ತು ಇವರ ಕುರಿತಾಗಿ ಬಳ್ಳಾರಿ ಜಿಲ್ಲೆಯ ಜನತೆಯ ಪ್ರತಿಕ್ರಿಯೆ ಏನು ಎಂಬ ಕುತೂಹಲ ಇದ್ದೇ ಇದೆ.


ಈಗಾಗಲೇ ಬಳ್ಳಾರಿಯ ಪಾರ್ಲಿಮೆಂಟ್ ಚುನಾವಣೆ ರಂಗೇರಿಸಿದೆ. ಈ ಚುನಾವಣೆಯಲ್ಲಿ ನಡೆಯಬಹುದಾದ ಅಧಿಕಾರ ದುರುಪಯೋಗ ಕುರಿತು ವಿರೋಧ ಪಕ್ಷಗಳು ಚುನಾವಣೆ ಸಮಿತಿಗೆ ದೂರು ಸಲ್ಲಿಸಿಯಾಗಿದೆ. ಅವುಗಳ ಪರಿಶೀಲನೆಗಾಗಿ ಅಡಿಷನಲ್ ಸೂಪರಿಡೆಂಟ್ ಆಫ್ ಪೋಲಿಸ್ ಮುಂತಾದವರ ವರ್ಗಾವಣೆಯಾಗಿದೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳನ್ನು ವರ್ಗಾಯಿಸಬೇಕೆಂಬ ಒತ್ತಡವು ಇದೆ. ಮತ್ತೊಂದೆಡೆ ಜನಾರ್ಧನರೆಡ್ಡಿಯವರು, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಮೇಲೆ ಗಣಿ ಲಂಚ ಪ್ರಕರಣ ನೆನಪಿಸಿ, ಹರಿಹಾಯ್ದಿದ್ದಾರೆ. ಕುಮಾರಸ್ವಾಮಿಯವರು ರೆಡ್ಡಿಯವರಿಗೆ ಜೈಲುವಾಸ, ಕೈಕೋಳ ಖಾಯಂ ಎಂದಿದ್ದಾರೆ. ಪರಸ್ಪರರ ಮೇಲೆ ಮಾತ್ರವಲ್ಲದ ಆರೋಪ,ಪ್ರತ್ಯಾರೋಪಗಳು, ರಾಜ್ಯದ ಗಮನವನ್ನು ಮರಳಿ ಬಳ್ಳಾರಿಯೆಡೆಗೆ ಸೆಳೆದಿವೆ.



ಜನಾರ್ಧನರೆಡ್ಡಿ ಪಕ್ಷ ಏನು ಮಾಡುತ್ತಿದೆ?

ಕಳೆದ ವಿಧಾನಸಭಾ ಚುನಾವಣೆಯಲ್ಲಿ ತೋರಿದ ಹೊಣೆಗಾರಿಕೆ ಆಸಕ್ತಿ ಜವಾಬ್ದಾರಿಯನ್ನು ರೆಡ್ಡಿ ಪಟಾಲಂ ಈ ಬಾರಿ ಕರ್ನಾಟಕದಲ್ಲಿ ಬಿಜೆಪಿಯನ್ನು ಗೆಲ್ಲಿಸಲು ತೋರುತ್ತಿಲ್ಲವೆಂದೇ ಹೇಳಬಹುದು.

ಕಳೆದ ಚುನಾವಣೆಯಲ್ಲಿ ತಾವ ಗೆಲ್ಲಲೇಬೇಕು. ತಮ್ಮ ಬೆಂಬಲಿಗರು ಗೆಲ್ಲಬೇಕು ಹಾಗೂ ಬಿಜೆಪಿಗೆ ಹೆಚ್ಚಿನ ಸ್ಥಾನಮಾನ ಸಿಗಬೇಕು. ರಾಜ್ಯ ಸರ್ಕಾರದ ಸೂತ್ರಧಾರ ರಾಗಬೇಕು. ಆ ಮೂಲಕ ಬಳ್ಳಾರಿ ಜಿಲ್ಲೆಯ ಗಣಿ ಸಂಪನ್ಮೂಲದ ಮೇಲೆ ಹಿಡಿತ ಸಾಧಿಸಬೇಕೆಂಬ ಉದ್ದೇಶವಿತ್ತು. ಅದು ಹೆಚ್ಚು ಕಡಿಮೆ ಈಡೇರಿದೆ.




ವೈ. ರಾಜಶೇಖರ ರೆಡ್ಡಿ

ಈ ಪಾರ್ಲಿಮೆಂಟ್ ಚುನಾವಣೆಯಲ್ಲಿ ಅಂತಹ ಭಾರೀ ವೈಯಕ್ತಿಕ ಉದ್ದೇಶಗಳಿದ್ದಂತೆ ಕಂಡು ಬಂದಿಲ್ಲ. ಒಂದು ತಮ್ಮ ಬಳಗದ ಬಳ್ಳಾರಿ, ರಾಯಚೂರಿನ ಕ್ಷೇತ್ರದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಬೇಕು, ಎರಡು, ರಾಜ್ಯದಲ್ಲಿನ ಕೆಲವು ಶತ್ರುಗಳನ್ನು ಸೋಲಿಸುವ ಹಾಗೂ ಬೇಕಾದ ಕೆಲವರಿಗೆ ಬಂಡವಾಳ ಹೂಡುವ ಸೀಮಿತ ಉದ್ದೇಶ ಮಾತ್ರವೇ ಇದೆ ಎನಿಸುತ್ತದೆ.

ಹೀಗಾಗಿ ರಾಜ್ಯದಾದ್ಯಂತ ತಿರುಗಾಡಿ ಬಿಜೆಪಿಯನ್ನು ಗೆಲ್ಲಿಸಬೇಕೆಂಬ ಇರಾದೆ ಇದ್ದಂತಿಲ್ಲ. ಆದರೆ ಆಂಧ್ರಪ್ರದೇಶದ ರಾಜಕಾರಣದಲ್ಲಿ, ಚುನಾವಣೆಯಲ್ಲಿ ಇವರ ಹಿತಾಸಕ್ತಿ ಅಡಗಿದೆ. ಒಂದು ವೇಳೆ ಸರ್ಕಾರ ಬದಲಿಯಾದಲ್ಲಿ ತೊಂದರೆ ಮನೆ ಬಾಗಿಲಿಗೆ ಬಂದಂತೆಯೇ ಎಂಬ ಎಚ್ಚರಿಕೆ ತೋರುತ್ತಿದ್ದಾರೆ.

'ಬಳ್ಳಾರಿ ಜನಾರ್ಧನರೆಡ್ಡಿ ಪಕ್ಷ'ವು, ಒಂದೆಡೆ ಕರ್ನಾಟಕದಲ್ಲಿ ಭಾರತೀಯ ಜನತಾ ಪಾರ್ಟಿಯಾಗಿದ್ದರೇ ಬಳ್ಳಾರಿಯ ಗಡಿಯಾಚೆ, ಆಂಧ್ರದಲ್ಲಿ ಕಾಂಗ್ರೆಸ್ ಪಾರ್ಟಿಯಾಗಿದೆ. ಹೀಗಾಗಿ ಅದಕ್ಕೆ ಕಾಂಗ್ರೆಸ್ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರುವ ಇರಾದೆ ಇದೆ. ಅದೇ ರೀತಿ 'ಮಹಾಕೂಟ'ವನ್ನು ಸೋಲಿಸುವ ಅವಶ್ಯಕತೆಯು ಅವರಿಗೆ ಇದೆ. ಇದು ಅವರ ಬಂಡವಾಳದ ಬೆಳವಣಿಗೆಯ ಅಗತ್ಯವಾಗಿದೆ. ಇವರ ಜೀವನಾಡಿಯಾದ 'ಬ್ರಾಹ್ಮಿಣಿ ಸ್ಟೀಲ್ಸ್' ಕೈಗಾರಿಕೆ ಮತ್ತು ಓಬಳಾಪುರಂ ಮೈನ್ಸ್, ಅದರ ವ್ಯವಹಾರದ ಬೆಳವಣಿಗೆಗೆ ಮಾತ್ರವಲ್ಲ ಕರ್ನಾಟಕದ ಗಡಿ ಒತ್ತುವರಿ, ಗಡಿರೇಖೆ ನಾಶಪಡಿಸಿದ ಪ್ರಕರಣಗಳು, ಅಕ್ರಮ ಗಣಿಗಾರಿಕೆ, ಈ ಎಲ್ಲವುಗಳಿಂದ ರಕ್ಷಣೆಗೆ ಇದು ಬೇಕಾಗಿದೆ. ತಮ್ಮದೆ ಅಭ್ಯರ್ಥಿಯನ್ನು 'ಓಬಳಾಪುರಂ ಮೈನ್ಸ್' ಪ್ರದೇಶವಿರುವ ರಾಯದುರ್ಗ ಕ್ಷೇತ್ರದಿಂದ (ಅನಂತರಪುರ ಜಿಲ್ಲೆ) ಕಣಕ್ಕಿಳಿಸಲಾಗಿದೆ. ಕಾಂಗ್ರೆಸ್ ಮರಳಿ ಅಧಿಕಾರಕ್ಕೆ ಬಂದರೆ ಅವರನ್ನು ಮಂತ್ರಿ ಮಾಡಿಕೊಳ್ಳುವ ಇರಾದೆಯೂ ಇಲ್ಲದಿಲ್ಲ. ಅದೇ ರೀತಿ ಕರ್ನೂಲು ಜಿಲ್ಲೆಯ ಆಲೂರು ಮತ್ತೊಂದು ಕಡೆ 3-4 ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗಿದೆ ಎಂಬ ವರದಿಗಳಿವೆ. ಕೇವಲ ಕಾಂಗ್ರೆಸ್‌ನಿಂದ ಮಾತ್ರವಲ್ಲ 'ಪ್ರಜಾರಾಜ್ಯಂ' ಮತ್ತಿತರೇ ಪಕ್ಷಗಳ ಹುರಿಯಾಳುಗಳಾಗಿ ತಮ್ಮ ಬೆಂಬಲಿಗರನ್ನೂ ನಿಲ್ಲಿಸುವ ಅಥವಾ ಸಂಪರ್ಕದಲ್ಲಿರುವ ಗೆಳೆಯರನ್ನು ಗೆಲ್ಲಿಸಲು, ನೆರವು ನೀಡುವ ಯತ್ನವೂ ನಡೆದಿದೆ ಎನ್ನಲಾಗಿದೆ. 'ಮಹಾಕೂಟಮೀ' ಕಾಂಗ್ರೆಸ್ ಮತ್ತು ಪ್ರಜಾರಾಜ್ಯಂ ನಡುವೆ ಸಮಬಲ ಏರ್ಪಟ್ಟು ಯಾರಿಗೂ ಬಹುಮತ ಬರದ ಸಂದರ್ಭ ಉಂಟಾದರೆ ಎಂಬ ಪ್ರಶ್ನೆಯೂ ಅಡಗಿದೆ. 'ಓಬಳಾಪುರಂ ಮೈನ್ಸ್', 'ಬ್ರಾಹ್ಮಿಣಿ ಸ್ಟೀಲ್ಸ್' ಎಲ್ಲವೂಗಳಲ್ಲಿ ಹೇಗೆ ಆಂಧ್ರ ಮುಖ್ಯಮಂತ್ರಿ ವೈ.ಎಸ್.ರಾಜಶೇಖರರೆಡ್ಡಿ ಕುಟುಂಬದ ಜೊತೆ ಸಹಯೋಗವಿದೆಯೋ, ಈ ಚುನಾವಣೆಯಲ್ಲೂ ಹಾಗೇ ಇರಬಹುದಲ್ಲಾ. ಹೀಗಾಗಿ ಅವರು ಆಂಧ್ರಪ್ರದೇಶದ ಚುನಾವಣೆಯಲ್ಲಿ ನೇರವಾಗಿ ಭಾಗಿಯಾಗುವ ಅವಶ್ಯಕತೆ ಬಂದಿಲ್ಲ. ಅದನ್ನೆಲ್ಲಾ ನೋಡಲು ವೈ.ಎಸ್.ಆರ್. ಇದ್ದಾರಲ್ಲ! ಬಂಡವಾಳದ ಸಹಯೋಗ ನೀಡಿದ್ದರಷ್ಟೇ ಸಾಕಾಗಿದೆ.



ಈ ಎಲ್ಲಾ ಕಾರಣಗಳಿಂದಾಗಿ, ಕರ್ನಾಟಕದ ಚುನಾವಣೆಯಲ್ಲಿ ತಮ್ಮ ಕಾರ್ಯಕ್ಷೇತ್ರವನ್ನು ಬಳ್ಳಾರಿ ಹಾಗೂ ಈಚೆಗೆ ರಾಯಚೂರಿಗೆ ಸೀಮಿತಗೊಳಿಸಿಕೊಂಡ ಹಾಗೆ ಕಾಣುತ್ತಿದೆ. ಜಾತಿ ಸರ್ಟಿಫಿಕೇಟ್ ವಿವಾದ ಬಳಸಿಕೊಂಡು ತಮ್ಮದೇ ಗುಂಪಿನ ಇನ್ನೊಬ್ಬ ನಿಕಟ ಹಾಗೂ 'ಹಾರ್ಡ್‌ಕೋರ್' ಸಹವರ್ತಿಯನ್ನು ರಾಯಚೂರಿನಿಂದ ಕಣಕ್ಕಿಳಿಸಲಾಗಿದೆ.

ರೆಡ್ಡಿ ಪಕ್ಷ ವಿಚಲಿತವಾಗಿದೆ

ಬಳ್ಳಾರಿ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಬರುವ ಎಲ್ಲಾ 08 ವಿಧಾನಸಭಾ ಕ್ಷೇತ್ರಗಳ ಪೈಕಿ 7 ನ್ನು ಬಿಜೆಪಿ ಗೆದ್ದುಕೊಂಡಿದೆ. ಅದೇ ರೀತಿ ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ ಜಿಲ್ಲಾ ಪಂಚಾಯತ್, ಹಲವು ತಾಲ್ಲೂಕು ಪಂಚಾಯತ್, ಪುರಸಭೆ, ಪಟ್ಟಣ ಪಂಚಾಯತ್, ನಗರಸಭೆಗಳು. ಇವರ ವಶದಲ್ಲಿದ್ದರೂ, ಯಾಕೆ ಆಪರೇಷನ್ (ಕ)ಮಲವನ್ನು ಈಗಲೂ ಜಿಲ್ಲೆಯ ಕೆಲವು ಸಣ್ಣ ಮಟ್ಟ ಪುರಸಭೆ, ಪಂಚಾಯತ್‌ಗಳಿಗೆ ವಿಸ್ತರಿಸಲಾಗಿದೆ? ಯಾಕೆ ಸುಮಾರು 02-03 ತಿಂಗಳಿಂದಲೇ ಬಳ್ಳಾರಿ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಸಿದ್ಧತೆ ನಡೆಸಿಕೊಂಡುಬರಲಾಗಿದೆ. ಸೋಲಬಹುದೆಂಬ ಭಯವೇ..!?

ಬಳ್ಳಾರಿ ನಗರ ಹಾಗೂ ತಾಲ್ಲೂಕಿನ ಜಾತ್ಯಾತೀತ ಜನತಾದಳದ ಮುಖಂಡ ಸೂರ್ಯನಾರಾಯಣರೆಡ್ಡಿಯವರ ಬೆಂಬಲಿಗರಾಗಿದ್ದ ಅನೇಕ ಮುಖಂಡರು ಸಾಮೂಹಿಕವಾಗಿ ಬಿಜೆಪಿ ಸೇರ್ಪಡೆಗೊಂಡಿದ್ದು, ಹೊಸಪೇಟೆ ನಗರಸಭೆ, ಕಮಲಾಪುರ, ಕೊಟ್ಟೂರು, ಮುಂತಾದ ಪುರಸಭೆಗಳು ಬಿಜೆಪಿಯಾಗಿ ಬದಲಿಗೊಂಡವು. ಬಳ್ಳಾರಿ ನಗರದ ಅಲ್ಲಂ ವೀರಭದ್ರಪ್ಪನವರ ಸಹೋದರರು, ಕಾಂಗ್ರೆಸ್ ಪ್ರಮುಖರು ಸೇರ್ಪಡೆಗೊಂಡರು. ಈ ಎಲ್ಲವೂ ಒಂದೆಡೆ ಬಳ್ಳಾರಿ ಕ್ಷೇತ್ರದಲ್ಲಿ ಅಧಿಕ ಮತಗಳಿಂದ ಗೆಲ್ಲುತ್ತೇವೆ ಎಂಬ ವಿಶ್ವಾಸದ ಮಾತನ್ನು ಮಂತ್ರಿ ಕರುಣಾಕರರೆಡ್ಡಿಯುವರು, ಯಡಿಯೂರಪ್ಪನವರು ಆಡಿದ್ದರೂ, ಚಿಕ್ಕೋಡಿಯಲ್ಲಿ ಗೆಲುವು ಅಷ್ಟು ಸುಲಭವೇನೂ ಆಗಿಲ್ಲವೆಂಬುದು ಗೊತ್ತಾಗಿದೆ. ಇವರು ಕಳೆದ ಒಂದು ವರ್ಷದ ಅಧಿಕಾರಾವಧಿಯಲ್ಲಿ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದರ ಪರಿಣಾಮವಾಗಿ ಜಿಲ್ಲೆಯಲ್ಲಿ ಉಂಟಾದ ತಳಮಳಗಳನ್ನು ಗಮನಿಸಿದರೇ ಅವರ ಭಯದ ಮೂಲ ಗೊತ್ತಾಗುತ್ತದೆ.

ಜಿಲ್ಲೆಯ ಗಣಿ ಸಂಪನ್ಮೂಲದ ಮೇಲೆ ಆಧಿಪತ್ಯ ಹಾಗೂ ಏಕಸ್ವಾಮ್ಯ ಸ್ಥಾಪನೆಗಾಗಿ ಪ್ರಯತ್ನಿಸುವವ

ಪು: 10



ದಕ್ಷಿಣ ಕನ್ನಡ: ನಿರುದ್ಯೋಗ, ಆದಾಯ ಕುಸಿತ...

ಪುಟ 8 ರಿಂದ

ಪೆಟ್ರೋ ಕೆಮಿಕಲ್ಸ್ ಸಂಕೀರ್ಣ ಘಟಕದ ಪ್ರಸ್ತಾಪ ಇಡೀ ಜಿಲ್ಲೆಯ ಉದ್ದಗಲಕ್ಕೂ ಯೋಜನಾ ನಕ್ಷೆ ವಿಸ್ತರಿಸಿದ್ದು, ಲಕ್ಷಾಂತರ ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗಾವಕಾಶದ ಬಣ್ಣ ಬಣ್ಣದ ಚಿತ್ರಣ ಬಿತ್ತರಿಸಲಾಗುತ್ತಿದೆ. ಇದು ಅವಾಸ್ತವಿಕ ಎಂಬ ಭಾವನೆ ಥಟ್ಟನೆ ಸಾಮಾನ್ಯ ಜನರ ಮನದಲ್ಲಿ ಬೆಳೆದು ಬರುತ್ತಿರುವಂತೆಯೇ ಅತ್ತ ಕೃಷಿಭೂಮಿ ಬಿಟ್ಟುಕೊಡಲು ತಯಾರಿರದ ರೈತರು ಮತ್ತು ಪರಿಸರವಾದಿಗಳು ಸಂಘಟಿತ ಪ್ರತಿರೋಧ ನೀಡುತ್ತಿದ್ದಾರೆ.

ಶಿಕ್ಷಣ ಮತ್ತು ವ್ಯಾಪಾರದ ದಂಧೆ

ಜಿಲ್ಲೆಯ ಮತ್ತೊಂದು ಗಮನಾರ್ಹವಾದ ವಿದ್ಯಮಾನ ಶಿಕ್ಷಣ ಮತ್ತು ಆರೋಗ್ಯದ ಬಿಸ್ನೆಸ್. ಈ ವ್ಯಾಪಾರ ಯಾವುದೇ ಅಡೆತಡೆಯಿಲ್ಲದೆ ದೇಶ ವಿದೇಶಗಳ ಗಿರಾಕಿಗಳನ್ನು ಆಕರ್ಷಿಸಿ ಅಪಾರ ಸಂಪತ್ತಿನ ಶಿಕ್ಷಣೋದ್ಯಮಿಗಳು ಜಿಲ್ಲೆಯಲ್ಲಿ ಸೃಷ್ಟಿಯಾಗಿದ್ದಾರೆ. ಬದುಕಿನ ಎಲ್ಲಾ ಅವಯವ, ಆಯಾಮ ನಡೆನುಡಿಗಳೆಲ್ಲವನ್ನೂ ಶಿಕ್ಷಣದ ಚೌಕಟ್ಟಿಗೆ ತಂದು ಅದನ್ನು 'ಕೋರ್ಸು' ಎಂದು ಹೇಳಿ ಆಕರ್ಷಕವಾದ ಕೈಪಿಡಿಯನ್ನು ಮುದ್ರಿಸಿ ಎಲ್ಲಾ ಪ್ರಮುಖ ಕೇಂದ್ರಗಳಲ್ಲಿ ಪಂಚತಾರಾ ಹೋಟೆಲ್‌ಗಳಲ್ಲಿ ಏಜೆಂಟರನ್ನು ನೇಮಿಸಿ ಅನಂತರ ಅಲ್ಲಿಂದ ವಿವಿಧ ವಾಹನಗಳ ಮೂಲಕ ಕರೆತಂದು ಲಕ್ಷಾಂತರ ರೂಪಾಯಿ ದೋಚಿ, ಸರ್ಟಿಫಿಕೇಟ್ ನೀಡಿ ಕಳುಹಿಸುವ ಈ ಶಿಕ್ಷಣ ರಂಗದಲ್ಲಿ ಇತ್ತೀಚಿಗೆ ನಾಯಿಕೊಡೆಗಳಂತೆ ಶಿಕ್ಷಣ ಸಂಸ್ಥೆಗಳು ಹುಟ್ಟಿಯಾಗಿದೆ ಇದರ ಒಂದೇ ಒಂದು ನೇರ ಉಪಯೋಗವೆಂದರೆ ಈ ರಂಗದಲ್ಲಿ ಏನಿಲ್ಲವೆಂದರೂ ಹತ್ತು ಹದಿನೈದು ಸಾವಿರದಷ್ಟು ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗ ಸೃಷ್ಟಿಯಾಗಿದೆ. ಇವರನ್ನು ಅತ್ಯಲ್ಪ ಸಂಬಳಕ್ಕೆ ದುಡಿಸಿ ಶೋಷಣೆ ಮಾಡಲಾಗುತ್ತಿದೆ. ಮೇಲ್ಕಂಡ ವರ್ಣನೆ ಆರೋಗ್ಯರಂಗಕ್ಕೂ ಅಂದರೆ ಆಸ್ಪತ್ರೆಗಳಿಗೂ ಅನ್ವಯವಾಗುತ್ತದೆ. ಆಸ್ಪತ್ರೆಯ ಅಕ್ರಮ ದಂಧೆಯ ವಿರುದ್ಧ ಪ್ರತಿಂಗಳು ಒಂದಲ್ಲ ಒಂದು ಕಡೆಯಲ್ಲಿ ವಂಚನೆಗೆ ಒಳಗಾದ ರೋಗಿಯ ಪರವಾಗಿ ಪ್ರತಿಭಟನೆಗಳು ನಡೆಯುತ್ತಾ ಇದೆ. ಇಲ್ಲೂ ಸಹ ಹಲವಾರು ಹೊಸದಾಗಿ ಈ ದಶಕದಲ್ಲಿ ಸಾವಿರಾರು ಸೇವಾ ಉದ್ಯೋಗ ನಿರ್ಮಾಣಗೊಂಡಿದೆ.


ಸೇವಾ ರಂಗದಲ್ಲಿ...

ಅಸಂಘಟಿತ ರೂಪದಲ್ಲಿ ಸೇವಾರಂಗ ಕಳೆದೊಂದು ದಶಕದಿಂದ ವೇಗವಾಗಿ ಬೆಳೆಯುತ್ತಿದೆ. ಎಲೆಕ್ಟ್ರಾನಿಕ್ಸ್‌ನ ಆಧುನಿಕ ಉಪಕರಣಗಳನ್ನು ಮತ್ತು ಪ್ರಯೋಜನಗಳನ್ನು ಆಧಾರಿಸಿ ನಡೆದಿರುವ ಈ ಬೆಳವಣಿಗೆಯಲ್ಲಿ ಎಳೆರಕ್ತದ ಯುವಕ ಯುವತಿಯರಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಇಲ್ಲೂ ಸಹ ಯಾವುದೇ ಸೌಲಭ್ಯ ಗಳಾಗಲೀ ಭದ್ರತೆಯಾಗಲೀ ಯೋಗ್ಯ ಸಂಬಳವಾಗಲೀ ಇಲ್ಲ. ಇವರ ಜೀವನ ನಿರ್ವಹಣೆ ನೆಲದಿಂದ ಚಾಪೆಗೆ ಚಾಪೆಯಿಂದ ನೆಲಕ್ಕೆ ಎಂಬಂತಾಗಿದೆ.

ಸಾಂಪ್ರದಾಯಿಕ ಕಸುಬು ಮೂಲೆ ಗುಂಪು

ಜಾಗತೀಕರಣಕ್ಕೆ ಸಾಕಷ್ಟು ಒಗ್ಗಿಕೊಂಡ ದ.ಕ.ಜಿಲ್ಲೆಯಲ್ಲಿ ಸಾಂಪ್ರದಾಯಿಕ ಕುಲಕಸುಬುಗಳು ಮೂಲೆಗುಂಪಾಗುತ್ತಿದೆ. ಮೀನುಗಾರಿಕೆಯೂ ತನ್ನ ಉಚ್ಛ್ರಾಯ ಪರಿಸ್ಥಿತಿಯನ್ನು ಕಳೆದುಕೊಂಡಿದೆ. ಇಲ್ಲೂ ಸಹ ಮೀನುಗಾರಿಕೆಯನ್ನು ಅವಲಂಬಿಸಿ ಬದುಕುವ ಜನರ ಪ್ರಮಾಣ ಕಡಿಮೆಯಾಗಿದೆ. ನೇಯ್ಗೆ ಇಲ್ಲವೇ ಇಲ್ಲವೆಂದು ಹೇಳುವಂತಾಗಿದೆ. ಕುಂಬಾರಿಕೆ ಕೂಡಾ ನಿತ್ರಾಣ ಹಂತಕ್ಕೆ ತಲುಪಿದೆ. ಇದೇ ರೀತಿ ಇನ್ನಿತರ ಜಾತಿ ಕುಲ ಆಧಾರಿತ ಕಸುಬುಗಳು ತನ್ನ ಸ್ಥಾನವನ್ನು ಖಾಲಿ ಮಾಡಿ ಸಂಶೋಧನೆಯ ವಸ್ತು ಆಗಿ ಮಾರ್ಪಡುಗೊಂಡಿವೆ. 1800ರ ಆರ್ಥಿಕ ಇತಿಹಾಸವನ್ನು ಅಧ್ಯಯನ ಮಾಡಿದಾಗ ಶೇಂದಿ ಇಳಿಸುವ ಕಾಯಕ ಪ್ರಮುಖ ಆರ್ಥಿಕತೆಯ ಭಾಗವಾಗಿತ್ತು. ಆದ್ದರಿಂದಲೇ ಅದನ್ನು ಬ್ರಿಟಿಷ್ ಕಂಪನಿ ತನ್ನ ಏಕಸ್ವಾಮ್ಯಕ್ಕೆ ಒಳಪಡಿಸಿತ್ತು. ಬದಲಾದ ಸಾಮಾಜಿಕ ಆರ್ಥಿಕ ಸನ್ನಿವೇಶದಲ್ಲಿ ಕೇಂದ್ರೀಯ ಇಳಿಸುವ ಮರ (ತಾಳೆಮರ) ಕೂಡಾ ಕಡಿಮೆಯಾಗಿ ಸೇವಾರಂಗವನ್ನು ಆಧಾರಿಸಿ ಸಣ್ಣಪುಟ್ಟ ಅಂಗಡಿಗಳು ಶೋರೂಮ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ಬೆಳೆಯುತ್ತಿದ್ದು, ಯುವಜನತೆ ಅದರತ್ತ ಆಕರ್ಷಿಸುತ್ತಾಗುತ್ತಿದ್ದಾರೆ.

ಹೆಂಚಿನ ಕಾರ್ಖಾನೆ



ಜಿಲ್ಲೆಯಲ್ಲಿ ಧಾರ್ಮಿಕ ರಂಗ ಅತ್ಯಂತ ಶೀಘ್ರವಾಗಿ 'ಉದ್ಯಮ' ವಾಗಿ ಬೆಳೆಯುತ್ತಿದೆ. ಅಲ್ಲಲ್ಲಿ ಕಟ್ಟೆಗಳು, ಸಾರ್ವಜನಿಕ ಗಣೇಶೋತ್ಸವಗಳು, ಶಾರದೋತ್ಸವಗಳು, ಶ್ರೀಕೃಷ್ಣ ಮೊಸರು ಕುಡಿಕೆ ಉತ್ಸವಗಳು, ಸಾರ್ವಜನಿಕ ಸತ್ಯನಾರಾಯಣ ಪೂಜೆ, ಸಾರ್ವಜನಿಕ ಶನಿಪೂಜೆ ಅಶ್ವಥಮರಕ್ಕೆ ವಿವಾಹೋತ್ಸವ, ನಾಗಮಂಡಲ ಬ್ರಹ್ಮಕಲಶೋತ್ಸವಗಳು ಮುಖ್ಯವಾಗಿ ಸಂಘ ಪರಿವಾರದ ಕಾರ್ಯಕ್ರಮಗಳಾಗಿ ಹೋಗಿವೆ. ಇವೆಲ್ಲವೂ ಕಳೆದೆರಡು ದಶಕಗಳ ವಿಶಿಷ್ಟ ಉತ್ಪನ್ನವೂ ಹೌದು. ಉಗ್ರ ಹಿಂದುತ್ವವಾದವು ಪ್ರಚಾರದ ಮಾಧ್ಯಮವಾಗಿರುವ ಈ ಧಾರ್ಮಿಕ ಕಾರ್ಯಕ್ರಮ ಆರ್ಥಿಕ ಸಂಪನ್ಮೂಲದ ಕ್ರೋಢೀಕರಣ ದುಂದುವೆಚ್ಚ ಅಪವ್ಯಯಗಳ ತಾಣವೂ ಹೌದು. ಇತ್ತೀಚಿಗಿನ ಒಂದು ಗಮನಾರ್ಹ ಬೆಳವಣಿಗೆಯೆಂದರೆ ಈ ಧಾರ್ಮಿಕ ಸಭಾ ಕಾರ್ಯಕ್ರಮಕ್ಕೆ ಜನಸಂದಣಿ ಸೇರಿಸಲು ಡ್ಯಾನ್ಸ್ ಕಾರ್ಯಕ್ರಮ, ರಸಮಂಜರಿ ಕಾರ್ಯಕ್ರಮಗಳು. ಅವೂ ಸಹ ಉದಾರೀಕರಣದ ಬಂಡವಾಳಶಾಹಿ ಮೌಲ್ಯಗಳಿಗೆ ಒಗ್ಗಿಕೊಂಡಿದೆ. ನಾಗಮಂಡಲ ಮತ್ತು ಭೂ ಮಾಫಿಯಾಗಳ ಒಂದು ವಿಷ ವರ್ತುಲ ಜಿಲ್ಲೆಯಲ್ಲಿ ಕಾರ್ಯಾಚರಿಸುತ್ತಿದೆ.

ಸಾರಿಗೆ ಮಾಫಿಯಾ

ದ.ಕ.ಜಿಲ್ಲೆಯ ಸಾರಿಗೆ ವ್ಯವಸ್ಥೆ ಕೂಡಾ ಒಂದು ಮಾಫಿಯಾವಾಗಿದೆ. ಖಾಸಗಿರಂಗದ ಕಬಂಧಬಾಹುಗಳು ಜಿಲ್ಲೆಯ ರಾಜಕೀಯ ಮತ್ತು ಆಡಳಿತವನ್ನು ಕುಣಿಸುತ್ತಿದೆ. ಕಳೆದ ದಶಕಕ್ಕೆ ಹೋಲಿಸಿದರೆ ಸಾವಿರಾರು ಹೊಸ ಹೊಸ ಬಸ್ ರೂಟ್‌ಗಳು ಪ್ರಾರಂಭವಾಗಿ ಸಾವಿರಾರು ಸಂಖ್ಯೆಯಲ್ಲಿ ಉದ್ಯೋಗವನ್ನು ಸೃಷ್ಟಿಸಿದೆ. ಶೇ.95 ಖಾಸಗಿ ರಂಗದ ಏಕಸ್ವಾಮ್ಯತೆ ಹೊಂದಿರುವ ಖಾಸಗಿ ಮಾಲೀಕರ ಮೇಲೆ, ಪ್ರಯಾಣಿಕರ ಮೇಲೆ ದೌರ್ಜನ್ಯ, ಹಲ್ಲೆ, ವಂಚನೆ, ಮೋಸಗಾರಿಕೆಗಳಿಗೂ ಕುಖ್ಯಾತಿಯಾಗಿದೆ. ದಿನವೊಂದಕ್ಕೆ ಹಲವಾರು ಕೋಟಿ ರೂಪಾಯಿ ಹಣ ಚಲಾವಣೆಯ ಈ ಉದ್ಯಮದ ಮೇಲೆ ಜಿಲ್ಲಾಡಳಿತಕ್ಕೆ ಸರ್ಕಾರಕ್ಕೆ ಕನಿಷ್ಠ ನಿಯಂತ್ರಣವೂ ಇಲ್ಲದ ಏಕೈಕ ವಿಭಾಗವಾಗಿದೆ. ಆನೆ ತುಳಿದದ್ದೇ ದಾರಿ ಎಂಬಂತೆ ಖಾಸಗಿ ಬಸ್ಸು ಮಾಲಕರು ಅವರು ಗೂಂಡಾ ಪಡೆ ಮತ್ತು ಏಜೆಂಟರು ಮಾಡಿದ್ದೇ ನಿಯಮ ಆಡಿದ್ದೇ ಕಾನೂನು ಎಂಬಂತಾಗಿದೆ. ಆದ್ದರಿಂದಲೇ ಕೆ.ಎಸ್.ಆರ್.ಟಿ.ಸಿ. ಸಮಾನಾಂತರ ಬಸ್ಸು ವ್ಯವಸ್ಥೆ ಪ್ರಾರಂಭಿಸುವ ಪ್ರಸ್ತಾಪ ಪ್ರಕಟವಾದಾಗ ವ್ಯಾಪಕ ಜನ ಬೆಂಬಲ ಜಿಲ್ಲೆಯಾದ್ಯಂತ ವ್ಯಕ್ತವಾಯಿತು. ಆದರೆ ಕೆ.ಎಸ್.ಆರ್.ಟಿ.ಸಿ. ಮತ್ತು ಸಾರಿಗೆ ಮಂತ್ರಿ ರೈಲು ಬಿಟ್ಟಿದ್ದು ಎಂಬುದು ಈಗ ಗೊತ್ತಾಗುತ್ತಿದೆ.

ಗಲ್ಫ್ ಮೂಲದ ಆದಾಯ

ವಿದೇಶದೊಂದಿಗೆ ದ.ಕ.ಜಿಲ್ಲೆಯ ಸಂಪರ್ಕಕ್ಕೆ ದೀರ್ಘ ಇತಿಹಾಸವಿದೆ. ದ.ಕ.ಜಿಲ್ಲೆಯಿಂದ ಸಾವಿರಾರು ಸಂಖ್ಯೆಯಲ್ಲಿ ವಿದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಗಲ್ಫ್ ರಾಷ್ಟ್ರಗಳಲ್ಲಿ ದುಡಿಯುತ್ತಿದ್ದಾರೆ. ಪ್ರತಿ 250 ಕುಟುಂಬಕ್ಕೆ ಕನಿಷ್ಠ ಒಬ್ಬರಾದರೂ ಒಂದಲ್ಲ ಒಂದು ವಿದೇಶದ ರಾಷ್ಟ್ರಗಳಲ್ಲಿ ಒಂದಲ್ಲ ಒಂದು ಉದ್ಯೋಗದಲ್ಲಿ ಇದ್ದು ಜಿಲ್ಲೆಯ ಆರ್ಥಿಕತೆಗೆ ಹಾಗೂ ತಮ್ಮ ಕುಟುಂಬದ ಜೀವನ ನಿರ್ವಹಣೆಗೆ ನೆರವಾಗುತ್ತಿದ್ದಾರೆ. ಕಳೆದ ಸೆಪ್ಟೆಂಬರ್‌ನಲ್ಲಿ ಪ್ರಾರಂಭವಾದ ಆರ್ಥಿಕ ಬಿಕ್ಕಟ್ಟಿನ ಪರಿಣಾಮ ಸಾವಿರಾರು ಸಂಖ್ಯೆಯಲ್ಲಿ ಜನ ಹಿಂತಿರುಗಿ ಬರಬಹುದೆಂದು ನಂಬಲಾಗಿತ್ತು. ಆದರೆ ಮೇಲ್ನೋಟಕ್ಕೆ ಈ ರೀತಿ ಕಂಡು ಬಂದಿಲ್ಲ. ಬದಲಾಗಿ ಸಂಬಳ ಭತ್ಯೆ, ಮೊದಲಾದ ಕಡಿತಗಳಿಗೆ ಒಳಪಟ್ಟು ಅಲ್ಲೇ ದುಡಿಯುತ್ತಿದ್ದಾರೆ. ಮೂಲ ಉದ್ಯೋಗ ಕಳೆದುಕೊಂಡವರು ಅಲ್ಲೇ ಯಾವುದಾದರೂ ಉದ್ಯೋಗ ಹುಡುಕಿ ಬದುಕುವ ಅನಿವಾರ್ಯತೆಗೆ ಒಗ್ಗಿಕೊಂಡಿದ್ದಾರೆ.

ಭಾಷೆಲ್ ಮಿಷನ್‌ನ ಆಗಮನದೊಂದಿಗೆ ಶಿಕ್ಷಣ ರಂಗದಲ್ಲಿ ಮುಂದಡಿಯಿಟ್ಟ ದಕ್ಷಿಣ ಕನ್ನಡ ಜಿಲ್ಲೆ ಶಿಕ್ಷಣದಲ್ಲಿ ಮುಂದಿದ್ದರೂ ಉನ್ನತ ಸರ್ಕಾರಿ ಅಧಿಕಾರಿಗಳನ್ನು ನೀಡುವಲ್ಲಿ ತೀರಾ ಹಿಂದೆ ಇದೆ. ಐಎಎಸ್, ಐಪಿಎಸ್, ಐಎಫ್‌ಎಸ್ ಮೊದಲಾದ ಉನ್ನತ ದರ್ಜೆಯ ಅಧಿಕಾರಿಗಳು ಈ ಜಿಲ್ಲೆಯಲ್ಲಿರುವ ಶಿಕ್ಷಣ ಮಟ್ಟಕ್ಕೆ ಅನುಗುಣವಾಗಿ ಬೆಳೆದಿಲ್ಲ. ಆದರೆ ಸಾಕಷ್ಟು ಸಂಖ್ಯೆಯಲ್ಲಿ ಡಾಕ್ಟರ್‌ಗಳು, ಎಂಜಿನಿಯರ್‌ಗಳು, ಸಾಫ್ಟ್‌ವೇರ್ ತಂತ್ರಜ್ಞರುಗಳು, ಬ್ಯಾಂಕಿಂಗ್ ದಿಗ್ಗಜರುಗಳು ಇದ್ದು ಜಿಲ್ಲೆಯ ಮುಂದೆ ಇದೆ. ದಕ್ಷಿಣ ಕನ್ನಡ ಜಿಲ್ಲೆಯು ಈ ನಿಟ್ಟಿನಲ್ಲಿ ಹಲವಾರು ಸಾರ್ವಜನಿಕ ರಂಗದ ಬ್ಯಾಂಕಿಂಗ್‌ಗಳನ್ನು ದೇಶಕ್ಕೆ ನೀಡಿದ ಜಿಲ್ಲೆ. ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ರಂಗದಲ್ಲಿ ಉದ್ಯೋಗಾವಕಾಶಗಳು ಕುಂಠಿತ ಗೊಂಡಿದೆ. ಸಾಫ್ಟ್‌ವೇರ್ ತಂತ್ರಜ್ಞರು ಸಾವಿರಾರು ಸಂಖ್ಯೆಯಲ್ಲಿ ಉತ್ಪಾದನೆಗೊಂಡು ಈ ರಂಗವೂ ಮುಖ್ಯ ಉದ್ಯೋಗಾಧಾರಿತ ರಂಗವಾಗಿ ಜಿಲ್ಲೆಯಲ್ಲಿ ಬೆಳೆಯುತ್ತಿದೆ. ಆದರೂ ಸಹ ಉತ್ತಮ ಅವಕಾಶ ಮತ್ತು ಗಳಿಕೆಗಾಗಿ ಹೈದ್ರಾಬಾದ್, ಬೆಂಗಳೂರು, ಮುಂಬಾಯಿ, ಅಮೇರಿಕಾದತ್ತ ಸಾವಿರಾರು ಸಂಖ್ಯೆಯಲ್ಲಿ ಯುವಜನ ತೆರಳುತ್ತಿದ್ದಾರೆ.

ಕೌಟುಂಬಿಕ ಸಂಬಂಧಗಳಲ್ಲಿ ಕಟ್ಟುಪಾಡುಗಳಲ್ಲಿ ವಿಘಟನೆಯಾಗಿದೆ. ಅವಿಭಕ್ತ ಕುಟುಂಬ ಪದ್ಧತಿ, ಅಳಿಯ ಸಂತಾನ ಕಟ್ಟುಪಾಡು ಸಡಿಲಗೊಂಡು, ಏಕ ಕುಟುಂಬ ಪದ್ಧತಿ ಸಾರ್ವತ್ರಿಕವಾಗುತ್ತಿದೆ. ಜಿಲ್ಲೆಯ ಹೆಚ್ಚಿನ ಸಮುದಾಯಗಳಲ್ಲಿ ಹೆಚ್ಚೆಂದರೆ ಎರಡು ಮಕ್ಕಳನ್ನು ಹೊಂದುವ ಪದ್ಧತಿ ಸಾರ್ವತ್ರಿಕವಾಗುತ್ತದೆ. ಅದರಲ್ಲೂ ಮುಂದುವರಿದ ಸಮುದಾಯಗಳಲ್ಲಿ ಒಂದೇ ಮಗು ಹೊಂದುವುದು ಸಂಪ್ರದಾಯ ವಾಗುತ್ತಿದೆ. ಇಂತಹ ಧನಾತ್ಮಕ ಅಂಶಗಳನ್ನು ಗುರುತಿಸುವಾಗಲೇ ಪ್ರತಿಗಾಮಿತನದ ಜಾತೀಯ-ಮತೀಯ ಸಂಘಟನೆಗಳು ಸಕ್ರಿಯವಾಗುತ್ತಿವೆ. ಇವುಗಳು ಕಂದಾಚಾರ, ಮೂಢನಂಬಿಕೆ, ಕೋಮುವಾದಗಳಿಗೆ ನೀರೆರೆದು ಪೋಷಿಸುತ್ತಿವೆ. ಕಳೆದ ಶತಮಾನದ ಹಾಗೂ ಅದರ ಮೊದಲಿನ ಶತಮಾನದಲ್ಲಿ ನಡೆದಂತಹ ರೀತಿಯ ಮತಾಂತರದ ಗುಂಪು ಗುಂಪು ಪ್ರಕರಣಗಳು ಕಳೆದ ಐದಾರು ದಶಕಗಳಿಂದ ನಡೆದಿಲ್ಲ. ಮತಾಂತರವೇ ಬೆರಳೆಣಿಕೆಯ ಘಟನೆಗಳಾಗಿ ಹೋಗಿದೆ. ಆದರೂ ಸಹ ಸಂಘ ಪರಿವಾರ ಅಲ್ಪಸಂಖ್ಯಾತ ಸಮುದಾಯದ ಮೇಲೆ ಅಪಪ್ರಚಾರ ನಡೆಸುತ್ತಿದೆ. ಕಳೆದ ವರುಷ ವ್ಯಾಪಕ ಹಿಂಸೆ ಹಲ್ಲೆಗಳನ್ನು ಸಂಘ ಪರಿವಾರ ನಡೆಸಿದೆ. ಚರ್ಚ್ ಮೊದಲಾದ ಧಾರ್ಮಿಕ ಶ್ರದ್ಧಾ ಕೇಂದ್ರದ ಮೇಲೆ ಸರಣಿ ಧಾಳಿ ನಡೆಸಿ ವಿಗ್ರಹ ಭಂಜಕತನದ ತಾಲಿಬಾನ್ ಗಳಂತಾಗಿದ್ದಾರೆ. ಮತಾಂತರಕ್ಕೆ ಹೇತುವಾಗಿರುವ ಮೂಲಭೂತ ಕಾರಣಗಳನ್ನು ಪರಿಹರಿಸಲು ಪ್ರಾಯೋಗಿಕ ಮತ್ತು ಪ್ರಾಮಾಣಿಕ ಪ್ರಯತ್ನ ಮಾಡಲು ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮಕವಾಗಿ ತಯಾರಿಲ್ಲದ ಸಂಘ ಪರಿವಾರ ಶ್ರೇಣೀಕೃತ ಜಾತಿ ಪದ್ಧತಿಯ ಕಬಂಧಬಾಹುಗಳನ್ನು ಭದ್ರಪಡಿಸುತ್ತಾ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಸಮಾನತೆಯನ್ನು ತೀವ್ರಗೊಳಿಸುತ್ತಿದೆ.

ಶಿಕ್ಷಣ ರಂಗ


ಶಿಕ್ಷಣ ಸೇವೆಯ ಬದಲು ವ್ಯಾಪಾರವಾಗಿದೆ. ಉನ್ನತ ತಾಂತ್ರಿಕ ಶಿಕ್ಷಣ ಹಣವುಳ್ಳವರು ಕೊಳ್ಳುವ ಸರಕಾಗಿದ್ದು, ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ಜಾತಿ, ಪಂಗಡ, ಮತ್ತು ದಲಿತರಿಗೆ ಮರೀಚಿಕೆಯಾಗಿದೆ. ಆದರೆ ಪ್ರಾಥಮಿಕ ಶಿಕ್ಷಣ ಪ್ರೌಢಶಿಕ್ಷಣ ಹಾಗೂ ಪದವಿ ಪೂರ್ವ ಶಿಕ್ಷಣದವರೆಗಿನ ಶಿಕ್ಷಣ ಪಡೆಯುವ ಪ್ರಬಲ ಒತ್ತಾಸೆಗಳು ಈ ಸಮುದಾಯದಲ್ಲಿ ಬೆಳೆದುಬರುತ್ತಿದೆ. ಗೂಡಂಗಡಿ ಶಿಕ್ಷಣ ದೊರಕಿಸಲು ಶತಾಯಗತಾಯ ಪ್ರಯತ್ನ ಪಡುವ ತಂದೆತಾಯಿಗಳು ದುಬಾರಿ ಬಡ್ಡಿ ವ್ಯಾಪಾರಿಗಳಿಂದ ಸಾಲ ಮಾಡಿಯಾದರೂ ಮಕ್ಕಳಿಗೆ ಶಿಕ್ಷಣಕ್ಕಾಗಿ ವ್ಯಯಿಸುತ್ತಿರುವುದು ಕಂಡು ಬರುತ್ತದೆ. ಶಿಕ್ಷಣ ಪಡೆದ ಮೇಲೆ ಉದ್ಯೋಗ

ಪುಟ 15ಕ್ಕೆ



ಹೊಣೆಗೇಡಿ ವಿರೋಧ ಪಕ್ಷ ಕಾಂಗ್ರೆಸ್

ಮತಾಂಧ ಸಿದ್ಧಾಂತವನ್ನು ಆಧರಿಸಿದ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದು ಅಲ್ಪಸಂಖ್ಯಾತರ ಮೇಲೆ ವ್ಯಾಪಕ ದಬ್ಬಾಳಿಕೆ, ಹಿಂಸೆ ನಡೆಸುತ್ತಿದ್ದರೂ, ರೈತರ ಮೇಲೆ ಲಾಠಿ ಪ್ರಹಾರ, ಗೋಲಿಬಾರ್ ನಡೆದರೂ ಜನರ ನಂಬಿಕೆಗೆ ಬಿಜೆಪಿ ಏನೆಲ್ಲಾ ದ್ರೋಹ ಬಗೆದರೂ ವಿರೋಧ ಪಕ್ಷ ಕಾಂಗ್ರೆಸ್ ರಚನಾತ್ಮಕ ವಿರೋಧ ಪಕ್ಷವಾಗಿ ಕೆಲಸ ಮಾಡುವಲ್ಲಿ, ಜನಾಂದೋಲನ ರೂಪಿಸಿ ಜನರ ಪರ ನಿಲ್ಲುವಲ್ಲಿ ಸಂಪೂರ್ಣ ವಿಫಲವಾಗಿದೆ.




ಜಿ.ವಿ.ಶ್ರೀರಾಮರೆಡ್ಡಿ

ಸುಮಾರು 124ವರ್ಷಗಳ ಇತಿಹಾಸವಿರುವ ರಾಜಕೀಯ ಪಕ್ಷ ಕಾಂಗ್ರೆಸ್ ಇಂದು ಅದು ತಲುಪಿರುವ ದುಸ್ಥಿತಿ ನೋಡಿದರೆ ಅದರ ಇತಿಹಾಸ ಬಲ್ಲ ಯಾರಿಗಾದರೂ ಜಿಗುಪ್ಸೆ ಆಗುವುದು ಸಹಜ. ರಾಷ್ಟ್ರಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಅದು ಎಂತಹ ದಿವಾಳಿ ಕೋರತನವನು ಪ್ರದರ್ಶಿಸುತ್ತಿದೆ ಎಂದರೆ ಇದು 1885 ರಲ್ಲಿ ಹುಟ್ಟಿದ ಕಾಂಗ್ರೆಸ್ಸೇ? ಇದು ಗಾಂದಿ ನಾಯಕತ್ವ ಕೊಟ್ಟ ಕಾಂಗ್ರೆಸ್ಸೆ? ಇದು ನೆಹರು ಮುನ್ನೆಡಿಸಿದ ಪಕ್ಷವೇ? ಎಂದು ಗಾಬರಿಯಾಗುತ್ತದೆ.

ಒಂದು ಕಡೆ ತಾತ್ವಿಕವಾಗಿ ದಿವಾಳಿ ಆಗಿದೆ. ಇನ್ನೊಂದು ಕಡೆ ರಾಜಕೀಯ ಅಧಃಪತನದ ಪಾತಾಳವನ್ನು ಮುಟ್ಟಿದೆ. 1932 ಲಾಹೋರಿನಲ್ಲಿ ನಡೆದ ಎ.ಐ.ಸಿ.ಸಿ. ಅಧಿವೇಶನದಲ್ಲಿ ಮತ್ತು 1952ರಲ್ಲಿ ತಮಿಳುನಾಡಿನ 'ಆವಡಿ' ಅಧಿವೇಶನದಲ್ಲಿ ನಿರ್ಣಯಗಳನ್ನು ಅಂಗೀಕರಿಸಿದ್ದು ಈ ಕಾಂಗ್ರೆಸ್ ಪಕ್ಷವೇನಾ? ಎಂದು ಅನುಮಾನ ಉಂಟಾಗುತ್ತದೆ. ಇಂದು ಅದು ತನ್ನ ಎಲ್ಲಾ ಮೂಲ ಸ್ವರೂಪಗಳನ್ನು ಕಳೆದುಕೊಂಡು, ಅದೊಂದು ರಾಜಕೀಯ ದಳ್ಳಾಳಿ ಪಕ್ಷವಾಗಿ ಮಾತ್ರವೇ ಉಳಿದಿಲ್ಲಾ. ಬದಲಾಗಿ ಅದೊಂದು ಭ್ರಷ್ಟರ ಕೂಟವಾಗಿ ಮಾರ್ಪಟ್ಟಿದೆ. ನೆಹರು, ವಲ್ಲಬಾಯಿ ಪಟೇಲ್ ಮತ್ತು ಮೌಲಾನಾ, ಅಜಾದ್‌ರಂತಹ ಧೀಮಂತ ನಾಯಕರನ್ನು ಗುಲ್ಜಾರಿಲಾಲ್ ನಂದ ಮತ್ತು ಲಾಲ್‌ಬಹದ್ದೂರ್‌ಶಾಸ್ತ್ರಿಯಂತಹ ಪ್ರಾಮಾಣಿಕರನ್ನು ಹೊಂದಿದ್ದ ಪಕ್ಷ ಇಂದು ಎಂತಹ ಹೀನಸ್ಥಿತಿಗೆ ತಲುಪಿ ಅನಾಥವಾಗಿದೆ ಎಂದರೆ ನೆಹರು ಕುಟುಂಬವನ್ನು ಬಿಟ್ಟು ಉಳಿಯಲಾರದ ಸ್ಥಿತಿ ತಲುಪಿದೆ. ಇನ್ನು ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ಸಿನ ಪರಿಸ್ಥಿತಿಯನ್ನು ಗಮನಿಸಿದರೆ ಅದು ಇನ್ನು ದುರಂತದ ಸ್ಥಿತಿಗೆ ತಲುಪಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಎಷ್ಟು ದಿವಾಳಿತನಕ್ಕೆ ತಲುಪಿದೆ ಎಂದರೆ ಅದನ್ನು ಊಹಿಸಲು ಸಾಧ್ಯವಿಲ್ಲ. ಕಳೆದ ಒಂದು ದಶಕದಿಂದಲೂ ಅದು ಅವಸಾನದ ಸ್ಥಿತಿಗೆ ತಲುಪುತ್ತಿದೆಯೇನೋ ಎಂದು ಅನ್ನಿಸುತ್ತಿದೆ. 2006 ಜನವರಿ ತಿಂಗಳಿಂದ ಈಚೆಗೆ ಅದೊಂದು ಕನಿಷ್ಠ ರಾಜಕೀಯ ಪಕ್ಷವಾಗಿ ಕೆಲಸ ಮಾಡುವುದನ್ನೆ ನಿಲ್ಲಿಸಿ ಬಿಟ್ಟಿದೆ.

ವಿರೋಧ ತೋರದ ವಿರೋಧ ಪಕ್ಷ

2008 ಮೇ ತಿಂಗಳಲ್ಲಿ ನಡೆದ ವಿಧಾನಸಭೆಯ ಚುನಾವಣೆಯಲ್ಲಿ ಅದು ಶಾಸನ ಸಭೆಯಲ್ಲಿ ದೊಡ್ಡ ವಿರೋಧ ಪಕ್ಷವಾಗಿ ಹೊರ ಹೊಮ್ಮಿತು. ಕಳೆದ ಒಂದು ವರ್ಷದಿಂದ ವಿಧಾನಸಭೆಯ ಒಳಗೆ ಮತ್ತು ಹೊರಗೆ ಅದರ ನಡವಳಿಕೆ ಅಸಹಾಯಕತೆಗೆ ತಲುಪಿದೆ ಎಂದು ತಿಳಿಯುತ್ತದೆ. ದೇಶ ಮತ್ತು ರಾಜ್ಯ ಕಂಡಂತಹ ಅತ್ಯಂತ ಭ್ರಷ್ಟ, ಕೆಟ್ಟ ಮತ್ತು ಅನಾಗರೀಕ ಸರ್ಕಾರವೊಂದು ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವ ಸಂದರ್ಭದಲ್ಲಿ 124 ವರ್ಷಗಳ ಇತಿಹಾಸವಿರುವ ಈ ಪಕ್ಷದ ನಡವಳಿಕೆಗಳನ್ನು ನೋಡಿದರೆ ಇಂದು ಜವಾಬ್ದಾರಿ ಸ್ಥಾನದಲ್ಲಿರುವ ರಾಜಕೀಯ ಪಕ್ಷವೇ ಎಂಬ ದಟ್ಟ ಗುಮಾನಿ ಉಂಟಾಗುತ್ತದೆ. ಇಂದು ಕರ್ನಾಟಕ ರಾಜ್ಯದ ದುಃಸ್ಥಿತಿ ಹೇಗಾಗಿದೆ ಎಂದರೆ ಅಧಿಕಾರದಲ್ಲಿರುವ ಕೋಮುವಾದಿ ಬಿಜೆಪಿ ಒಂದು ಸರ್ಕಾರವಾಗಿ ಕೆಲಸ ಮಾಡುತ್ತಿಲ್ಲ. ಕಾಂಗ್ರೆಸ್ ಎಂಬ ವಿರೋಧಪಕ್ಷ ವಿರೋಧಪಕ್ಷವಾಗಿ ಕೆಲಸಮಾಡುತ್ತಿಲ್ಲ. ಇಂದು ರಾಜ್ಯದ ಎಲ್ಲಾ ವಿಭಾಗದ ಜನತೆ ಕಂಗಾಲಾಗಿದ್ದಾರೆ. ಅದರಲ್ಲೂ ಮುಖ್ಯವಾಗಿ



ದುಡಿಯುವ ವರ್ಗವಂತೂ ಅತ್ಯಂತ ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಆರ್ಥಿಕ ರಂಗದಲ್ಲಿ ರಾಜ್ಯ ಇಂದು ದಿವಾಳಿ ಅಂಚಿಗೆ ತಲುಪುತ್ತಿದೆ. ಒಂದು ಕಡೆ ಕೃಷಿ ರಂಗ ಇನ್ನೊಂದು ಕಡೆ, ಕೈಗಾರಿಕಾರಂಗ ಎರಡು ತನ್ನ ಎಲ್ಲಾ ಉತ್ಪಾದನಾ ಶಕ್ತಿಯನ್ನು ಕಳೆದುಕೊಳ್ಳುತ್ತಿವೆ. ನಿರುದ್ಯೋಗ ಮತ್ತು ಬಡತನದ ಸಂಖ್ಯೆ ಏರುಮುಖವಾಗುತ್ತಿದೆ. ಇಂದಿನ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ನಮ್ಮ ರಾಜ್ಯವು ತತ್ತರಿಸುತ್ತಿದೆ. ಕೋಮುವಾದಿ ಬಿಜೆಪಿಗೆ ರಾಜ್ಯದ ಅಭಿವೃದ್ದಿಯ ಬಗ್ಗೆಯಾಗಲೀ ಮತ್ತು ರಾಜ್ಯ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆಯಾಗಲೀ ಯಾವುದೇ ರೀತಿಯ ದೂರದೃಷ್ಟಿ ಇಲ್ಲ ಮತ್ತು ಕಾರ್ಯಕ್ರಮವೂ ಇಲ್ಲ. ಇದರ ಜೊತೆಗೆ ಅದು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ದೇಶ ಎಂದೂ ಕಂಡರಿಯದಂತಹ ಪ್ರಜಾಪ್ರಭುತ್ವ ವಿರೋಧಿ ನೀತಿಗಳಿಂದ ವಿರೋಧಪಕ್ಷಗಳನ್ನೊಡೆದು 'ಅಪರೇಷನ್' 'ಕಮಲ'ದ ಹೆಸರಿನಲ್ಲಿ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅವಹೇಳನಕ್ಕೆ ಗುರಿಮಾಡಿದೆ, ಇನ್ನೊಂದು ಕಡೆ ತನ್ನ ಕೋಮುವಾದಿ ಅಜೆಂಡಾದಿಂದ ಆಕ್ರಮಣಕಾರಿಯಾಗಿ ಸಂವಿಧಾನದ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಮತೀಯ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಎಸಗುತ್ತಿದೆ. ರಾಜ್ಯದ ಕರಾವಳಿ ಪ್ರದೇಶದಲ್ಲಿಂದು ನಡೆಯುತ್ತಿರುವ ಘಟನಾವಳಿಗಳನ್ನು ಗಮನಿಸಿದರೆ ಇಡೀ ದೇಶ ತಲೆ ತಗ್ಗಿಸುವಂತಾಗಿದೆ. ಕಳೆದ ಫೆಬ್ರವರಿಯಲ್ಲಿ ಬಿಜೆಪಿ ಸರ್ಕಾರ ವಿಧಾನ ಸಭೆಯಲ್ಲಿ ಮಂಡಿಸಿದ ಬಜೆಟ್‌ನ್ನು ಗಮನಿಸಿದರೆ ರಾಜ್ಯದ ಇಂದಿನ ದುಸ್ಥಿತಿ ಅರ್ಥವಾಗುತ್ತದೆ. ರಾಜ್ಯದ ಆದಾಯ ಕಡಿಮೆ ಆಗಿದೆ. ಸಾಲ ಹೆಚ್ಚಾಗಿದೆ. ಕೃಷಿ ಉತ್ಪಾದನೆ ಕುಸಿತವಾಗಿದೆ. ಕೈಗಾರಿಕಾ ಉತ್ಪಾದನೆ ಕುಂಠಿತಗೊಂಡಿದೆ. ಐಟಿ-ಬಿಟಿ ಮತ್ತು ಗಾರ್ಮೆಂಟ್ ಉತ್ಪಾದನೆಗಳ ರಫ್ತಿನ ಪ್ರಮಾಣ ಗಣನೀಯವಾಗಿ ಕುಸಿದು ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ಆದಾಯ ಕಡಿಮೆ ಆಗಿದೆ. ಆರ್ಥಿಕ ಬಿಕ್ಕಟ್ಟಿನಿಂದಾಗಿ ಇಡೀ ರಾಜ್ಯದಲ್ಲಿ ಉದ್ಯೋಗಗಳು ವೇಗವಾಗಿ ಕಡಿತಗೊಳ್ಳುತ್ತಿದೆ. ಕೈಗಾರಿಕೆಗಳಲ್ಲಿ ಕೆಲಸದ ದಿನಗಳು ಕಡಿತಗೊಳಿಸಲಾಗುತ್ತಿದೆ. ಕೂಲಿ ಕಡಿತಗೊಳಿಸಲಾಗುತ್ತಿದೆ.ರಾಜ್ಯದ ಸಾಲ 71 ಸಾವಿರ ಕೋಟಿಗೆ ಮೀರಿದೆ. ವಿಶ್ವ ಬ್ಯಾಂಕ್ ಮತ್ತಿತರ ಹಣಕಾಸು ಸಂಸ್ಥೆಗಳಿಂದ ತಂದಿರುವ ಸಾಲಕ್ಕೆ ನಮ್ಮ ರಾಜ್ಯದ ಆದಾಯದಲ್ಲಿನ ಶೇಕಡಾ 14 ಭಾಗ ಬಡ್ಡಿಗೆ ಪಾವತಿಸಬೇಕಾಗಿದೆ. ಇಂತಹ ಸ್ಥಿತಿಯಲ್ಲಿ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ಸಿನ ಪಾತ್ರವೇನು? ಅದು ರಾಜ್ಯ ಮತ್ತು ರಾಜ್ಯದ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಯಾವರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದರೆ ಇಂದು ಇಡೀ ರಾಜ್ಯದ ಬಹುತೇಕ ಜನರು ಈ ರಾಜ್ಯದಲ್ಲೊಂದು ವಿರೋಧಪಕ್ಷ ಇದೆಯೇ ಎಂಬ ಗುಮಾನಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಕಳೆದ ಹತ್ತು ತಿಂಗಳಲ್ಲಿ 4 ಸಲ ವಿಧಾನಸಭೆಯ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷ ವಿರೋಧಪಕ್ಷವಾಗಿ ಸಂಪೂರ್ಣ ವಿಫಲವಾಗಿದೆ ಮತ್ತು ತನ್ನ ಅಸಮರ್ಥತೆಯನ್ನು ಪ್ರದರ್ಶಿಸಿದೆ. ವಿಧಾನಸಭೆಯ ಒಳಗಾಗಲೀ ಹೊರಗಾಗಲೀ ರಾಜ್ಯದ ಮತ್ತು ಜನತೆಯ ನಿರೀಕ್ಷೆಗಳನ್ನು ಮತ್ತು ಸಮಸ್ಯೆಗಳನ್ನು ಹೊರ ತೆಗೆಯಲಾಗಲಿಲ್ಲ. ಈ ಭ್ರಷ್ಟ ಕೆಟ್ಟ ಕೋಮುವಾದಿ ಸರ್ಕಾರದ ಜನವಿರೋಧಿ ಕರಾಳ ಮುಖವನ್ನು ರಾಜ್ಯದ ಜನತೆಯ ಮುಂದೆ ಇಡುವುದರಲ್ಲಿ ಕಾಂಗ್ರೆಸ್ ಪಕ್ಷ ಸಂಪೂರ್ಣ ವಿಫಲವಾಗಿದೆ.

ರಾಜ್ಯ ಸರ್ಕಾರ ದೌರ್ಜನ್ಯ

ಬಿಜೆಪಿ ಸರ್ಕಾರ ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಹಾವೇರಿಯಲ್ಲಿ ರೈತರ ಮೇಲೆ ನಡೆದ ಗೋಲಿಬಾರ್‌ನಿಂದ ಹಿಡಿದು ಇತ್ತೀಚೆಗೆ ಬಳ್ಳಾರಿಯಿಂದ ರೈತರ ಮೇಲೆ ಅಮಾನುಷ ಪೋಲೀಸರ ಹಲ್ಲೆ ಹೀಗೆ ಯಾವುದೇ ಘಟನೆಗಳಾಗಲೀ ಕಾಂಗ್ರೆಸ್ ಪ್ರದರ್ಶಿಸಿದ ನಿಲುವನ್ನು ನೋಡಿದರೆ ಅದು ಸಂಪೂರ್ಣವಾಗಿ ತನ್ನ ಹತಾಶೆ ಮತ್ತು ಅಸಹಾಯಕತೆಯನ್ನು ತೋರಿದೆ. ಶಾಸನಸಭೆಯಲ್ಲಿ ಪರಿಣಾಮಕಾರಿ ವಿರೋಧಪಕ್ಷವಾಗಿ ಅದು ಕೆಲಸ ಮಾಡಲು ಸಂಪೂರ್ಣ ವಿಫಲವಾಗಿದೆ. ಶಾಸನ ಸಭೆಯಲ್ಲಿರುವ ಆ ಪಕ್ಷದ ಮುಖಂಡರು ಮತ್ತು ಶಾಸಕರು ಸರ್ಕಾರದ ಜನವಿರೋಧಿ ಪ್ರತಿಗಾಮಿ ನೀತಿಗಳನ್ನು ವಿಧಾನಸಭೆಯಲ್ಲಿ ಎಷ್ಟು ಪರಿಣಾಮಕಾರಿಯಾಗಿಯೂ ಬಯಲಿಗೆಳೆಯಲು ಸಾಧ್ಯವಿತ್ತೋ ಆ ಪ್ರಮಾಣದಲ್ಲಿ ಒಂದಂಶವಾದರೂ ಮಾಡಿಲ್ಲ. ಬಿಜೆಪಿ ಪಕ್ಷ ಈ ಸರ್ಕಾರವನ್ನು ಒಂದು ಖಾಸಗಿ ಕಂಪನಿಯ ರೀತಿಯಲ್ಲಿ ನಡೆಸುತ್ತಿದೆ. ರಾಜ್ಯದ ಬೊಕ್ಕಸದ ಹಣವನ್ನು ಬೇಕಾಬಿಟ್ಟಿಯಾಗಿ ಮಠಮಾನ್ಯಗಳಿಗೆ ಹಂಚುತ್ತಿದೆ. ಸಾರ್ವಜನಿಕ ಹಣವನ್ನು ಪಕ್ಷದ ಹಣದ ರೀತಿಯಲ್ಲಿ ಹಂಚುತ್ತಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ 392 ಜನ ರೈತರು ಆತ್ಮಹತ್ಯೆಗಳನ್ನು ಮಾಡಿಕೊಂಡಿದ್ದಾರೆ. ಕೃಷಿ ಉತ್ಪನ್ನಗಳ ಬೆಲೆಗಳು ಕುಸಿದು ರೈತರು ಕಂಗಾಲಾಗುತ್ತಿದ್ದಾರೆ. ಅದರೆ ಈ ಯಾವುದೇ

ಪುಟ 14ಕ್ಕೆ

ಪಶ್ಚಿಮ ಬಂಗಾಳದಲ್ಲಿ ಛಿದ್ರಕಾರಿ ಬಿಭಜನಕಾರಿ ರಾಜಕೀಯ

ಲೋಕಸಭಾ ಚುನಾವಣಾ ಕಾವು ಏರುತ್ತಿದೆ. ಜೊತೆಗೆ ಪಶ್ಚಿಮ ಬಂಗಾಳದಲ್ಲಿ ಎಡರಂಗ ವಿರೋಧ ಪಕ್ಷಗಳ ಕೊಲೆಪಾತಕ ರಾಜಕೀಯ ಚಟುವಟಿಕೆಗಳೂ ಏರುತ್ತಾ ನಡೆದಿವೆ. ಇಲ್ಲೀಗ ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್‌ಗಳು ಮೈತ್ರಿಗೆ ಮುಂದಾಗಿರುವುದು ಎಲ್ಲರಿಗೂ ಗೊತ್ತೇ ಗೊತ್ತು. ಆದರೆ ತೃಣಮೂಲ ಕಾಂಗ್ರೆಸ್‌ನೊಂದಿಗೆ, ಚುನಾವಣಾ ರಾಜಕೀಯದಲ್ಲಿ ನಂಬಿಕೆ ಇಲ್ಲದ ಸ್ವಘೋಷಿತ ಮಾವೋವಾದಿಗಳು ಕೈಜೋಡಿಸಿ ಸಿಪಿಐ(ಎಂ) ಕಾರ್ಯಕರ್ತರನ್ನು ಕೊಲ್ಲುವುದು. ಹಲ್ಲೆ ದಾಳಿ ನಡೆಸುವುದು ಮುಂತಾದ ಚಟುವಟಿಕೆಗಳು ಈಗ ಇನ್ನಷ್ಟು ಹೆಚ್ಚಿವೆ.

ಮಾರ್ಚ್ 29, 2009 ರಂದು ಸಂಜೆ ಬಿಹಾರ, ಜಾರ್ಖಂಡ್ ಗಡಿ ಭಾಗವಾದ ಪುರುಲಿಯಾದಲ್ಲಿ ತೃಣಮೂಲ ಕಾಂಗ್ರೆಸ್ ಗೂಂಡಾಗಳು ಬಂದೂಕು, ಪಿಸ್ತೂಲ್, ಚಾಕು ಇತ್ಯಾದಿ ಆಯುಧಗಳೊಂದಿಗೆ ಸಜ್ಜಾಗಿ ಬಂದು ಸಿಪಿಐ(ಎಂ) ಕಾರ್ಯಕರ್ತ ಅರ್ಷಾದ್ ಮೇಲೆ ಮಾರಣಾಂತಿಕ ದಾಳಿ ನಡೆಸಿದ್ದಾರೆ. ಬಂಕುರಾದ ಜೈಪುರ್ ಎಂಬಲ್ಲಿ ತೃಣಮೂಲ ಗೂಂಡಾಗಳು ಸಿಪಿಐ(ಎಂ) ರ್‍ಯಾಲಿಯ ಮೇಲೆ ಗುಂಡುಹಾರಿಸಿದ್ದಾರೆ. ಗುಂಡು ಹಾರಿಸಿದ್ದು ಮಾತ್ರವಲ್ಲ, ಗುಂಡೇಟಿನಿಂದ ಗಾಯಗೊಂಡ ಸಿಪಿಐ(ಎಂ) ಕಾರ್ಯಕರ್ತ ಶೇಖ್ ಶಹಜಾನ್ ಅವರನ್ನು ಅಪಹರಿಸಿ ಮತ್ತಷ್ಟು ಮಾರಣಾಂತಿಕ ಹಲ್ಲೆ ನಡೆಸಿ ಬಿಸಾಡಿ ಹೋಗಿದ್ದಾರೆ. ಅವರೀಗ ಗಂಭೀರ ಸ್ಥಿತಿಯಲ್ಲಿದ್ದಾರೆ.

ಮಿಡ್ನಾಪುರ ಸಮೀಪದ ಲಾಲ್‌ಗರ್‌ನಲ್ಲಿ ಸ್ವಘೋಷಿತ ಮಾವೋವಾದಿಗಳು ಈ ಚುನಾವಣಾ ಅವಧಿಯಲ್ಲಿ ಆ ಪ್ರದೇಶದೊಳಕ್ಕೆ ಪೊಲೀಸರು ಬರಲು ಬಿಡುವುದಿಲ್ಲ ಎಂದು ಘೋಷಿಸಿದ್ದಾರೆ. ಈ ಘೋಷಣೆಗೆ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಬಿಜೆಪಿ ಎಲ್ಲರೂ ಬೆಂಬಲ ಘೋಷಿಸಿದ್ದಾರೆ. ಇವೆಲ್ಲಾ ಪಶ್ಚಿಮ ಬಂಗಾಳದಲ್ಲಿ ಎಡರಂಗ ವಿರೋಧಿಗಳು ನಡೆಸಿರುವ ಕಾರಾಸ್ತಾನದ ಸಣ್ಣ ಸಣ್ಣ ತುಣುಕುಗಳಷ್ಟೇ. ಪಟ್ಟಿ ಮಾಡುತ್ತಾ ಹೋದರೆ ಇದು ಬಲು ದೀರ್ಘಪಟ್ಟಿಯಾಗುತ್ತದೆ.

ವಿಛಿದ್ರಕಾರಿ ವಿನಾಶಕಾರಿ ಹಾದಿಯಲ್ಲಿ...


ಕುರುಡು ಎಡರಂಗ ವಿರೋಧ ಪಶ್ಚಿಮ ಬಂಗಾಳದ ವಿರೋಧ ಪಕ್ಷಗಳನ್ನು ಪೂರ್ಣವಾಗಿ ಹಾದಿ ತಪ್ಪಿಸಿದೆ. ಅವರೀಗ ಪಶ್ಚಿಮ ಬಂಗಾಳದ ಅಭಿವೃದ್ಧಿ, ಕೈಗಾರಿಕೀಕರಣ ಮಾತ್ರವಲ್ಲ ರಾಜ್ಯದ ಸಮಗ್ರತೆ ಐಕ್ಯತೆಗೆ ಭಂಗ ತರುವ ಹಾದಿಯಲ್ಲಿ ಹೆಜ್ಜೆ ಹಾಕಲೂ ಹೇಸುತ್ತಿಲ್ಲ.

ನಯಾಚಾರ್‌ನಲ್ಲು 'ಅಗೆತ'

ತೀವ್ರ ವಿವಾದದ ನಂತರ ನಂದಿಗ್ರಾಮದಲ್ಲಿನ ಉದ್ದೇಶಿತ ಪೆಟ್ರೋ ರಾಸಾಯನಿಕ ಕೈಗಾರಿಕಾ ಸಂಕೀರ್ಣವನ್ನು ರಾಜ್ಯಸರ್ಕಾರ ನಯಾಚಾರ್ ಎಂಬ ಜಾಗಕ್ಕೆ ಬದಲಾಯಿಸಿದ್ದು ಗೊತ್ತಿರುವ ವಿಚಾರವೇ. ಎರಡು ಡಜನ್ ಮೀರದಷ್ಟು ಸಂಖ್ಯೆಯ ಮೀನುಗಾರರ ಗುಡಿಸಲುಗಳು ಬಿಟ್ಟರೆ ಇದು ಒಂದು ವಿಶಾಲವಾದ ಜಾಗ - ಬೀಳು ಭೂಮಿ. ಇಲ್ಲಿ ಕೈಗಾರಿಕಾ ಸಂಕೀರ್ಣವನ್ನು ಮಾಡುವುದರಿಂದ ಯಾರಿಗೂ ಹೆಚ್ಚೇನೂ ತೊಂದರೆಯಾಗದು. ಯಾರಿಂದಲೂ ವಿರೋಧ ಬರಲಾರದು ಎಂಬುದು ಸರ್ಕಾರದ ವಿಶ್ವಾಸವಾಗಿತ್ತು. 2 ಡಜನ್ ಮೀನುಗಾರರ ಕುಟುಂಬಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವುದು ಅಸಾಧ್ಯ ಮಾತೇನೂ ಆಗಿರಲಿಲ್ಲ.

ಆದರೆ ನಯಾಚಾರ್‌ನಲ್ಲಿ ಇತ್ತೀಚೆಗೆ ದಿಡೀರನೆ ಹಲವು ಬದಲಾವಣೆಗಳು ಕಾಣಿಸಿಕೊಳ್ಳುತ್ತಿವೆ. ಗುಡಿಸಲುಗಳ ಸಂಖ್ಯೆ ದಿಡೀರನೆ ಬಾರಿ ಸಂಖ್ಯೆಯಲ್ಲಿ ಹೆಚ್ಚಾಗಿದೆ. ನಯಾಚಾರ್‌ನ ಜನಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ನಂದಿಗ್ರಾಮದಲ್ಲಿ ಕಂಡುಬಂದಂತೆ ನಯಾಚಾರ್‌ನಲ್ಲೂ ಹಲವು ಕಡೆಗಳಲ್ಲಿ ದೊಡ್ಡ ಅಗೆತಗಳು ಕಂಡುಬರುತ್ತಿವೆ.

ನಂದಿಗ್ರಾಮದಲ್ಲಿ ಪರಿಸ್ಥಿತಿಯನ್ನು ಗೋಲಿಬಾರ್ ಮಟ್ಟಕ್ಕೂ ಒಯ್ದು ಪರಿಣತ ಕೊಲೆಗಡುಕರ ತಂಡ ಈಗ ನಯಾಚಾರ್ ಪ್ರವೇಶಿಸಿದೆ ಎಂಬ ಖಚಿತ ಮಾಹಿತಿಯಿದೆ. ಕೈಗಾರಿಕಾ ಸಮುಚ್ಛಯಕ್ಕೆ ಫಲವತ್ತಾದ ಕೃಷಿಭೂಮಿಯೇ ಏಕೆ ಬೇಕು ಎಂಬ ಪ್ರಶ್ನೆ ಕೇಳಿ ನಂದಿಗ್ರಾಮದಲ್ಲಿ ಹಿಂಸಾಕಾಂಡ ನಡೆಸಲಾಯಿತು. ನಯಾಚಾರ್ ಜಾಗ ಕೃಷಿ ಭೂಮಿಯೂ ಅಲ್ಲ, ಅಂತಾ ಜನ ವಸತಿ ಪ್ರದೇಶವೂ ಅಲ್ಲ. ಆದರೂ ಈಗಾಗಲೇ ಅಲ್ಲಿ 'ಕೃಷಿ ಭೂಮಿ ಉಚ್ಛೇದ್ ಪ್ರತಿರೋಧ ಸಮಿತಿ' ರಚನೆಯಾಗಿದೆ!!!



ಜಸ್ವಂತ್ ಸಿಂಗ್ ರಿಂದ ವಿಚ್ಛಿದ್ರಕಾರಿಗಳೊಂದಿಗೆ ಸೇರಿ ನಾಮಪತ್ರ

ಡಾರ್ಜಿಲಿಂಗ್, ಪ್ರತ್ಯೇಕತಾವಾದದ ಬೆಂಕಿಗೆ ಬಿಜೆಪಿ ತುಪ್ಪ

ಪಶ್ಚಿಮ ಬಂಗಾಳದ ರಮಣೀಯ ಪ್ರಾಕೃತಿಕ ಸೌಂದರ್ಯದ ಡಾರ್ಜಿಲಿಂಗ್‌ನಲ್ಲಿ ಛಿದ್ರಕಾರಿ ವಿಭಜನಕಾರಿ ಶಕ್ತಿಗಳು ಮತ್ತೆ ತಲೆ ಎತ್ತಲು ಪ್ರಯತ್ನಿಸುತ್ತಿವೆ.

ಗೂರ್ಖಾ ಜನಾಂಗದ ಪ್ರಶ್ನೆಯನ್ನು ಮುಂದೆ ಮಾಡಿಕೊಂಡು ಪ್ರತ್ಯೇಕತೆ ಕೇಳುತ್ತಿರುವ ಪ್ರತ್ಯೇಕತಾವಾದಿ ಗೂರ್ಖಾ ಜನ ಮುಕ್ತಿ (ಜಿಜೆಎಂ) ಆ ಪ್ರದೇಶದಲ್ಲಿ ಎಲ್ಲ ಬಗೆಯ ಪ್ರಜಾಸತ್ತಾತ್ಮಕ ಪ್ರಕ್ರಿಯೆ ತಡೆ ಒಡ್ಡುತ್ತಿದೆ. ಯಾವುದೇ ರಾಜಕೀಯ ಪಕ್ಷವೂ ರಾಜಕೀಯ ಚಟುವಟಿಕೆ ನಡೆಸುವಂತಿಲ್ಲ. ಸಿಪಿಐ(ಎಂ) ಅಂತೂ ಏನೂ ಮಾಡಬಾರದು!! ಪ್ರಯತ್ನಿಸಿದರೆ ಧಾಳಿ, ಹಿಂಸೆಯೇ ಅವರ ಪ್ರತಿಕ್ರಿಯೆ.

ಇತ್ತೀಚಿಗೆ ಜಿಲ್ಲಾ ಚುನಾವಣಾಧಿಕಾರಿಗಳು ಕರೆದಿದ್ದ ಸರ್ವಪಕ್ಷಗಳ ಸಭೆಯನ್ನು ನಡೆಯಲು ಜಿಜೆಎಂ ಬಿಡಲಿಲ್ಲ. ಜಿಜೆಎಂ ನ ಮುಖ್ಯಸ್ಥ ಬಿಮಲ್ ಗುರುಂಗ್ ಡಾರ್ಜಿಲಿಂಗ್‌ನಲ್ಲಿ ಮಾರ್ಚ್ 27 ರಂದು ಅಲ್ಪಸಂಖ್ಯಾತರನ್ನು ಬೆದರಿಸುವ ಮಾತನಾಡಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಸಿ.ಡಿ.ಯೊಂದಿಗೆ ಚುನಾವಣಾ ಆಯುಕ್ತರನ್ನು ಕಂಡ ಸಿಪಿಐ(ಎಂ) ನಿಯೋಗವು ಡಾರ್ಜಿಲಿಂಗ್ ಪರಿಸ್ಥಿತಿಯನ್ನು ವಿವರಿಸಿ ಮುಕ್ತ ಮತ್ತು ಪ್ರಜಾಸತ್ತಾತ್ಮಕ ವಾತಾವರಣಕ್ಕೆ ಪೂರಕ ಕ್ರಮ ಕೈಗೊಳ್ಳಲು ಕೋರಿದೆ.

ಪ್ರಜಾಸತ್ತಾತ್ಮಕ ರಾಜಕೀಯ ಪ್ರಕ್ರಿಯೆಗೆ ಅಡ್ಡಿಗೆ ಹಾಗು ಪ್ರತ್ಯೇಕತಾವಾದಕ್ಕೆ ಸಿಪಿಐ(ಎಂ) ಪ್ರತಿಕ್ರಿಯೆ ಈ ರೀತಿಯಿದೆ. ಆದರೆ ಬಿಜೆಪಿ ಏನು ಮಾಡಿತು ನೋಡಿ. ಬಿಜೆಪಿಯು ಜಿಜೆಎಂನೊಂದಿಗೆ ಏನೋ ಅನೈತಿಕ ವ್ಯವಹಾರವನ್ನು ಕುದುರಿಸಿದಂತೆ ಕಾಣುತ್ತಿದೆ. ಮೊದಲಿಗೆ ಈ ಕ್ಷೇತ್ರದಿಂದ ಬಿಜೆಪಿಯು ದಾವಾಸೇರ್ಪಾ ಎಂಬ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಯೋಜಿಸಿತ್ತು. ಆದರೆ ಜಿ.ಜೆ.ಎಂ ಅದಕ್ಕೆ ಅವಕಾಶ ನೀಡಲಿಲ್ಲ. ಈ ನಡುವೆ ಏನೇನು ನಡೆಯಿತೋ!!!

ಈಗ ಬಿಜೆಪಿಯ ಹಿರಿಯ ನಾಯಕ ಜಸ್ವಂತ್‌ಸಿಂಗ್ ಡಾರ್ಜಿಲಿಂಗ್‌ನ ಬಿಜೆಪಿ ಅಭ್ಯರ್ಥಿಯಂತೆ!! ಮತ್ತು ಜಿ.ಜೆ.ಎಂ ಅವರನ್ನು ಬೆಂಬಲಿಸುವುದಂತೆ!!!

ಗೂರ್ಖಾಲ್ಯಾಂಡ್ ಮಾತ್ರವಲ್ಲ 'ವಿಶಾಲ ಕೂಚ್‌ಬಿಹಾರ್' ಮತ್ತು ಪಶ್ಚಿಮ ಬಂಗಾಳದ ಪಶ್ಚಿಮ ಭಾಗವನ್ನೊಳಗೊಂಡ 'ಪ್ರತ್ಯೇಕ ಪಶ್ಚಿಮ ಬಂಗಾಳ' ಇತ್ಯಾದಿಯಾಗಿ ಪಶ್ಚಿಮ ಬಂಗಾಳ ರಾಜ್ಯದ ಐಕ್ಯತೆ ಮುರಿಯುವ ಘೋಷಣೆ ಕೇಳಿಬರುತ್ತಿದ್ದು ಕುರುಡು ಎಡರಂಗ ವಿರೋಧವು ವಿರೋಧ ಪಕ್ಷಗಳು ಈ ಎಲ್ಲ ಶಕ್ತಿಗಳಿಗೆ ಕುಮ್ಮಕ್ಕು ನೀಡುವಂತಹ ಮಟ್ಟಕ್ಕೆ ಅವನ್ನು ಇಳಿಸಿವೆ.

...ಹೊಣೆಗೇಡಿ ಕಾಂಗ್ರೆಸ್

ಪುಟ 13 ರಿಂದ

ವಿಫಲತೆಯನ್ನು ವಿರೋಧಪಕ್ಷವಾಗಿ ರಾಜ್ಯದ ಜನತೆಯ ಮುಂದೆ ಇಟ್ಟು ಜನತೆಯನ್ನು ಎಚ್ಚರಿಸಿ ಬಿಜೆಪಿ ಸರ್ಕಾರದ ಕರಾಳ ಮುಖವನ್ನು ಜನರ ಮುಂದೆ ಇಡಲು ಕಾಂಗ್ರೆಸಿಗೆ ಸಾಧ್ಯವಾಗಲಿಲ್ಲ. ಇಡೀ ಕರಾವಳಿ ಪ್ರದೇಶದಲ್ಲಿ ಸರ್ಕಾರವೇ ಇಲ್ಲ. ಬದಲಿಗೆ ಅಲ್ಲಿ ಸಂಘಪರಿವಾರದ ಆಡಳಿತ ಮಾತ್ರ ಇದೆ ಎಂಬ ಭಾವನೆ ಇಡೀ ರಾಜ್ಯದ ಜನತೆಯಲ್ಲಿ ಮೂಡಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಚರ್ಚ್‌ಗಳ ಮೇಲಿನ ದಾಳಿಯಿಂದ ಪ್ರಾರಂಭವಾಗಿ ಇತ್ತೀಚಿನವರೆಗೆ ನಡೆದ ಘಟನೆಗಳು ಅಲ್ಲಿ ರಾಜ್ಯ ಸರ್ಕಾರ ಇಲ್ಲ, ಅಲ್ಲಿ ಸಂಘ ಪರಿವಾರದ ಆಡಳಿತ ಇದೆ ಎಂದು ಸಾಬೀತು ಮಾಡಿವೆ. ಕರಾವಳಿ ಪ್ರದೇಶದಲ್ಲಿ ಬಿಜೆಪಿ ಬಿಟ್ಟರೆ ಬಲಿಷ್ಠ ರಾಜಕೀಯ ಪಕ್ಷ ಕಾಂಗ್ರೆಸ್. ಆದರೆ ಕರಾವಳಿ ಪ್ರದೇಶದಲ್ಲಿನ ಯಾವುದೇ ಘಟನೆಗಳ ಬಗ್ಗೆ ಜಾತ್ಯಾತೀತ ಪಕ್ಷ ಎಂದು ಹೇಳಿಕೊಳ್ಳುವ ಕಾಂಗ್ರೆಸ್‌ಪಕ್ಷ ಒಂದೇ ಒಂದು ಘಟನೆಯ ಬಗ್ಗೆ ಕೂಡ ಪರಿಣಾಮಕಾರಿಯಾಗಿ ಜನರನ್ನು ಅಣಿನೆರೆಸಿ ಹೋರಾಟವನ್ನು ರೂಪಿಸಲಿಲ್ಲ ಮತ್ತು ಪ್ರತಿಭಟನೆ ಯನ್ನು ಮಾಡಲಿಲ್ಲ. ಬರೀ ಪತ್ರಿಕಾ ಹೇಳಿಕೆಗಳಿಗೆ ಸೀಮಿತವಾಯ್ತು.

ಕರ್ನಾಟಕ ರಾಜ್ಯ ಇಂದು ಅತ್ಯಂತ ಅಸಮರ್ಥ ಭ್ರಷ್ಟ ಮತ್ತು ಬೇಜವಾಬ್ದಾರಿ ಮುಖ್ಯಮಂತ್ರಿಯನ್ನು ಹೊಂದಿದೆ. ಕೆಲವೊಂದು ಸಂದರ್ಭಗಳಲ್ಲಿ ತಾನೊಬ್ಬ ಮುಖ್ಯಮಂತ್ರಿ ಎಂಬ ಕನಿಷ್ಠ ಪರಿಜ್ಞಾನವೂ ಇಲ್ಲದ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಆದರೆ ಅವರನ್ನು ಹದ್ದುಬಸ್ತಿನಲ್ಲಿಡುವ ಒಂದೇ ಒಂದು ಕೆಲಸವನ್ನೂ ಕಾಂಗ್ರೆಸ್ ಮಾಡುತ್ತಿಲ್ಲ. ಬದಲಿಗೆ ಅವರಷ್ಟೇ ಬೇಜಬಾಬ್ದಾರಿತನವನ್ನು ಇವರು ಪ್ರದರ್ಶಿಸಿದ್ದಾರೆ. ಕೋಮುವಾದಿ ರಾಜಕೀಯ ಪಕ್ಷ ಒಂದು ಅಧಿಕಾರಕ್ಕೆ ಬಂದರೆ ಏನೆಲ್ಲಾ ಅನಾಹುತಗಳು ನಡೆಯುತ್ತವೆ ಎಂದು ರಾಜ್ಯದ ಅನುಭವಕ್ಕೆ ಬರುತ್ತಿದೆ. ಇಡೀ ಶಿಕ್ಷಣವನ್ನು ಕೋಮುವಾದಿಕರಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಅದರ ಜೊತೆಗೆ ಆಡಳಿತ ಯಂತ್ರಾಂಗವನ್ನು, ಕಡೆಗೆ ಕೃಷಿಯನ್ನು ಕೋಮುವಾದಿಕರಣ ಗೊಳಿಸಲಾಗುತ್ತಿದೆ. ಇಡೀ ರಾಜ್ಯದಲ್ಲಿ ಅರಾಜಕತೆಯನ್ನು ಸೃಷ್ಟಿಸಲಾಗುತ್ತಿದೆ. ಆದರೆ ಕಾಂಗ್ರೆಸ್ ಪಕ್ಷ ಯಾವುದರ ಬಗ್ಗೆಯೂ ಆಲೋಚಿಸುತ್ತಿಲ್ಲ ಮತ್ತು ಪ್ರತಿಭಟಿಸುತ್ತಿಲ್ಲ.

ವಿಧಾನಸಭಾ ಉಪ ಚುನಾವಣೆ ಶೂನ್ಯ ಸಂಪಾದನೆ

ಈ ಎಲ್ಲದರ ಪರಿಣಾಮ ಕಳೆದ 3 ತಿಂಗಳ ಹಿಂದೆ ನಡೆದ 8 ವಿಧಾನಸಭಾ ಉಪಚುನಾವಣೆಗಳಲ್ಲಿ ಒಂದನ್ನು ಗೆಲ್ಲಲಾಗಲಿಲ್ಲ. ಈಗ ನಡೆಯುತ್ತಿರುವ ಲೋಕಸಭಾ ಚುನಾವಣೆಗಳಲ್ಲಂತೂ ಆತ್ಮವಿಶ್ವಾಸವನ್ನೇ ಕಳೆದುಕೊಂಡಿದೆ. ಇಂದು ರಾಜ್ಯ ಒಂದು ಕಡೆಯಲ್ಲಿ ಅತ್ಯಂತ ಭ್ರಷ್ಟ, ಜನವಿರೋಧಿ, ಅನಾಗರೀಕ ಸರ್ಕಾರವನ್ನು ಹೊಂದಿದ್ದರೆ ಇನ್ನೊಂದು ಕಡೆ ಅಸಮರ್ಥ ನಿಷ್ಕ್ರಿಯ ವಿರೋಧಪಕ್ಷ ಒಂದನ್ನು ಹೊಂದಿದೆ. ಇದು ರಾಜ್ಯದ ದುರಂತವಾಗಿದೆ. ಹಾಗಾಗಿ ಬರುವ ಲೋಕಸಭಾ ಚುನಾವಣೆಯಲ್ಲಿ ಈ ಎರಡು ಪಕ್ಷಗಳನ್ನು ರಾಜ್ಯದ ಜನತೆ ತಿರಸ್ಕರಿಸ ಬೇಕು ಮತ್ತು ಬಲಿಷ್ಠ ಮೂರನೇಯ ಪರ್ಯಾಯ ಶಕ್ತಿಯನ್ನು ಬೆಳೆಸಬೇಕಾದ ಅನಿವಾರ್ಯ ಸ್ಥಿತಿ ಉಂಟಾಗಿದೆ. ○

'ದೇಶದ ಐಕ್ಯತೆ ಉಳಿಸುವ ಹೋರಾಟ'

ಬೀದರ್‌ನಲ್ಲಿ ತೃತೀಯರಂಗದ ರ್‍ಯಾಲಿ

ಹಸಿವೆಂಬ ಹೆಬ್ಬಾವು
ಬಸಿರ ಬಂದು ಹಿಡಿದಡೆ
ವಿಷವೇರಿತಯ್ಯ ಆಪಾದ ಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ಆತನೇ ಗಾರುಡಿಗ ಕಾಣಾ ರಾಮನಾಥ.

ದಿನಾಂಕ 25 ಮಾರ್ಚ್ 2009ರಂದು ಬೀದರ ನಗರಕ್ಕೆ ಬೀದರ ಪಾರ್ಲಿಮೆಂಟ್ ಕ್ಷೇತ್ರ ವ್ಯಾಪ್ತಿಯ ಸುಮಾರು ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಜನಸ್ತೋಮ ಹರಿದು ಬಂದಿತ್ತು. ಶೇ.95 ರಷ್ಟು ಜನರು ತಮ್ಮ ಹಸಿವಿಗನ್ನವನಿಕ್ಕುವ ಗಾರುಡಿಗನನ್ನು ಹುಡುಕಾಡಿ ಬಂದಿದ್ದರು.ಗ್ರಾಮಗಳಿಂದ ಬಂದ ರೈತಾಪಿ ಕೂಲಿಕಾರರ ಕಣ್ಣಲ್ಲಿ ಅಕ್ಷರಶಃ ತೇಜಸ್ಸು ಇರಲಿಲ್ಲ. ಅವರು ಕಳೆದ ಆರು ವರ್ಷಗಳಿಂದ ಒಂದು ಬಿಪಿಎಲ್ ಕಾರ್ಡ್ ಇಲ್ಲದೆ ಪರದಾಡಿದ್ದಾರೆ. ಪಂಪೆಸೆಟ್‌ಗೂ ಗ್ರಾಮೀಣ ಜನವಸತಿಗೂ ಉಚಿತ ಕರೆಂಟ್ ಕೊಡುತ್ತೇವೆಂದು ಹಗಲು ಹೊತ್ತೇ ಕತ್ತಲೆ ತಂದಿಟ್ಟು, ಇದ್ದ ಕರೆಂಟೂ ಕಟ್ ಮಾಡಿದ ಬಿಜೆಪಿಯ ದಗಲ್ಬಾಜಿ ದಂಧೆಗೆ ಬೇಸತ್ತಿದ್ದಾರೆ. ಸಿಪಿಐ(ಎಂ) ಮತ್ತು ಎಡಪಕ್ಷಗಳ ತೀವ್ರ ಒತ್ತಡದಿಂದ ಜಾರಿಗೆ ಬಂದ ಉದ್ಯೋಗ ಖಾತ್ರಿ ಕಾಯ್ದೆಯನ್ನು ನಿಷ್ಕ್ರಿಯಗೊಳಿಸುವ ಹುನ್ನಾರಿಗೆ ಬಡ ಜನ ಹೈರಾಣಾಗಿದ್ದಾರೆ. ಕಿತ್ತು ತಿನ್ನುವ ಬಡತನ ನಿರುದ್ಯೋಗ, ನೆಲಕಚ್ಚುವ ಒಕ್ಕಲತನ, ಉಲ್ಬಣಗೊಳ್ಳುತ್ತಿರುವ ಸಂಕಟಗಳು ಸಾಮಾನ್ಯ ಜನರನ್ನು ಕಂಗಾಲುಗೊಳಿಸಿವೆ. ಭೂಮಾಲಿಕ ಬಂಡವಾಳಶಾಹಿಗಳ ಹಿತ ರಕ್ಷಣೆಗೆ ಸೊಂಟ ಕಟ್ಟಿ ನಿಂತ ಯುಪಿಎ ಸರಕಾರದಿಂದಲೂ ನಿರಾಶರಾಗಿದ್ದಾರೆ. ದಿನ ಬೆಳಗಾದರೆ ಅಭಿವೃದ್ಧಿ ಮಂತ್ರ ಪಠಿಸುವ ಬಿಜೆಪಿ ಸರಕಾರವು ವಾಸ್ತವದಲ್ಲಿ ಮಂದಿರ ಮಠಗಳ ಅಭಿವೃದ್ಧಿ ಮಾತ್ರ ಕೈಗೊಂಡು ಮನುಷ್ಯ- ಮನುಷ್ಯರ ನಡುವೆ ಕೋಮುದಂಗೆ ಹಬ್ಬಿಸಿ ವಿಷ ಸಂಸ್ಕೃತಿ ಬೆಳೆಸುತ್ತಿದೆ. ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಗಳ ಮೇಲೆ ರಾಜಾರೋಷವಾಗಿ ತನ್ನ ಸಂಘ ಗ್ಯಾಂಗಿನ ಮೂಲಕ ಧಾಳಿ ನಡೆಸಿ ಸಮರ್ಥಸಿ ಕೊಳ್ಳುತ್ತಿದೆ. ಇದರಿಂದ ದುಡಿಯುವ ಜನತೆಯು ಹತಾಶರಾಗಿದ್ದಾರೆ.

ಅಂತೆಯೇ ಬೀದರ್ ಜಿಲ್ಲೆಯಿಂದ ರಾಜ್ಯದ ಪ್ರಚಾರ ಮೊದಲುಗೊಳಿಸಲು ಜೆಡಿ(ಎಸ್) ನ ಮಾಜಿ ಪ್ರಧಾನಿ ದೇವೇಗೌಡ, ಮಾಜಿ ಮುಖ್ಯಮಂತ್ರಿ ಕುಮಾರ ಸ್ವಾಮಿ, ಬಂಡೆಪ್ಪ ಕಾಶೆಂಪುರ್ ವೇದಿಕೆಗೆ ಆಗಮಿಸಿದ್ದರು. ಸಿಪಿಐ(ಎಮ್) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ.ನಿತ್ಯಾನಂದ ಸ್ವಾಮಿ, ಕಾ.ನೀಲಾ.ಕೆ ಸಿಪಿಐ ನ ಕಾ.ಬಾಬು ಹೊನ್ನ ಅವರೂ ವೇದಿಕೆಯಲ್ಲಿದ್ದರು. ಜೆಡಿ(ಎಸ್)ನ ಇತರ ಮುಖಂಡರು ಶಾಸಕರಾದ ಸುಭಾಶ ಗುತ್ತೇದಾರ, ಮಲ್ಲಿಕಾರ್ಜುನ ಖೂಬಾ ಅವರೂ ಪಾಲ್ಗೊಂಡಿದ್ದರು.

ಬೃಹತ್ ಸಭೆಯನ್ನುದ್ದೇಶಿಸಿ ಕಾ.ನೀಲಾ ಮತ್ತು ಕಾ.ನಿತ್ಯಾನಂದ ಸ್ವಾಮಿಯವರು ಮಾತನಾಡುತ್ತಾ, 'ಸಿಪಿಐ(ಎಮ್) ಪಕ್ಷವು ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಕರ್ನಾಟಕದ ಜನತೆ ಸೋಲಿಸಬೇಕೆಂದು ವಿನಂತಿಸುತ್ತದೆ. ಜಗತ್ತಿನ ಅಭಿವೃದ್ಧಿಶೀಲ ದೇಶಗಳನ್ನು ನುಂಗಿ ನೊಣೆಯಲು ಷಡ್ಯಂತ್ರ ಮಾಡುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಯ ಜೊತೆಗೆ ಅಣು ಒಪ್ಪಂದ ಮಾಡಿಕೊಂಡು ಯುಪಿಎ ಸರಕಾರವು ಭಾರತದ ಸಾರ್ವಭೌಮತೆಗೆ ಧಕ್ಕೆ ತಂದಿದೆ. ಹೈಡ್ ಆ್ಯಕ್ಟ 'ನಲ್ಲಿ ಭಾರತದ ಸ್ವಾತಂತ್ರ್ಯ ಹರಣದ ಎಲ್ಲ ಶರತ್ತುಗಳಿವೆ. ಮನಮೋಹನ್ ಸಿಂಗ್ ದೇಶವನ್ನು ಅಪಾಯದ ಅಂಚಿಗೆ ತಳ್ಳಿದ್ದಾರೆ. ಭಾರತದ ಜನತೆ ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಈಗಾಗಲೇ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಂಡವಾಳಶಾಹಿ ಪರ ಆರ್ಥಿಕ ನೀತಿಗಳು ಮಾರಕವಾಗಿವೆ.

ಇನ್ನೊಂದು ಕಡೆ ಬಿಜೆಪಿಯು ತನ್ನ ಹಿತಾಸಕ್ತಿಯ ಹಿಂದುತ್ವದ ಅಜೆಂಡಾ ಜಾರಿ ಮಾಡಲು ಮುಂದಾಗಿದೆ. ರಾಮ ಮಂದಿರ ನಿರ್ಮಾಣದ ಅಜೆಂಡಾ ಬಳಸಿ ಜನರನ್ನು ಉದ್ರೇಕಿಸಲು ಸಜ್ಜಾಗಿದೆ. ಅಸಂಖ್ಯಾತ ಮುಗ್ಧ ಹಿಂದೂಗಳನ್ನೂ ದಿಕ್ಕು ತಪ್ಪಿಸಿ ಮೋಸ ಮಾಡಲು ಹೊರಟಿದೆ. ಅಲ್ಪಸಂಖ್ಯಾತರ ಮೇಲೆ ಧಾಳಿ ಮಾಡಿ ಅವರನ್ನು ಭಯ ಮತ್ತು ಆತಂಕದ ಅಗ್ನಿ ಕುಂಡಕ್ಕೆ ತಳ್ಳಿದೆ.

ಬೀದರ ಜಿಲ್ಲೆಯು 12ನೇ ಶತಮಾನದ ಕಾಯಕ ಚಳುವಳಿಯ ಮಹತ್ವದ ನಾಡಾಗಿದೆ. ವೈದಿಕ ವ್ಯವಸ್ಥೆಯ ವಿರುದ್ಧ ರಾಜಿರಹಿತ ಹೋರಾಟ ನಡೆಸಿದ ನೆಲವಿದು. ಶರಣರು-ವಚನಕಾರರು ಪುರಾಣವೆಂಬ ಪುಂಡರ ಗೋಷ್ಠಿಯನ್ನು ಧಿಕ್ಕರಿಸಿ ಶ್ರಮ ಸಂಸತಿಯನ್ನು ಕಟ್ಟಿಬೆಳೆಸಿದವರು. ಸಮತೆಯ ನಾಡ ನಿರ್ಮಾಣಕ್ಕಾಗಿ ಪ್ರಾಣತ್ಯಾಗ ಮಾಡಿದರು. ಇಂಥ ಮಾನವೀಯ ಮತ್ತು ಕ್ರಾಂತಿಕಾರಕ ಪರಂಪರೆಯ ಹಿನ್ನೆಲೆ ಹೊಂದಿದ ಲಿಂಗವಂತ ಜನರು ಅದು ಹೇಗೆ ಬಿಜೆಪಿ ಸಿದ್ಧಾಂತ ಒಪ್ಪಲು ಸಾಧ್ಯ. ಬಿಜೆಪಿಯ ಸಿದ್ಧಾಂತವು ವೈದಿಕ-ಸನಾತನ ನಂಬಿಕೆಯುಳ್ಳದ್ದು. ಅಂದರೆ ಬಸವಣ್ಣ-ಅಲ್ಲಮ-ಚನ್ನಯ್ಯನ ವಿರುದ್ಧ ಸಿದ್ಧಾಂತ ಹೊಂದಿದೆ. ಶೂದ್ರ-ದಲಿತ- ಮಹಿಳೆಯರ ವಿರೋಧಿಯಾಗಿದೆ ಸಂಘ ಪರಿವಾರದ ಸಿದ್ಧಾಂತ. ಈ ಚುನಾವಣೆಯೊಂದು ಸೈದ್ಧಾಂತಿಕ ಸಂಘರ್ಷದ ಚುನಾವಣೆಯಾಗಲಿ. ಹಣೆಗೆ ವಿಭೂತಿ ಹಚ್ಚಿಕೊಂಡು ಮಂಗಳೂರಿನಲ್ಲಿ ಅಲ್ಪಸಂಖ್ಯಾತರ ಮಹಿಳೆಯರ ಮೇಲೆ ಧಾಳಿ ಮಾಡಿಸುವ ಯಡಿಯೂರಪ್ಪ ಲಿಂಗವಂತ ಸಿದ್ಧಾಂತದ ವಿರೋಧಿಯಾಗಿದ್ದಾರೆ. ಲಿಂಗಾಯತರ ಓಟು ಕಸಿಯಲು ಲಾಂಛನದ ಬಳಕೆಗೆ ಮುಂದಾಗಿರುವ ಬಿಜೆಪಿಯು ರಾಜ್ಯವನ್ನು ಕೋಮು ದಂಗೆಯ ಕಣವಾಗಿಸುತ್ತದೆ. ಈ ಚುನಾವಣೆಯಲ್ಲಿ ಮತದಾರ ನಾಗರೀಕರು ನೈಜ ದೇಶಪ್ರೇಮದಿಂದ ಮತ ಚಲಾಯಿಸಬೇಕು. ಸೋಲಿಸಿ ಬಿಜೆಪಿ ಮತ್ತು ಕಾಂಗ್ರೆಸ್‌ಗೆ. ಮೂರನೇ ಪರ್ಯಾಯವನ್ನು ಬಲಪಡಿಸಿ ಜೆಡಿ(ಎಸ್) ಗೆಲ್ಲಿಸಿ. ಈಗಲಾದರೂ ಜಾತ್ಯಾತೀತತೆಯ ನಿಜವಾದ ಅರ್ಥ ಅರಿತು ಚುನಾವಣೆ ಎದುರಿಸಬೇಕು. ನಿಜ ಧರ್ಮ ನಿರಪೇಕ್ಷ ಕರ್ನಾಟಕ ಕಟ್ಟಲು ಪಣತೊಡಬೇಕು. ಜನತೆಯ ಬದುಕು ಸಂರಕ್ಷಿಸಿ ಕಟ್ಟಿಕೊಡುವ. ಶಾಂತಿ- ಸೌಹಾರ್ದತೆ ಉಳಿಸಿ-ಬೆಳೆಸುವ ಅಜೆಂಡಾಗಳೇ ಈ ಚುನಾವಣೆಯ ಪ್ರಮುಖಾಂಶ ಗಳಾಗಬೇಕು...ಎಂದು ಕರೆ ಕೊಟ್ಟರು. ಸಭೆಯನ್ನುದ್ದೇಶಿಸಿ ಮಾತನಾಡಿದ ಜೆಡಿ(ಎಸ್) ರಾಷ್ಟ್ರಾಧ್ಯಕ್ಷರಾದ ದೇವೇಗೌಡರು, 'ದೇಶದ ಐಕ್ಯತೆ ಉಳಿಸಲು ಇಂದು ಸಿಪಿಐ(ಎಂ) ಮೂರನೇ ಪರ್ಯಾಯ ಬಲಪಡಿಸಲು ಮುಂಚೂಣಿ ನೇತೃತ್ವ ವಹಿಸಿದೆ. ಕಾಂಗ್ರೆಸ್ ಈ ದೇಶದ ಹಾಳು ಮಾಡಿದೆ. ಬಿಜೆಪಿ ಕೋಮು ರಾಜಕೀಯ ಮಾಡುತ್ತಿದೆ. ಕುಮಾರಸ್ವಾಮಿ ಮುಖ್ಯಮಂತ್ರಿಯಿದ್ದಾಗ ಮಾಡಿದ ಯೋಜನೆಗಳು ತನ್ನವೆಂದು ಸಾರುತ್ತಿರುವ ಯಡಿಯೂರಪ್ಪ ಅವರಿಗೆ ಯಾವುದೇ ಸ್ವಂತಿಕೆ ಇಲ್ಲ. ಜೆಡಿ(ಎಸ್) ಗೆಲ್ಲಿಸಿ ನಾವು ಕೋಮುವಾದ ಹಿಮ್ಮೆಟ್ಟೋಣ' ಎಂದು ಹೇಳಿದರು. ■

ದಕ್ಷಿಣ ಕನ್ನಡ :

ಪುಟ 12 ರಿಂದ

ಮರೀಚಿಕೆಯಾದರೂ ಈ ಒತ್ತಾಸೆಗೆ ಅದು ತಡೆಯಾಗುತ್ತಿಲ್ಲ. ದಲಿತ ಸಮುದಾಯಗಳೂ ಇತ್ತೀಚೆಗೆ ಇಂತಹ ಪ್ರವೃತ್ತಿಯನ್ನು ತೋರುತ್ತಿವೆ. ಕಳೆದೊಂದು ದಶಕದಲ್ಲಿ ಮಂಗಳೂರಿನ ಶಾಲಾ ಕಾಲೇಜುಗಳಲ್ಲಿ ಗಮನಿಸಲೇಬೇಕಾದ ಅಂಶವೆಂದರೆ ಮುಸ್ಲಿಂ ಹೆಣ್ಣು ಮಕ್ಕಳು ಪಡೆಯುತ್ತಿರುವ ಶಿಕ್ಷಣ. ನೂರಾರು ಸಂಖ್ಯೆಯಲ್ಲಿ ಈ ವಿಭಾಗದ ಹೆಣ್ಣು ಮಕ್ಕಳು ಪದವಿ ಅಭ್ಯಸಿಸುತ್ತಿದ್ದಾರೆ. ಹತ್ತು ಹದಿನೈದು ವರ್ಷಗಳ ಹಿಂದೆ ಈ ಸಂಖ್ಯೆ ಬೆರಳೆಣಿಕೆಯಷ್ಟಿತ್ತು. ಇಂದು ಪೂರ್ಣ ಬದಲಾಗಿ ಉನ್ನತ ತಾಂತ್ರಿಕ, ವೈದ್ಯಕೀಯ ಹಾಗೂ ವೃತ್ತಿಪರ ಆಧುನಿಕ ಕೋರ್ಸುಗಳನ್ನು ಅಭ್ಯಸುಸುತ್ತಿರುವುದು ಪ್ರಜಾಸತ್ತಾತ್ಮಕ ಪ್ರಗತಿಪರ ಶಕ್ತಿಗಳು ಗಮನಿಸಬೇಕಾದ ಸಂಗತಿ. ಈ ಸಮುದಾಯದ ಮಧ್ಯ ಮೂಲಭೂತ ವಾದಿಗಳು ಧಾರ್ಮಿಕ ಶಿಕ್ಷಣಕ್ಕೆ ಮಾತ್ರ ಸೀಮಿತವಾಗಿ ಪ್ರಚಾರ ನಡೆಸುತ್ತಿದ್ದರೂ ಆಧುನಿಕತೆಗೆ ಜನ ಸ್ಪಂದಿಸುತ್ತಿದ್ದಾರೆ. ಹಿಂದೂ ಮೂಲಭೂತ ವಾದಿ ಉಗ್ರಗಾಮಿ ಸಂಘಟನೆಗಳು ಮತ್ತು ಅದೇ ರೀತಿ ಮುಸ್ಲಿಂ ಮೂಲಭೂತವಾದಿ ಸಂಘಗಳು ಡ್ರೆಸ್‌ಕೋಡ್ ಆಚಾರವಿಚಾರಕ್ಕೆ ಸಂಬಂಧಿಸಿ "ಫತ್ವಾ" ಹೊರಡಿಸಿ ಹಲ್ಲೆ ನಡೆಸುತ್ತಿದ್ದರೂ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳು ಎರಡೂ ಸಮುದಾಯದ ಮಧ್ಯೆ ಆಧುನಿಕ ಫ್ಯಾಶನ್‌ಗಳತ್ತ ಮಾರುಹೋಗುತ್ತಿದ್ದಾರೆ.

ದಲಿತರ ಸಾಮಾಜಿಕ ಆರ್ಥಿಕ ಸ್ಥಿತಿಗತಿ:

ದ.ಕ.ಜಿಲ್ಲೆಯ ಜನಸಂಖ್ಯೆಯಲ್ಲಿ ಸರಿಸುಮಾರು ಶೇ.18 ದಷ್ಟು ದಲಿತ ಸಮುದಾಯದ ಜನಸಂಖ್ಯೆ ಇದೆ. ಸ್ವಾತಂತ್ರ್ಯ ನಂತರದ ಈ 60 ವರ್ಷಗಳ ದೀರ್ಘಕಾಲ ಘಟ್ಟದಲ್ಲಿ ಈ ಸಮುದಾಯದ ಸಾಮಾಜಿಕ ಆರ್ಥಿಕ ಪರಿಸ್ಥಿತಿ ತೀರಾ ಕೆಳಮಟ್ಟದಲ್ಲಿ ಇದೆ. ಅಸ್ಪೃಶ್ಯತಾ ಆಚರಣೆಯ ಧಾರ್ಮಿಕ ಸ್ವರೂಪದ ಭಾಗವಾಗಿಯೇ ಇದೆ. ದಲಿತ ಸಮುದಾಯದಲ್ಲಿ ಶೇ.90. ಜನ ಕೃಷಿ ಕೂಲಿ ಕಾರ್ಮಿಕರಾಗಿ ಬದುಕು ತ್ತಿದ್ದಾರೆ. ಸ್ವಂತ ಮನೆಯಿಲ್ಲದೆ ಇರುವವರೂ ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಭೂ ಸುಧಾರಣೆಯಿಂದ ಭೂ ಒಡೆತನದ ಹಕ್ಕು ಪಡೆದುಕೊಂಡ ದಲಿತ ಕುಟುಂಬಗಳು ಕೆಲವೇ ಕೆಲವು ಸಾವಿರ ಮಾತ್ರ. ಒಂದು ಎಕರೆಯಿಂದ ಐದು ಎಕರೆಯ ಕೃಷಿ ಯೋಗ್ಯ ಭೂಮಿ ಇರುವ ಕುಟುಂಬ 500 ರಷ್ಟು ಇಲ್ಲ. ಸರ್ಕಾರದ ಬಂಜರು ಭೂಮಿ ಯನ್ನು ದರಖಾಸ್ತು ಆಗಿ ಪಡೆದುಕೊಂಡು ಕಾಡುಗುಡ್ಡಗಳ ತಪ್ಪಲುಗಳಲ್ಲಿ ಬದುಕುವವರೇ ಜಾಸ್ತಿ ಇದ್ದಾರೆ.

ಇಂತಹ ಎಲ್ಲ ಪ್ರಶ್ನೆಗಳ ಬಗೆಗೆ ಗಂಭೀರವಾಗಿ ಚಿಂತಿಸುವ ಪಕ್ಷ ಅಭ್ಯರ್ಥಿ, ಯಾರೆಂದು, ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುವವರು ಯಾರೆಂದು ಯೋಚಿಸಿದರೆ ತತ್‌ಕ್ಷಣ ಹೊಳೆಯುವುದು ಸಿಪಿಐ(ಎಂ) ಅಭ್ಯರ್ಥಿ ಬಿ.ಮಾಧವ ಮಾತ್ರ. ಅವರನ್ನು ಗೆಲ್ಲಿಸಬೇಕಾದದ್ದು ದಕ್ಷಿಣ ಕನ್ನಡ ಕ್ಷೇತ್ರದ ಜನರ ಕರ್ತವ್ಯವಾಗಿದೆ.

ಮರಿ ಗೋಡ್ಸೆಗಳು...

ಪುಟ 3 ರಿಂದ

ಕರೆದುಕೊಳ್ಳುವ ಮಾಧ್ಯಮಗಳ ಪಾತ್ರವೂ ಭಿನ್ನವಿಲ್ಲ. ಟಿ.ವಿ.-9, ಈ ಟಿ.ವಿ ಮುಂತಾದ ಕನ್ನಡದ ಚಾನಲ್ ಒಳಗೊಂಡು ಹಲವು ಭಾಷಿಕ ಟಿ.ವಿ. ಚಾನಲ್‌ಗಳು 'ಎಲೆಕ್ಷನ್ ಎಕ್ಸ್‌ಪ್ರೆಸ್'ಗಳನ್ನು ಓಡಿಸುತ್ತಿವೆ. ಕ್ಷೇತ್ರದ ಪರಿಚಯ ಮಾಡಿಸುವುದು, ಅಲ್ಲಿನ ಆರ್ಥಿಕ, ಸಾಮಾಜಿಕ, ರಾಜಕೀಯ ಸಮಗ್ರ ನೋಟವಾಗಲೀ, ಕೇಂದ್ರ ಮಟ್ಟದಲ್ಲಿ ಬಗೆಹರಿಯಬೇಕಾದ ಪ್ರಮುಖ ಪ್ರಶ್ನೆಗಳನ್ನಾಗಲೀ ವಿಶ್ಲೇಷಿಸಿ-ಸಂಸದರ ಕಾರ್ಯವಿಧಾನ, ವೈಖರಿ, ಇತ್ಯಾದಿ ಪ್ರಸ್ತಾಪಿಸುವುದಿಲ್ಲ. ಜನರ ಪ್ರಶ್ನೆಗಳು ಎಂದು ಹೇಳುವಾಗಲೂ ನೀರು, ಚರಂಡಿ, ಮನೆ ಇಂತಹ ವಿಷಯಗಳನ್ನೇ ಅಲ್ಲಿ ತೋರಿಸಲಾಗುತ್ತಿದೆ. ನಿಜ ಇವ ನಮ್ಮ ಜನರ ಅಗತ್ಯ ಜ್ವಲಂತ ಪ್ರಶ್ನೆಗಳು. ಇದಕ್ಕೆ ರಾಜ್ಯ ಸರ್ಕಾರ, ಮುನಿಸಿಪಾಲಿಟಿ, ಕಾರ್ಪೋರೇಷನ್‌ಗಳ ಪಾತ್ರ ಹೆಚ್ಚಿದೆ. ಆದರೆ ಸಂಸತ್ತಿನಲ್ಲಿ ಚರ್ಚೆಯಾಗುವ ವಿಷಯದಲ್ಲಿ ಮೂಲ - ಮುಖ್ಯ ಪ್ರಶ್ನೆಗಳು ಮರೆಸುತ್ತಿರುವುದೇ ಅತೀ ಹೆಚ್ಚು. ಹೀಗಾದರೆ ಜಾತಿ-ಧರ್ಮಗಳು, ಹಣ, ಹೆಂಡ ಹಲವು ಆಮಿಷಗಳೇ ವಿಜೃಂಭಿಸದೇ ಇರಲು ಹೇಗೆ ಸಾಧ್ಯ. ರಾಜಕೀಯ ಜಾಗೃತಿ ಸಾಧ್ಯವಾಗುವುದಾದರೂ ಹೇಗೆ? ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕೇರಳ, ಪಶ್ಚಿಮ ಬಂಗಾಳ, ತ್ರಿಪುರ ರಾಜ್ಯಗಳಲ್ಲಿ ಎಡ ಶಕ್ತಿಗಳು ಪ್ರಬಲವಾಗಿರುವಲ್ಲಿ ಈ ಚಿತ್ರಣಕ್ಕಿಂತ ಭಿನ್ನ ಚಿತ್ರಣವಿರುವುದನ್ನು, ಇದೇ ಮಾಧ್ಯಮಗಳು ಹೇಳುತ್ತಿವೆಯಲ್ಲ. ಅಂದರೆ ಯಾರ ರಾಜಕೀಯ ಸಂಸತಿ, ಚಿಂತನೆಗಳು ಈ ದೇಶವನ್ನು ಉಳಿಸಬಲ್ಲದು? ಜನರನ್ನು ಪ್ರಜ್ಞಾವಂತರನ್ನಾಗಿಸಬಲ್ಲದು.... ಈ ಭಿನ್ನತೆಗಳನ್ನು ತುಲನಾತ್ಮಕವಾಗಿ ಪರಿಗಣಿಸಬೇಕು.

'ಕೃಷಿ, ಕೈಗಾರಿಕೆ ಬೆಳವಣಿಗೆ, ಸೌಹಾರ್ದತೆ ಸಂರಕ್ಷಣೆ ನಮ್ಮ ಆದ್ಯತೆ'

ಸಂದರ್ಶನದಲ್ಲಿ ಅಭ್ಯರ್ಥಿ ಬಿ.ಮಾಧವ

1. ಜಿಲ್ಲೆಯ ಅಭಿವೃದ್ಧಿಯ ವಿಷಯದಲ್ಲಿ ನಿಮ್ಮ ಆದ್ಯತೆ ಏನು?

ಜಿಲ್ಲೆಯ ದೀರ್ಘಕಾಲದ ಬೇಡಿಕೆಯಾದ ಮಂಗಳೂರು -ಬೆಂಗಳೂರು ಹಗಲು ರೈಲು, ಮಂಗಳೂರು ಮತ್ತು ಬೆಂಗಳೂರು ನಡುವೆ ಹಾಸನದ ಮೂಲಕ ಇನ್ನೊಂದು ರಾತ್ರಿ ರೈಲು, ಕಾಣಿಯೂರು- ಕಾಞಂಗಾಡು ನಡುವೆ ರೈಲು ಮಾರ್ಗ ಸಮೀಕ್ಷೆ ತ್ವರಿತವಾಗಿ ಪೂರ್ಣಗೊಳಿಸಿ ರೈಲು ಸಂಚಾರ ಆರಂಭಿಸುವುದು, ಕಡಲ ಕೊರೆತ ತಡೆಗೆ ವೈಜ್ಞಾನಿಕವಾಗಿ ಶಾಶ್ವತ ತಡೆಗೋಡೆ ನಿರ್ಮಿಸುವುದು, ಮಂಗಳೂರಿನ ಪಡೀಲಿನಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣ, ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕಾಗಿ ಹಾಗೂ ಜಿಲ್ಲೆಯ ಅಭಿವೃದ್ಧಿಗಾಗಿ ಉದ್ಯೋಗಾಧಾರಿತ ಕೈಗಾರಿಕೆಗಳ ಸ್ಥಾಪನೆ, ಬೀಡಿ ಕೈಗಾರಿಕೆಯ ರಕ್ಷಣೆಗಾಗಿ, ಧೂಮಪಾನ ನಿಷೇಧ ಕಾನೂನಿನಿಂದ ಬೀಡಿಗೆ ವಿನಾಯಿತಿ ನೀಡಲು ಕಾನೂನು ತಿದ್ದುಪಡಿ, ವಿಶೇಷ ಆರ್ಥಿಕ ವಲಯ ಕಾಯಿದೆ ಮತ್ತು ಭೂ ಸ್ವಾಧೀನ ಕಾಯಿದೆಗೆ ತಿದ್ದುಪಡಿ ತಂದು ರೈತರ ಕೃಷಿ ಭೂಮಿಯನ್ನು ಬಲವಂತವಾಗಿ ಸ್ವಾಧೀನ ಪಡಿಸುವು ದಕ್ಕೆ ಹಾಗೂ ರಿಯಲ್ ಎಸ್ಟೇಟ್ ದಂಧೆಗೆ ಅವಕಾಶ ಮಾಡಿಕೊಡುವುದಕ್ಕೆ ತಡೆ, ಇತ್ಯಾದಿ ತಕ್ಷಣದ ಆದ್ಯತೆಗಳು.

2.ನಿಮ್ಮ ಸ್ಪರ್ಧೆ ಬಿಜೆಪಿಗೆ ಅನುಕೂಲವಾಗುತ್ತದೆ ಎಂಬ ಮಾತು ಕೇಳಿ ಬರುತ್ತಿದೆಯಲ್ಲ?

ಇಂದಿನ ಪರಿಸ್ಥಿತಿಯಲ್ಲಿ ತೃತೀಯ ರಂಗಕ್ಕೆ ಮತ ನೀಡಿದರೆ ತೃತೀಯ ರಂಗ ಖಂಡಿತವಾಗಿ ಗೆಲ್ಲುತ್ತದೆ. ಕಾಂಗ್ರೆಸ್ ಬೇಡ, ಬಿಜೆಪಿ ಬೇಡ ಎಂಬ ಬಲವಾದ ಜನಾಭಿಪ್ರಾಯ ದೇಶದೆಲ್ಲೆಡೆ ಮೂಡಿ ಬರುತ್ತಿದೆ. ಕಾಂಗ್ರೆಸ್ಸಿನ ಸಾಮ್ರಾಜ್ಯಶಾಹಿ ಪರವಾದ ಹಾಗೂ ಜನವಿರೋಧಿ ಆಡಳಿತದಿಂದ ಜನರು ಜಿಗುಪ್ಸೆ ಗೊಂಡಿದ್ದಾರೆ. ಮಂಗಳೂರಿಗೆ ಕೆಟ್ಟ ಹೆಸರು ತಂದ ಮತ್ತು ಜಿಲ್ಲೆಯ ಸೌಹಾರ್ದ ವಾತಾವರಣವನ್ನು ಕೆಡಿಸಿದ ಬಿಜೆಪಿ ಮೇಲೆ ಜನರಿಗೆ ತಿರಸ್ಕಾರ ಭಾವನೆ ಇದೆ. ತೃತೀಯ ಪರ್ಯಾಯಕ್ಕಾಗಿ ಜನರು ಹಂಬಲಿಸುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಮೂಡಿ ಬಂದ ತೃತೀಯ ರಂಗವನ್ನು ಎಲ್ಲಾ ವಿಭಾಗದ ಜನರು ಬೆಂಬಲಿಸಿ ಗೆಲ್ಲಿಸುತ್ತಾರೆ ಎಂಬ ಭರವಸೆ ನನಗಿದೆ.

3. 19 ವರ್ಷಗಳ ಬಳಿಕ ಸಿಪಿಐ(ಎಂ) ಸ್ಪರ್ಧಿಸುತ್ತಿದೆ. ಸಿಪಿಐ(ಎಂ) ನಿರೀಕ್ಷೆ ಹೇಗಿದೆ?

ದೇಶಾದ್ಯಂತ ರಾಜಕೀಯ ಪರಿಸ್ಥಿತಿ ಬದಲಾಗಿರುವ ಸನ್ನಿವೇಶದಲ್ಲಿ ಈ ಕ್ಷೇತ್ರದಲ್ಲಿ ಸಿಪಿಐ(ಎಂ) ಗೆಲ್ಲುವ ಭರವಸೆಗಳು ದಿನದಿಂದ ದಿನಕ್ಕೆ ಹೆಚ್ಚು ಪ್ರಬಲವಾಗುತ್ತಿವೆ.



4. ನಿಮ್ಮ ಪಕ್ಷದ ಜನಪರ ಚಳುವಳಿ ನಿಮ್ಮ ಪರವಾದ ಮತಗಳಾಗಿ ಪರಿವರ್ತನೆ ಆಗಬಹುದೇ?

ನಮ್ಮ ಪಕ್ಷವು ಕಾರ್ಮಿಕರ, ರೈತರ, ಕೂಲಿಕಾರರು, ಮಹಿಳೆಯರ, ವಿದ್ಯಾರ್ಥಿ-ಯುವಜನರ, ದಲಿತರ, ಅಲ್ಪಸಂಖ್ಯಾತರ ಹಾಗೂ ಜನಸಾಮಾನ್ಯರ ಪ್ರಶ್ನೆಗಳನ್ನು ಎತ್ತಿಕೊಂಡು ನಿರಂತರವಾಗಿ ನಡೆಸುತ್ತಿರುವ ಚಳುವಳಿಗಳ ಕುರಿತು ಎಲ್ಲಾ ವಿಭಾಗಗಳ ಜನರಿಗೆ ಅಪಾರವಾದ ಗೌರವವಿದೆ. ಅವರ ಭಾವನೆಗಳನ್ನೂ, ಸಮಸ್ಯೆಗಳನ್ನೂ ಸಂಸತ್ತಿನಲ್ಲಿ ಪರಿಣಾಮಕಾರಿ ಯಾಗಿ ಬೆಂಬಲಿಸುವ ಅಭ್ಯರ್ಥಿಯನ್ನು ಆರಿಸಿ ಕಳುಹಿಸುವ ಆಕಾಂಕ್ಷೆ ಅವರಲ್ಲಿದೆ. ಖಂಡಿತ ವಾಗಿಯೂ ಈ ನಿಟ್ಟಿನಲ್ಲಿ ಸಿಪಿಐ(ಎಂ) ಅಭ್ಯರ್ಥಿಯೇ ಅವರ ಆಯ್ಕೆಯಾಗಿರುತ್ತದೆ ಎಂಬ ಭರವಸೆ ನನಗಿದೆ.

5. ಕಾಂಗ್ರೆಸ್ ಮತ್ತು ಬಿಜೆಪಿ ನಿಮ್ಮ ಪಕ್ಷ ಭಿನ್ನ ಹೇಗೆ?

ಆರ್ಥಿಕ ನೀತಿಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು. ಒಂದು ಮೃದು ಕೋಮುವಾದಿ, ಇನ್ನೊಂದು ಉಗ್ರ ಕೋಮುವಾದಿ. ಇವರೆಡಕ್ಕಿಂತ ಭಿನ್ನವಾಗಿ ಜಾತಿ, ಮತ ಬೇಧವಿಲ್ಲದೆ ಸಮಾಜದ ಎಲ್ಲಾ ಜನರಿಗೋಸ್ಕರ ದುಡಿಯುತ್ತಿರುವ ಪಕ್ಷ ಸಿಪಿಐ(ಎಂ). ಜಾತ್ಯಾತೀತತೆಯ ರಕ್ಷಣೆಗಾಗಿ ತಮ್ಮ ಪ್ರಾಣಗಳನ್ನೇ ಪಣವಾಗಿಟ್ಟು ಹೋರಾಡುತ್ತಿರುವ ಪಕ್ಷ ಸಿಪಿಐ(ಎಂ).

6. ಚುನಾವಣೆಯಲ್ಲಿ ಹಣ ಮತ್ತು ಜಾತಿ ಪ್ರಮುಖ ಪಾತ್ರ ವಹಿಸುತ್ತಿವೆ. ಹಾಗಿರುವಾಗ ಜಾತಿ, ಹಣ ಎರಡನ್ನೂ ಉಪಯೋಗಿಸದೆ ನೀವು ಚುನಾವಣೆಯನ್ನು ಹೇಗೆ ಎದುರಿಸುತ್ತೀರಿ?

ಹಣ ಬಲದಿಂದ ಜನರ ಪ್ರಜಾಪ್ರಭುತ್ವ ಬದ್ಧತೆಗಳನ್ನು ಬುಡಮೇಲು ಮಾಡುವ ಪ್ರಯತ್ನಗಳು ಶಾಶ್ವತವಾಗಿ ಯಶಸ್ವಿಯಾಗಲಾರದು. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾದ ಪ್ರಜ್ಞಾವಂತ ಮತದಾರರನ್ನು ಕೊಂಡುಕೊಳ್ಳಲು ಸಾಮ್ರಾಜ್ಯಶಾಹಿ ಗಳೂ ಸೇರಿದಂತೆ ವಿವಿಧ ಶಕ್ತಿಗಳು ಪದೇ ಪದೇ ಪ್ರಯತ್ನಿಸಿ ಸೋತಿವೆ. ಕರ್ನಾಟಕದ, ಅದರಲ್ಲೂ ವಿಶೇಷವಾಗಿ ದಕ್ಷಿಣ ಕನ್ನಡದ ಮತದಾರರು ಚಾರಿತ್ರಿಕ ತೀರ್ಮಾನವೊಂದನ್ನು ಕೈಗೊಳ್ಳಬೇಕಾದ ಇಂದಿನ ಸನ್ನಿವೇಶದಲ್ಲಿ ಹಣಬಲವನ್ನು ತಿರಸ್ಕರಿಸುವರೆಂಬ ಭರವಸೆ ನನ್ನದು. ಜಾತಿ ರಾಜಕೀಯವು ಅಸಮಾನತೆ ಯನ್ನು ಮರೆ ಮಾಚುವ ತಂತ್ರ. ತನ್ನ ಜಾತಿಯವರೆಂದು ಯಾವ ಶ್ರೀಮಂತನೂ ಬಡವರಿಗೆ ಸಹಾಯ ಮಾಡುವುದಿಲ್ಲ. ಈ ಪ್ರವೃತ್ತಿಗಿಂತ ಭಿನ್ನವಾಗಿ ಜಾತಿ ಆಧಾರಿತ ಕಸಬುಗಳನ್ನು ಮಾಡುವ ಶ್ರಮ ಜೀವಿಗಳನ್ನು ಕಾರ್ಮಿಕ ಸಂಘಟನೆಯಲ್ಲಿ ಒಟ್ಟಿಗೆ ತಂದು ಅವರ ನ್ಯಾಯಬದ್ಧ ಬೇಡಿಕೆಗಾಗಿ ಹೋರಾಡಿದ ಚರಿತ್ರೆ ಕಾರ್ಮಿಕ ಹಾಗೂ ಕಮ್ಯುನಿಸ್ಟ್ ಆಂದೋಲನದಲ್ಲಿ ತೊಡಗಿಕೊಂಡ ಅನುಭವ ನನಗಿದೆ. 1970ರ ದಶಕದಲ್ಲಿ ಉಡುಪಿ ಕೇಂದ್ರವಾಗಿಟ್ಟು ಅಸ್ತಿತ್ವಕ್ಕೆ ಬಂದ ದ.ಕ.ಜಿಲ್ಲಾ ಮೂರ್ತೆದಾರರ ಸಂಘದ ಸ್ಥಾಪಕ ಉಪಾಧ್ಯಕ್ಷನಾಗಿ, ಮೂರ್ತೆದಾರರು ಉತ್ಪಾದಿಸುವ ಶೇಂದಿಗೆ ಅಂದು ಸಿಗುತ್ತಿದ್ದ ಲೀಟರಿಗೆ 50 ಪೈಸೆಯ ಬದಲು 75 ಪೈಸೆ ಸಿಗಬೇಕೆಂದು ಒತ್ತಾಯಿಸಿ, ಅನೇಕ ದಬ್ಬಾಳಿಕೆಗಳನ್ನು ಎದುರಿಸಿ ಸುದೀರ್ಘ ಹೋರಾಟ ನಡೆಸಿದ ಅನುಭವ ನನ್ನದು. ಹಿರಿಯ ಸಿಪಿಐ(ಎಂ) ನಾಯಕ ದಿ.ಪಿ.ರಾಮಚಂದ್ರ ರಾಯರ ಮುತುವರ್ಜಿಯಲ್ಲಿ ಮಾತುಕತೆ ನಡೆದು ದಿ.ಕಟಪಾಡಿ ಮುದ್ದು ಸುವರ್ಣರ ಜೊತೆಗೆ ಒಪ್ಪಂದಕ್ಕೆ ಸಹಿ ಹಾಕುವುದರಲ್ಲಿ ಕೊನೆಗೊಂಡ ಈ ಹೋರಾಟವು ಒಂದು ಚಾರಿತ್ರಿಕ ಘಟನೆಯಾಗಿದೆ.

7. ಕೋಮು ದ್ವೇಷಪೀಡಿತ ಕರಾವಳಿಯಲ್ಲಿ ಸೌಹಾರ್ದತೆಯ ಬಗ್ಗೆ ಸಂದೇಶವನ್ನು ಹೇಗೆ ಕೊಂಡೊಯ್ಯುತ್ತೀರಿ?

ಕೋಮುದ್ವೇಷ ಮತ್ತು ಕೋಮು ಹಿಂಸೆಗಳಿಂದಾಗಿ ಕರಾವಳಿಯ ಜನರಲ್ಲಿ ಭಯ ಮತ್ತು ಅಭದ್ರತೆಯ ವಾತಾವರಣ ಸೃಷ್ಟಿಯಾಗಿದೆ. ಕೋಮು ಸೌಹಾರ್ದತೆಗಾಗಿ ಎಲ್ಲಾ ಅಡೆತಡೆಗಳನ್ನು ಎದುರಿಸಿ ಜನರ ಮಧ್ಯೆ ಕೆಲಸ ಮಾಡಿದವರು ನಾವು. ಜಾತ್ಯಾತೀತತೆಯ ರಕ್ಷಣೆಗಾಗಿ ನಾವು ನಡೆಸಿದ ನಿರಂತರ ಹೋರಾಟ ಗಳನ್ನು ಈ ಸಂದರ್ಭದಲ್ಲಿ ದಕ್ಷಿಣ ಕನ್ನಡದ ಜನತೆ ಖಂಡಿತ ವಾಗಿಯೂ ನೆನಪಿಸಿಕೊಳ್ಳುತ್ತಾರೆ.

ಕವಿತೆ

ಮುಳುಗಡೆಯ ಚಿತ್ರಗಳು...



ಸಾಯಲಿಚ್ಛಿಸದೆ
ಉಸಿರುಗಟ್ಟಿ ಒದ್ದಾಡಿ
ಕೈ ಹಿಡಿದೆತ್ತಿ ಬದುಕಿಸಿರೆಂದು
ಕೈಯ್ಯ ಚಾಚಿ ನಿಂತ ಮನೆಗಳು....
ಅಪ್ಪನ ಹೆಗಲ ಸುಕ್ಕುಗಳ
ಲೆಕ್ಕ ಹಾಕಿ ನೀಡಿದ ರೊಕ್ಕದಲ್ಲಿ
ಗೋದಲಿಯ ಸಗಣಿ ಬಳಿಯುವುದು
ತಪ್ಪಿತೆಂದು 80 ರ ಸ್ಪೀಡಿನಲ್ಲಿ
ಹೀರೋ ಹೊಂಡಾದೊಂದಿಗೆ
ಹೋದ ಮಗನಿನ್ನೂ ಬಂದಿಲ್ಲ...

ಮುಳುಗಡೆಯಾಗುವ ಭಯವಿದೆ
ನೆರೆಗೂದಲ ಅವ್ವನ ಕಣ್ಣರೆಪ್ಪೆಗಳಿಗೆ
ಮೂಲೆ ಸೇರಿದ ಅಪ್ಪನ ಕಣ್ಣುಗಳಲ್ಲಿ
ಬದುಕು ತೇಲಿಹೋದ ಬಿಂಬವಿದೆ...
ಹೊಸ ಬದುಕು
ಮಿರಿ ಮಿರಿ ಮಿಂಚುವ ರಸ್ತೆ
ದನ ಮೇಯದ ಹಸಿರು ಹುಲ್ಲು
ನಾರಿಯರು ಮುಡಿಯದ
ದೇವರ ಗುಡಿ ಸೇರದ
ಪರಿಮಳವಿರದ ಬಣ್ಣಬಣ್ಣದ ಹೂಗಳು
ಹಾದಿ ಬೀದಿಯ ತುಂಬಾ...

ಮನೆಯಂಗಳದಿ ರೊಟ್ಟಿ ಹಿಡಿದು
ಕುಳಿತ ಕೈಗಳಿಗೆ
"ಅಂಣಾ ಕೆಂಪು ಖಾರ"
"ಮಾವಾ ಇನ್ನೊಂದು ರೊಟ್ಟಿ"
ಮಾತುಗಳೆಲ್ಲ ಸ್ತಬ್ಧ
ನಿಯಮ ಅಘೋಷಿತ...
ಊರ ಹನುಮಪ್ಪ
"ಅಭಯಾಂಜನೇಯವಾಗಿದ್ದಾನೆ"
ಎಲ್ಲೆಂದರಲ್ಲಿ ದೀಪ ಹಚ್ಚುವಂತಿಲ್ಲ
ಎಣ್ಣೆ ಹಾಕುವಂತಿಲ್ಲ
ಅಡ್ಡಡ್ಡ ಬೀಳುವಂತಿಲ್ಲ
ನಿಲ್ಲಬೇಕು ಪೂಜಾರಿಗೆ ಹೆದರಿ

ಕೆಳಗೆ
ಮಿರ ಮಿರ ಮಿಂಚುವ
ಗ್ರಾನೈಟಿನ ನೆಲ ಹಾಸುಗೆಯಲ್ಲಿ
ನಮ್ಮ ರೂಪ
ನಮ್ಮನ್ನು ನೋಡಿ ನಕ್ಕ ಹಾಗೆ ಬಿಂಬ...

ಮೇಲೆ ಫ್ಯಾನು ತಿರುಗುವಂತಿಲ್ಲ
ತಿರುಗಿದರೆ "ಭಕ್ತಿಸೇವೆ" ಗೈದ
ತನ್ನ ಹೆಸರು ಕಾಣುವುದಿಲ್ಲವೆಂದು
ಸ್ವಿಚ್ಚು ತೆಗೆಸಿದ ಗೌಡಪ್ಪನಿಲ್ಲಿಲ್ಲ..

ಕೂಲಿಗಾಗಿ ಸಾಲು ಸಾಲಾಗಿ
ನಕ್ಕು ನಲಿಯುತ ಹೋಗುವ ಹಂಗಿಲ್ಲ
ದಾರಿಯ ಬದಿಯ ಲಕ್ಕಿ ಗಿಡದ
ಘಮಘಮದ ಮೊಗ್ಗು
ಮುಡಿಯುವಂತಿಲ್ಲ
ಊರ "ಟಂ ಟಂ" ಗಾಡಿಗಳು
ಅವರನ್ನು ತುಂಬಿಕೊಂಡು
'ಲೋಡು' ಇಳಿಸಿಬರುತ್ತವೆ...

ಬದುಕು
ಕೃಷ್ಣೆಯಲ್ಲಿ ತುಂಗೆಯಲ್ಲಿ
ಭದ್ರೆಯಲ್ಲಿ ಭೀಮೆಯಲ್ಲಿ
ಹೀಗೆ ಮುಳುಗಿ ಹೋಗುವುದೆಂದು ಗೊತ್ತಿದ್ದಿದ್ದರೆ
ಅವ್ವ ಜಲ್ಲಿಕಲ್ಲು ಹೊರುತ್ತಿರಲಿಲ್ಲ
ಅಪ್ಪ ಸೈಜುಕಲ್ಲು ಹೊಡೆಯುತ್ತಿರಲಿಲ್ಲ...

ಬದಲಾಗಿ ಕಾಲಕಾಲಕ್ಕೆ
ನನ್ನವರು ಹರಿಸಿದ ಬೆವರಿಗೆ
ಕಟ್ಟೆ ಕಟ್ಟಿ
ಹಸಿರು ಬೆಳೆಯುತ್ತಿದ್ದರು.

ಬಿ. ಶ್ರೀನಿವಾಸ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY
OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published
at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH